ಸಂಪುಟ: ೦೬/ ಸಂಚಿಕೆ: ೨೩೩/ಬುಧವಾರ ದಿನಾಂಕ: ೧೩-೧೧-೨೦೨೪/ ಪುಟ: ೬/ ಬೆಲೆ ೨-೦೦

ಸತ್ಯಕ್ಕೆ ಕಿರಣ ಸುಳ್ಳಿಗೆ ಕಿಡಿ

ಕಛೇರಿ ದೂರವಾಣಿ ಸಂಖ್ಯೆ 0831-3564491

# ಬೆಳಗಿನ ಸೂರ್ಯೋದಯ

ಕನ್ನಡ ಪ್ರಾದೇಶಿಕ ದಿನಪತ್ರಿಕೆ

ಬೆಳಗಾವಿ ▪ ಧಾರವಾಡ ▪ ಬಾಗಲಕೋಟ ▪ ವಿಜಯಪುರ ▪ ಗದಗ ▪ ಕೊಪ್ಪಳ ▪ ಹಾವೇರಿ ▪ ಕಾರವಾರ

ಸಂಪಾದಕರು : ಗುರುರಾಜ ಈರಪ್ಪಾ. ಕದಮ, Editor : GURURAJ IRAPPA. KADAM Cell : 9620099959

Volume : 06/ ISSUE : 233 / WENDESDAY Date : 13-11-2024/ RNI No. KARKAN/2019/77640/ Postal Reg No. PMG/KA/NK/BM/135/21-24 / POST AT Vantamury Colony Post Office / email : belaginasuryodaya@gmail.com / Page : 6 / Rs. 2.00

### ॥ ಸಪ್ತಋಷಿವಾಣಿ ॥

ಬದುಕಿನಲ್ಲಿ ಒಬ್ಬ ಗಂಡು /ಹೆಣ್ಣು ಮಕ್ಕಳ ಸಫಲತೆಯ ಹಿಂದೆ ಅವರ ವಯಸ್ಸಾದ ತಂದೆ ಮತ್ತು ತಾಯಿಯ ಯೌವ್ವನ, ತ್ಯಾಗದ ಪರಿಶ್ರಮ ಇರುತ್ತದೆ.

ಧಾರ್ಮಿಕ ಮಾರ್ಗದರ್ಶಕ
ಸಂತೋಷ ಆಚಾರ್ಯ, ಉಡುಪಿ

## ವಿಜೃಂಭಣೆಯಿಂದ ಜರುಗಿದ ರನ್ನಬೆಳಗಲಿ ಶ್ರೀ ಬಂದಲಕ್ಷ್ಮಿ ದೇವಿಯ 12ನೇ ವರ್ಷದ ಲಕ್ಷದೀಪೋತ್ಸವ



ಮಹಾಲಿಂಗಪುರ: ಸಮೀಪದ ರನ್ನಬೆಳಗಲಿ ಪಟ್ಟಣದ ಆದಿ ದೇವತೆ ಶ್ರೀ ಬಂದ ಲಕ್ಷ್ಮೀ ದೇವಿಯ 12 ನೇ ವರ್ಷದ ಲಕ್ಷದೀಪೋತ್ಸವ ಸಮಾರಂಭ ಅಹೋ ರಾತ್ರಿ ಸಹಸ್ರಾರು ಭಕ್ತರ ಭಕ್ತಿ ಭಾವಗಳ ಲಕ್ಷಾಂತರ ದೀಪಗಳ ಬೆಳಕಿನಲ್ಲಿ ವೈಭವದಿಂದ ಜರುಗಿತು. ಅಸಂಖ್ಯಾತ ಭಕ್ತ ಸಮೂಹ ಶ್ರೀದೇವಿಯ ವಿಶೇಷ ಪೂಜೆಯಲ್ಲಿ ಪಾಲ್ಗೊಂಡು ವಿಶೇಷವಾದ ಪ್ರಸಾದ ಸವಿದು, ಬೆಳಗಲಿನಾಡಿಗೆ ಹೊನ್ನ ಮಳೆ ಸುರಿಸಿದ ಶ್ರೀದೇವಿ ತಮ್ಮ ಕಷ್ಟಗಳೆಲ್ಲ ಕಳೆದು ಸೌಭಾಗ್ಯದ ಮಳೆ ಸುರಿಯಲೆಂದು ಭಕ್ತಿ ಭಾವ ದಿಂದ ನಮಸ್ಕರಿಸಿ ಜಯ ಘೋಷಗಳ ಜೊತೆಗೆ ರಂಗೋಲಿಯ ಚಿತ್ತಾರಗಳಲ್ಲಿ, ದೇವಸ್ಥಾನದ ಜಗಲಿಗಳ ಮೇಲೆ, ದೇವಸ್ಥಾನದ ಅಂಗಳಗಳಲ್ಲಿ ದೀಪ ಬೆಳಗಿಸಿ ಭಕ್ತಿಯ ಸುಧೆಯಲ್ಲಿ ಮಿಂದೆದ್ದರು. ಶ್ರೀ ಕ್ಷೇತ್ರದ ಶಕ್ತಿ ಮಂದಿರವಾದ ಶ್ರೀ ಬಂದ ಲಕ್ಷ್ಮೀ ದೇವಸ್ಥಾನಕ್ಕೆ ಭೇಟಿ ನೀಡಿ ಶ್ರೀ ದೇವಿಯ ದರ್ಶನ ಪಡೆದ ಮರೆಗುದ್ದಿ ಅಡಿವಿ ಸಿದ್ದೇಶ್ವರ ಮಠದ ಡಾ. ನಿರುಪಾದೀಶ್ವರ ಸ್ವಾಮಿಜಿ, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಬಂಡಿಗಣಿ ಮಠದ ಶ್ರೀ ಅನ್ನದಾನೇಶ್ವರ ಸ್ವಾಮಿಜಿ, ಬಾಗಲಕೋಟೆ ಜಿಲ್ಲಾಧಿಕಾರಿ ಕೆ. ಎಂ. ಜಾನಕಿ ಅವರಿಗೆ ದೇವಸ್ಥಾನದ ಕಮಿಟಿ ವತಿಯಿಂದ ಸನ್ಮಾನಿಲಾಯಿತು.

## ಲೋಕಾಯುಕ್ತ ಜನ ಸಂಪರ್ಕ ಸಭೆ ಮುಂದೂಡಿಕೆ

ಬೆಳಗಾವಿ : ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ತಾಲ್ಲೂಕು ಪಂಚಾಯತಿ ಸಭಾ ಭವನದಲ್ಲಿ ನ.13 ರಂದು ಬೆಳಗ್ಗೆ 11 ಗಂಟೆಯಿಂದ 2 ಗಂಟೆಯವರೆಗೆ ನಡೆಯಬೇಕಿದ್ದ ಹುಕ್ಕೇರಿ ತಾಲೂಕಿನ ಲೋಕಾಯುಕ್ತ ಜನ ಸಂಪರ್ಕ ಸಭೆಯನ್ನು ನ.27 ಕ್ಕೆ ಮುಂದೂಡಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿ ದೂರವಾಣಿ: 0831–2950756, 0831–2421922 ಸಂಖ್ಯೆಗೆ ಸಂಪರ್ಕಿಸಬಹುದಾಗಿದೆ ಎಂದು ಲೋಕಾಯುಕ್ತ ಪೊಲೀಸ್ ಅಧೀಕ್ಷಕರು ಪ್ರಕಟಣೆ ಯಲ್ಲಿ ತಿಳಸಿದ್ದಾರೆ.

## ನ.16 ರಂದು ಉದ್ಯೋಗ ಮೇಳ

ಬೆಳಗಾವಿ : ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ವತಿಯಿಂದ ನ.16 ಬೆಳಗ್ಗೆ 9.30 ರಿಂದ ಮದ್ಯಾಹ್ನ 2 ಗಂಟೆಯವರೆಗೆ ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿಮ ಎಸ್.ಕೆ ಪಬ್ಲಿಕ್ ಸ್ಕೂಲ್ ಆವರಣದಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ, ಐಟಿಐ, ಡಿಪ್ಲೋಮಾ, ಯಾವುದೇ ಪದವಿ ಅಭ್ಯರ್ಥಿಗಳಿಗಾಗಿ ಖಾಸಗಿ ಕಂಪನಿಗಳಿಂದ ಉದ್ಯೋಗ ಮೇಳವನ್ನು ಆಯೋಜಿಸಲಾದೆ. ಆಸಕ್ತ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು https://tinyurl.com/r3wwky4t ಆನ್‌ಲೈನ್ ಮೂಕಲ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದಾಗಿದೆ. ಅಭ್ಯರ್ಥಿಗಳಿಗೆ ಉದ್ಯೋಗಾವಕಾಶವು ಉಚಿತವಾಗಿದ್ದು, ಇನ್ನುಳಿದ ಯಾವುದೇ ಸೌಲಭ್ಯಗಳು ಇರುವುದಿಲ್ಲ.
ಹೆಚ್ಚಿನ ಮಾಹಿತಿಗಳಿಗಾಗಿ ದೂರವಾಣಿ: 7975856566 ಸಂಖ್ಯೆಗೆ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

# ಮೂರು ಕ್ಷೇತ್ರಗಳ ಉಪಚುನಾವಣೆ ಇಂದು ಮತದಾನ– ಸಕಲ ಸಿದ್ಧತೆ



ರಾಮನಗರ/ಹಾವೇರಿ/ಬಳ್ಳಾರಿ: ಚನ್ನಪಟ್ಟಣ, ಶಿಗ್ಗಾಂವ್, ಸಂಡೂರು ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಗೆ ಬುಧವಾರ ಮತದಾನ ನಡೆಯಲಿದೆ. ಬೆಳಗ್ಗೆ 7 ರಿಂದ ಸಂಜೆ 6 ಗಂಟೆಯವರೆಗೆ ವೋಟಿಂಗ್ ನಡೆಯಲಿದ್ದು, ಅಭ್ಯರ್ಥಿಗಳ ಭವಿಷ್ಯ ಮತಪೆಟ್ಟಿಗೆ ಸೇರಲಿದೆ.

ಶಾಂತಿಯುತ ಮತದಾನಕ್ಕೆ ಮೂರು ಕ್ಷೇತ್ರಗಳಲ್ಲಿ ಜಿಲ್ಲಾಡಳಿತ ಸಕಲ ಸಿದ್ಧತೆ ಜೊತೆಗೆ ಸೂಕ್ತ ಬಂದೋಬಸ್ತ್ ಕೈಗೊಂಡಿದೆ. ಮತ ಪೆಟ್ಟಿಗೆಗಳು ಹಾಗೂ ಚುನಾವಣಾ ಸಾಮಗ್ರಿಯನ್ನು ವಿತರಿಸುವ ಪ್ರಮುಖ ಘಟ್ಟವಾಗಿರುವ ಮಸ್ಟರಿಂಗ್ ಕಾರ್ಯ ಮಂಗಳವಾರ ಅಚ್ಚುಕಟ್ಟಾಗಿ ನಡೆಯಿತು. ಬಳಿಕ ಎಲ್ಲ ಚುನಾವಣಾ ಸಿಬ್ಬಂದಿ ಮತಗಟ್ಟೆಗಳತ್ತ ತೆರಳಿದ್ದಾರೆ.

ಚನ್ನಪಟ್ಟಣ ವಿಧಾನಸಭಾ ಕ್ಷೇತ್ರ: ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದಲ್ಲಿ ಪ್ರಮುಖವಾಗಿ ಕಾಂಗ್ರೆಸ್‌ನಿಂದ ಸಿ.ಪಿ.ಯೋಗೇಶ್ವರ ಮತ್ತು ಎನ್‌ಡಿಎ ಅಭ್ಯರ್ಥಿಯಾಗಿ ನಿಖಿಲ್ ಕುಮಾರಸ್ವಾಮಿ ಮಧ್ಯೆ ನೇರ ಪೈಪೋಟಿ ಏರ್ಪಟ್ಟಿದೆ. ಈ ಕ್ಷೇತ್ರ ವ್ಯಾಪ್ತಿಯಲ್ಲಿ 276 ಮತಗಟ್ಟೆಗಳಿದ್ದು, ಅದರಲ್ಲಿ 62 ನಗರ ವ್ಯಾಪ್ತಿ ಹಾಗೂ 214 ಗ್ರಾಮಾಂತರ ಪ್ರದೇಶದಲ್ಲಿ ಸ್ಥಾಪಿಸಲಾಗಿದೆ.

ಚನ್ನಪಟ್ಟಣ ಕ್ಷೇತ್ರದಲ್ಲಿ ಒಟ್ಟು 2,32,949 ಮತದಾರರಿದ್ದು, ಅವರಲ್ಲಿ 1,12,324 ಪುರುಷ ಹಾಗೂ 1,20,617 ಮಹಿಳಾ ಮತದಾರರಿದ್ದಾರೆ. 8 ಜನ ತೃತೀಯ ಲಿಂಗಿಗಳಿದ್ದಾರೆ. 85 ವರ್ಷಕ್ಕೂ ಮೇಲ್ಪಟ್ಟ ಒಟ್ಟು 1,613 ಮತದಾರರಲ್ಲಿ 612 ಪುರುಷರು ಹಾಗೂ 1,001 ಮಹಿಳೆಯರಿದ್ದಾರೆ. 3,011 ಜನ ದಿವ್ಯಾಂಗರಲ್ಲಿ 1,669 ಪುರುಷ ಹಾಗೂ 1,342 ಮಹಿಳಾ ಮತದಾರರಿದ್ದಾರೆ. ಇನ್ನು 8,338 ಯುವ ಮತದಾರರಿದ್ದಾರೆ. ಜೊತೆಗೆ 47 ಸೇವಾ ಮತದಾರರು ಮತಹಕ್ಕು ಹೊಂದಿದ್ದಾರೆ.

ಶಿಗ್ಗಾಂವಿ ವಿಧಾನಸಭಾ ಕ್ಷೇತ್ರ: ಶಿಗ್ಗಾಂವಿ ಕ್ಷೇತ್ರದಲ್ಲಿ ಎನ್‌ಡಿಎ ಅಭ್ಯರ್ಥಿಯಾಗಿ ಭರತ್ ಬೊಮ್ಮಾಯಿ ಮತ್ತು ಕಾಂಗ್ರೆಸ್‌ನಿಂದ ಯಾಸೀರ್ ಖಾನ್ ಪಠಾಣ್ ನಡುವೆ ನೇರ ಹಣಾಹಣಿ ಇದೆ. ಕ್ಷೇತ್ರದ ಒಟ್ಟು ಮತದಾರರ ಸಂಖ್ಯೆ– ಕ್ಷೇತ್ರದಲ್ಲಿ ಒಟ್ಟು 2,37,525 ಮತದಾರರಿದ್ದು, ಈ ಪೈಕಿ 1,21,443 ಪುರುಷರು ಮತ್ತು 1,16,076 ಮಹಿಳೆಯರು ಹಾಗೂ ಇತರ 6 ಮತದಾರರಿದ್ದಾರೆ. ಕ್ಷೇತ್ರದ ಒಟ್ಟು 241 ಮತಗಟ್ಟೆಗಳಿದ್ದು, ಇದರಲ್ಲಿ 92 ಸೂಕ್ಷ್ಮ ಮತ್ತು 141 ಸಾಮಾನ್ಯ ಮತಟ್ಟೆಗಳಿವೆ.

ಭದ್ರತೆ ವಿವರ: ಎಸ್‌ಪಿ, ಎಎಸ್‌ಪಿ, 4 ಡಿವೈಎಸ್‌ಪಿ, 12 ಸಿಪಿಐ, 24 ಪಿಎಸ್‌ಐ, 68 ಎಎಸ್‌ಐ, ಸೇರಿ 716 ಪೊಲೀಸ್ ಸಿಬ್ಬಂದಿ ಜೊತೆಗೆ 4 ಕೆಎಸ್‌ಆರ್‌ಪಿ ಮತ್ತು ಡಿಆರ್ ತುಕಡಿಗಳನ್ನು ಭದ್ರತೆಗೆ ನಿಯೋಜಿಸಲಾಗಿದೆ.

ಸಂಡೂರು ವಿಧಾನಸಭಾ ಕ್ಷೇತ್ರ: ಸಂಡೂರು ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಅನ್ನಪೂರ್ಣ ತುಕಾರಾಂ ಮತ್ತು ಎನ್‌ಡಿಎ ಅಭ್ಯರ್ಥಿಯಾಗಿ ಬಂಗಾರು ಹನುಮಂತು ಕಣದಲ್ಲಿದ್ದಾರೆ. ಇಲ್ಲಿ ಒಟ್ಟು 253 ಮತಗಟ್ಟೆಗಳನ್ನು ಸ್ಥಾಪಿಸಲಾಗಿದ್ದು, 1,215 ಅಧಿಕಾರಿ ಮತ್ತು ಸಿಬ್ಬಂದಿ ನಿಯೋಜಿಸಲಾಗಿದೆ. ಈ ಕ್ಷೇತ್ರ ವ್ಯಾಪ್ತಿಯಲ್ಲಿ ಒಟ್ಟು 2,36,100 ಮತದಾರರಿದ್ದಾರೆ. ಈ ಪೈಕಿ 1,17,789 ಪುರುಷ ಮತ್ತು 1,18,282 ಮಹಿಳೆ ಹಾಗೂ 29 ತೃತೀಯ ಲಿಂಗಿ ಮತದಾರರು ಇದ್ದಾರೆ.

**ವೇತನ ಸಹಿತ ರಜೆ:** ಎಲ್ಲ ರಾಜ್ಯ ಸರ್ಕಾರಿ ಕಚೇರಿಗಳಿಗೆ, ಶಾಲಾ ಕಾಲೇಜುಗಳಿಗೆ (ಅನುದಾನಿತ ಶಿಕ್ಷಣ ಸಂಸ್ಥೆಗಳು ಒಳಗೊಂಡಂತೆ) ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳು, ಜೀವ ವಿಮಾ ನಿಗಮ, ಹಣಕಾಸು ಸಂಸ್ಥೆಗಳು ಹಾಗೂ ಇನ್ನಿತರ ಉದ್ಯಮ ಸಂಸ್ಥೆಗಳಲ್ಲಿ ಖಾಯಂ ಆಗಿ ಅಥವಾ ದಿನಗೂಲಿ ಮೇಲೆ ಕೆಲಸ ನಿರ್ವಹಿಸುತ್ತಿರುವ ಎಲ್ಲ ಅರ್ಹ ಮತದಾರರಿಗೆ ಸೀಮಿತವಾದಂತೆ ಹಾಗೂ ಮತದಾನ ಮಾಡಲು ಅನುಕೂಲವಾಗುವಂತೆ ಒಂದು ದಿನದ ವೇತನ ಸಹಿತ ರಜೆ ಮಂಜೂರು ಮಾಡಲು ಸರ್ಕಾರ ಅಧಿಸೂಚನೆ ಹೊರಡಿಸಿದೆ.

# ಆದಿವಾಸಿ- ಅರಣ್ಯವಾಸಿಗಳ ಅಭಿವೃದ್ಧಿ ನಿಗಮ ಸ್ಥಾಪನೆಗೆ ಕ್ರಮ : ಮುಖ್ಯಮಂತ್ರಿ



ಮೈಸೂರು : ಆದಿವಾಸಿ / ಅರಣ್ಯವಾಸಿಗಳ ಅಭಿವೃದ್ಧಿ ನಿಗಮ ಸ್ಥಾಪನೆ ಕುರಿತಾಗಿ ಸದ್ಯದಲ್ಲೇ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ವನ್ಯ ಜೀವಿ ಮಂಡಳಿ ಸಭೆ ಕರೆದು ಅರಣ್ಯಾಧಿಕಾರಿಗಳಿಂದ ಅರಣ್ಯವಾಸಿಗಳಿಗೆ ಆಗುತ್ತಿರುವ ಸಮಸ್ಯೆಗಳ ಕುರಿತಾಗಿ ಚರ್ಚಿಸಿ, ಪರಿಹಾರ ಕಂಡುಕೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭರವಸೆ ನೀಡಿದರು.

ಕೆರೆಹಾಡಿಗೆ ಭೇಟಿ ನೀಡಿ ಅರಣ್ಯವಾಸಿಗಳ ಬಾಯಿಂದಲೇ ಸಮಸ್ಯೆಗಳನ್ನು ಆಲಿಸಿ, ಸ್ಥಳದಲ್ಲಿದ್ದ ಅಧಿಕಾರಿಗಳಿಂದಲೂ ಮಾಹಿತಿ ಪಡೆದು, ಕೆಲವು ಸಮಸ್ಯೆಗೆ ಸ್ಥಳದಲ್ಲೇ ಪರಿಹಾರ ಸೂಚಿಸಿ, ಸಂಕೀರ್ಣವಾಗಿದ್ದ ಸಮಸ್ಯೆಗಳ ಕುರಿತಾಗಿ ವನ್ಯಜೀವಿ ಮಂಡಳಿಯಲ್ಲಿ ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಹೇಳಿದರು.

ತಕ್ಷಣ ಕರೆಂಟು–ನೀರು ಒದಗಿಸಿ : ಹಲವು ದಶಕಗಳಿಂದ ಕೆರೆಹಾಡಿ ಸೇರಿದಂತೆ ಒಂಬತ್ತು ಹಾಡಿಗಳಿಗೆ ಕರೆಂಟಿಲ್ಲ, ಕುಡಿಯುವ ನೀರಿಗೆ ಸಮಸ್ಯೆ ಇದೆ ಎನ್ನುವ ಆದಿವಾಸಿಗಳ ಮಾತು ಕೇಳಿ ಗರಂ ಆದ ಸಿಎಂ, ಯಾವ ಅರಣ್ಯ ಕಾಯ್ದೆ ಕೂಡ ಅರಣ್ಯವಾಸಿಗಳಿಗೆ ಕರೆಂಟು, ನೀರು ಕೊಡಬೇಡಿ ಎಂದು ಹೇಳುವುದಿಲ್ಲ. ಅರಣ್ಯಾಧಿಕಾರಿಗಳು ಅನಗತ್ಯ ಕಿರುಕುಳ, ತೊಂದರೆ ಕೊಡಬೇಡಿ ಎಂದು ಸ್ಪಷ್ಟ ಸೂಚನೆ ನೀಡಿದರು.

ಒಂದು ತಿಂಗಳಲ್ಲಿ ಕರೆಂಟು, ನೀರು : ಆದಿವಾಸಿ ಗಣೇಶ, ರಮೇಶ ಎನ್ನುವವರ ಹಟ್ಟಿಯಲ್ಲೇ ನೆಲದ ಮೇಲೆ ಕುಳಿತು ಆದಿವಾಸಿಗಳ ಸಮ್ಮುಖದಲ್ಲೇ ಮುಖ್ಯಮಂತ್ರಿಗಳು ಸಮಸ್ಯೆ ಆಲಿಸಿ, ಅರಣ್ಯಾಧಿಕಾರಿಗಳು ಮತ್ತು ಸಂಬಂಧಪಟ್ಟ ಇತರ ಇಲಾಖೆಗಳ ಮುಖ್ಯಸ್ಥರ ಜೊತೆ ಚರ್ಚಿಸಿದರು.

ಕೊನೆಗೆ ಜಿಲ್ಲಾಧಿಕಾರಿ ಲಕ್ಷ್ಮಿಕಾಂತ್ ರೆಡ್ಡಿಯವರು, "ಎಲ್ಲ ಅಡೆತಡೆಗಳನ್ನು ನಿವಾರಿಸಿ ಒಂದು ತಿಂಗಳಲ್ಲಿ ಕೆರೆಹಾಡಿ ಮತ್ತು ಇತರ ಎಂಟು ಹಾಡಿಗಳಿಗೆ ಕುಡಿಯುವ ನೀರು ಮತ್ತು ವಿದ್ಯುತ್ ಸಂಪರ್ಕದ ಸಮಸ್ಯೆ ಬಗೆಹರಿಸುತ್ತೇನೆ" ಎಂದು ಮುಖ್ಯಮಂತ್ರಿಗಳಿಗೆ ತಿಳಿಸಿದರು.

ವನ್ಯಜೀವಿ ಮಂಡಳಿ ಸಭೆ ಕರೆದು ಕೂಲಂಕಷವಾಗಿ ಚರ್ಚಿಸಿ ಸೂಕ್ತ ತೀರ್ಮಾನ : ಹಕ್ಕುಪತ್ರ ಇದ್ದರೂ ಅರಣ್ಯಾಧಿಕಾರಿಗಳು ಮನೆ ಕಟ್ಟಲು ಬಿಡುತ್ತಿಲ್ಲ, ಎರಡು–ಮೂರು ಎಕರೆ ಜಾಗದಲ್ಲಿ ಹಲವಾರು ದಶಕಗಳಿಂದ ಉಳುಮೆ ಮಾಡುತ್ತಿದ್ದರೂ ಕೇವಲ 2,3 ಗುಂಟೆಗೆ ಹಕ್ಕು ಪತ್ರ ನೀಡಿದ್ದಾರೆ. ನಮ್ಮ ಜಮೀನಿನಲ್ಲಿ ಟ್ರ್ಯಾಕ್ಟರ್ ಬಳಸಲು ಅವಕಾಶ ನೀಡುತ್ತಿಲ್ಲ ಎನ್ನುವುದೂ ಸೇರಿದಂತೆ ಸಾಲು ಸಾಲು ಸಮಸ್ಯೆಗಳನ್ನು ಹೇಳಿಕೊಂಡ ಆದಿವಾಸಿ ವೆಂಕಟೇಶ್, ನರಸಿಂಹ, ಭಾಗ್ಯಮ್ಮ ಮುಂತಾದವರ ಮಾತು ಕೇಳಿದ ಸಿಎಂ, ಈ ಬಗ್ಗೆ ಅಧಿಕಾರಿಗಳಿಂದ ಸ್ಪಷ್ಟನೆ ಪಡೆದರು.

ಸಮಸ್ಯೆ ಜಟಿಲ ಆಗಿದೆ ಎನ್ನುವುದನ್ನ ಅರಿತ ಸಿಎಂ, ಆದಿವಾಸಿಗಳು ಅಂದರೆ ಅವರು ಅರಣ್ಯದ ಭಾಗವೇ ಆಗಿದ್ದಾರೆ. ಇವರಿಂದ ಅರಣ್ಯಕ್ಕೆ ಯಾವುದೇ ತೊಂದರೆ ಆಗುವುದಿಲ್ಲ. ಆದ್ದರಿಂದ ಇವರಿಗೆ ಅನಗತ್ಯ ತೊಂದರೆ ಕೊಡಬಾರದು ಎಂದು ತಾಕೀತು ಮಾಡಿದರು.

ಬಳಿಕ, ವನ್ಯಜೀವಿ ಮಂಡಳಿಗೆ ನಾನೇ ಅಧ್ಯಕ್ಷ ಆಗಿದ್ದೀನಿ. ಸದ್ಯದಲ್ಲೇ ಮಂಡಳಿ ಸಭೆ ಕರೆದು ನೀವು ಹೇಳಿದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಪ್ರತ್ಯೇಕ ಆದಿವಾಸಿ ನಿಗಮ : ನಾವು ಅಲೆಮಾರಿಗಳಲ್ಲ. ಊರ ನಾಯಕರೂ ಅಲ್ಲ. ನಾವು ಕಾಡಲ್ಲಿ ಒಂದೇ ಕಡೆ ನೆಲೆಸಿರುವ ಆದಿವಾಸಿಗಳು. ಆದ್ದರಿಂದ ಅಲೆಮಾರಿ ಅಭಿವೃದ್ಧಿ ನಿಗಮದಲ್ಲಿ ನಮ್ಮನ್ನು ಸೇರಿಸಬೇಡಿ. ನಮಗೆ ಪ್ರತ್ಯೇಕವಾದ ಆದಿವಾಸಿ ಅಭಿವೃದ್ಧಿ ನಿಗಮ ಸ್ಥಾಪಿಸಿ ಎನ್ನುವ ಬೇಡಿಕೆಗೆ ಪ್ರತಿಕ್ರಿಯಿಸಿದ ಸಿಎಂ, ಪ್ರತ್ಯೇಕ ಆದಿವಾಸಿ ನಿಗಮ ಸ್ಥಾಪನೆ ಬಗ್ಗೆ ಕ್ರಮ ವಹಿಸುವುದಾಗಿ ಭರವಸೆ ನೀಡಿದರು.


**ಮೊದಲ ಮುಖ್ಯಮಂತ್ರಿ ನೀವು** : ಆರೇಳು ತಲೆಮಾರುಗಳಿಂದ ನಾವಿಲ್ಲೇ ನೆಲೆಸಿದ್ದೇವೆ. ಆದಿವಾಸಿಗಳ ಹಾಡಿಗೆ ಬಂದ ಮೊದಲ ಮುಖ್ಯಮಂತ್ರಿ ನೀವೇ ಎಂದು ಆದಿವಾಸಿಗಳು ಕುಣಿದು ಸಂಭ್ರಮಿಸಿದರು.

ಬಣ್ಣ ಹಚ್ಚಿ ಕುಣ್ಕೊತಾ ಇರ್ಬೇಡಿ, ಚೆನ್ನಾಗಿ ಓದಿ : ಆದಿವಾಸಿ ಮಕ್ಕಳೊಂದಿಗೆ ಸಂವಾದ ನಡೆಸಿದ ಮುಖ್ಯಮಂತ್ರಿಗಳು, ನಮ್ಮಪ್ಪ ಕೂಡ ಜನಪದ ಡ್ಯಾನ್ಸ್ ಕಲಿಯೋಕೆ ನನ್ನನ್ನು ಹಾಕ್ಬಿಟ್ಟಿದ್ದರು.

ನಾನು ಹಠತೊಟ್ಟು ಕಾನೂನು ಪದವಿ ಮಾಡಿದ್ದಕ್ಕೆ ಇಂದು ಮುಖ್ಯಮಂತ್ರಿ ಆಗುವ ಮಟ್ಟಕ್ಕೆ ಬೆಳೆದೆ. ನೀವೂ ಕೂಡ ಅರ್ಧಕ್ಕೇ ಶಾಲೆ ನಿಲ್ಲಿಸದೆ ಶಿಕ್ಷಣ ಪಡೆಯಬೇಕು. ಆಗ ಮಾತ್ರ ಮುಖ್ಯವಾಹಿನಿಗೆ ಬರಲು ಸಾಧ್ಯವಾಗುತ್ತದೆ ಎಂದರು.

# ಒಂದು ವಾರದೊಳಗೆ ವಕ್ಫ್ ಹೆಸರು ಅಳಿಸದಿದ್ದಲ್ಲಿ ತಹಶೀಲ್ದಾರ ಕಚೇರಿಗೆ ಬೀಗ-ಶಿವಶಂಕರ ಶ್ರೀ

## ವಕ್ಫ್ ಆಸ್ತಿ ವಿರೋಧಿಸಿ ಸಾವಿರಾರು ಜನರಿಂದ ಪ್ರತಿಭಟನೆ




ರಬಕವಿ–ಬನಹಟ್ಟಿ,ನ12: ಹೊಸೂರಿನಲ್ಲಿ 1.39 ಎಕರೆಯಷ್ಟು ಹಿಂದೂ ರುದ್ರಭೂಮಿಯನ್ನು ಮುಸ್ಲಿಂ ಸುನ್ನಿ ವಕ್ಫ್ ಬೋರ್ಡ್ ಹೆಸರಿಗೆ ಸೇರಿಸಿದ್ದನ್ನು ವಿರೋಧಿಸಿ ಹೊಸೂರಿನ ಹಿಂದೂ ಸಮಸ್ತ ಸಮಾಜ ಬಾಂಧವರ ಸಾವಿರಾರು ಸಂಖ್ಯೆಯಲ್ಲಿ ಜನರು ಪ್ರತಿಭಟನಾ ರ‍್ಯಾಲಿ ನಡೆಸಿ ತಹಶೀಲ್ದಾರ ಕಚೇರಿಗೆ ಮುತ್ತಿಗೆ ಹಾಕುವಲ್ಲಿ ಕಾರಣವಾಯಿತು.

ಇದೇ ಸಂದರ್ಭ ತಹಶೀಲ್ದಾರಿ ಗಿರೀಶ ಸ್ವಾಸದಿಯವರಿಗೆ ಮನವಿ ಸಲ್ಲಿಸಿದ ಹಳೇ ಹುಬ್ಬಳ್ಳಿಯ ವೀರಭಿಕ್ಷಾವ್ರತಿ ಮಠದ ಶಿವಶಂಕರ ಶ್ರೀಗಳು ಮಾತನಾಡಿ, ಒಂದು ವಾರದೊಳಗಾಗಿ ವಕ್ಫ್ ಆಸ್ತಿಯೆಂದು ನಮೂದಾಗಿರುವ ಹಿಂದೂ ರುದ್ರಭೂಮಿಗೆ ಮರು ಹೆಸರು ಸೇರ್ಪಡೆಗೊಳ್ಳದಿದ್ದರೆ ಕಚೇರಿಗೆ ಕೀಲಿ ಜಡಿದು ಉಗ್ರ ಪ್ರತಿಭಟನೆ ನಡೆಸಲಾಗುವದೆಂದು ಹೇಳಿದರು.

ಸನಾತನ ಧರ್ಮವನ್ನು ಸರ್ಕಾರ ಹಾಗು ಅಧಿಕಾರಿಗಳು ಅರ್ಥಮಾಡಿಕೊಳ್ಳಬೇಕು. ಕೋವಿಡ್ ಸಂದರ್ಭ ಯಾರೂ ಹೊರಬಾರದ ಸನ್ನಿವೇಶ ನೋಡಿಕೊಂಡು ಇಂತಹ ಕೃತ್ಯಕ್ಕೆ ಕೈ ಹಾಕಿರುವದನ್ನು ತೀವ್ರ ಖಂಡಿಸಲಾಗುವದು. ಅಯೋಧ್ಯೆ, ಕಾಶಿ, ಸೋಮನಾಥ ದೇವಾಲಯ ನಂತರ ಇದೀಗ ಸ್ಮಶಾನಗಳಿಗೂ ಕೈ ಹಾಕಿರುವ ಒಂದು ಸಮುದಾಯವು ಮುಂದಿನ ದಿನಗಳಲ್ಲಿ ಮಠ ಹಾಗು ಖಾಸಗಿ ಮನೆಗಳ ಮೇಲೂ ವಕ್ಫ್ ಹೆಸರು ನಮೂದಾಗುವ ಆತಂಕದಲ್ಲಿದ್ದು, ರುದ್ರಭೂಮಿ ಉಳಿವಿಗಾಗಿ ಹೋರಾಟ ನಡೆಯುತ್ತಿರುವದು ಇದೇ ಪ್ರಥಮ. ಇದು ಹಿಂದೂ ಜನತೆಗೆ ಮಾಡಿದ ಅಪಮಾನವೆಂದು ಖಂಡಿಸಿದರು.

ದೇಶವು ಸಂವಿಧಾನ ಅಧಾರದಿಂದ ನಡೆಯುತ್ತೆ ಹೊರತು ಇಂತಹ ಜನರಿಗೆ ಮಾರಕವಾದ ವಕ್ಫ್‌ನಿಂದಲ್ಲ. ಈ ಕೃತ್ಯದಲ್ಲಿ ಭಾಗಿಯಾಗಿರುವ ಎಲ್ಲ ಅಧಿಕಾರಿಗಳನ್ನು ತನಿಖೆ ನಡೆಸಿ ವಜಾಗೊಳಿಸಬೇಕೆಂದು ಆಗ್ರಹಿಸಿದರು.

ನ್ಯಾಯವಾದಿ ವೆಂಕಟೇಶ ನಿಂಗಸಾನಿ ಮಾತನಾಡಿ, ಹೊಸೂರಿನ ಸರ್ವೆ ನಂ.64 ರಲ್ಲಿನ ಹಿಂದೂ ರುದ್ರಭೂಮಿಯಲ್ಲಿ ಹಲವು ತಲೆಮಾರುಗಳಿಂದ 17 ಸಮಾಜದ ಅಂತ್ಯಕ್ರಿಯೆಗಳು ನಡೆಯುತ್ತಿವೆ. ದಿಢೀರನೆ ಇಂತಹ ದುಸ್ಸಾಹಸಕ್ಕೆ ಕೈ ಹಾಕಿರುವದು ಸರಿಯಲ್ಲ. ಸ್ಥಾನಿಕ ಚೌಕಾಶಿ ಹಾಗು ಸಾರ್ವಜನಿಕರ ಮಾಹಿತಿ ನೀಡದೆ ಮನಬಂದಂತೆ ಕಾರ್ಯ ನಡೆಸಿರುವ ಅಧಿಕಾರಿಗಳಿಗೆ ತಕ್ಕ ಶಿಕ್ಷೆಯಾಗಬೇಕು. ಮರಳಿ ಉತಾರೆಯಲ್ಲಿ ಹಿಂದು ರುದ್ರಭೂಮಿಯೆಂದು ನಮೂದಾಗಬೇಕೆಂದರು. ಇದಕ್ಕೂ ಪೂರ್ವ ಹೊಸೂರಿನ ಮಲ್ಲಿಕಾರ್ಜುನ ದೇವಸ್ಥಾನದಿಂದ 3 ಕಿ.ಮೀ.ವರೆಗೆ ಹಲಗೆ, ತಮಟೆ ಮೂಲಕ ತಹಶೀಲ್ದಾರ ಕಚೇರಿವರೆಗೆ ಮಹಿಳೆರೂ ಸೇರಿದಂತೆ ಬೃಹತ್ ಪ್ರತಿಭಟನೆ ನಡೆಯಿತು.

ಪರಮಾನಂದ ಶ್ರೀಗಳು, ನಗರ ಯೋಜನಾ ಪ್ರಾಧಿಕಾರ ಅಧ್ಯಕ್ಷ ವೆಂಕನಗೌಡ ಪಾಟೀಲ, ಸ್ಥಾಯಿ ಸಮಿತಿ ಚೇರಮನ್ ಅರುಣ ಬುದ್ನಿ, ಶಂಕರಪ್ಪ ಭುಜರಕ, ಸುಭಾಸ ಚೋಳಿ, ಮಂಜು ಲೆಂಡಿ, ಬಾಲಚಂದ್ರ ಪಾಟೀಲ, ಶ್ರೀಶೈಲ ಮೇಣಿ, ಸತ್ಯಪ್ಪ ಮಗದುಮ್ ಸೇರಿದಂತೆ ಗ್ರಾಮಸ್ಥರೆಲ್ಲರೂ ಭಾಗಿಯಾಗಿದ್ದರು.

## ತಂಬಾಕು ಮುಕ್ತ ಯುವ ಅಭಿಯಾನದಡಿಯಲ್ಲಿ 2.0 ತಂಬಾಕು ಮುಕ್ತ ಗ್ರಾಮ ಸಭೆ

**ಬೆಳಗಾವಿ** : ವಿಶ್ವದಲ್ಲಿ ಸಾಂಕ್ರಾಮಿಕ ಮತ್ತು ಅಸಾಂಕ್ರಾಮಿಕ ರೋಗಗಳು ಮತ್ತು ಸಾವಿಗೆ ತಂಬಾಕು ಪ್ರಮುಖ ಕಾರಣಗಳಲ್ಲಿ ಒಂದಾಗಿದೆ. ಸುಮಾರು 1.35 ಮಿಲಿನ್ ಸಾವುಗಳು ತಂಬಾಕು ಸೇವನೆಯಿಂದ ಉಂಟಾಗುತ್ತಾ ಇದೆ. ಹದಿಹರೆಯದ ವಯಸ್ಸಿನ ಯುವಕರಲ್ಲಿ ತಂಬಾಕು ಸೇವನೆ ಮಾಡುವ ಪ್ರಮಾಣ ಅತೀ ಹೆಚ್ಚುತ್ತಿರುವದ್ದು, ಆತಂಕಾರಿ ವಿಷಯವಾಗಿದೆ ಎಂದು ಜಿಲ್ಲಾ ಸಮೀಕ್ಷಣಾಧಿಕಾರಿಗಳು ಹಾಗೂ ತಂಬಾಕು ನಿಯಂತ್ರಣಾಧಿಕಾರಿಗಳಾದ ಡಾ. ಎಸ್.ಎಸ್.ದೊಡ್ಡಮನಿ ಅವರು ಹೇಳಿದರು.

ಜಿಲ್ಲಾಡಳಿತ ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಸರ್ವೇಕ್ಷಣಾಧಿಕಾರಿಗಳ ಕಛೇರಿ, ಜಿಲ್ಲಾ ತಂಬಾಕು ನಿಯಂತ್ರಣ ಕೋಶ ಹಾಗೂ ತಾಲೂಕಾ ಆರೋಗ್ಯಾಧಿಕಾರಿಗಳ ಕಛೇರಿ ಖಾನಾಪೂರ ಇವರ ಸಂಯುಕ್ತ ಆಶ್ರಯದಲ್ಲಿ ಖಾನಾಪೂರ ತಾಲೂಕಾ ಪಂಚಾಯತ ಸಭಾಂಗಣದಲ್ಲಿ ಸೋಮವಾರ (ನ.11) ಜರುಗಿದ ತಂಬಾಕು ಮುಕ್ತ ಯುವ ಅಭಿಯಾನ 2.0 ತಂಬಾಕು ಮುಕ್ತ ಗ್ರಾಮ ಸಭೆಯನ್ನು ಅವರು ಮಾತನಾಡಿದರು.

ಕಳೆದ ವರ್ಷ ದೇಶದಲ್ಲಿ ತಂಬಾಕು ಮುಕ್ತ ಯುವ ಅಭಿಯಾನ ದೇಶದಲ್ಲಿ ಪ್ರಾಂಭವಾಯಿತು, ಕಳೆದ ವರ್ಷದ ಅಭಿಯಾನದ ಯಶಸ್ವಿನ ಆಧಾರದ ಮೇಲೆ ಈ ವರ್ಷ ಕೂಡಾ " ತಂಬಾಕು ಮುಕ್ತ ಯುವ ಅಭಿಯಾನ 2.0" (Tobacco Free Youth Campaign 2.0) ಎನ್ನುವ ರಾಷ್ಟ್ರೀಯ ಅಭಿಯಾನವು ಮಾನ್ಯ ಕೇಂದ್ರ ಆರೋಗ್ಯ ಕುಟುಂಬ ಕಲ್ಯಾಣ ಸಚಿವಾಲಯದವರು ದೇಶ್ಯಾದ್ಯಂತ ಚಾಲನೆ ನೀಡಿದರು. ಈ ಹಿನ್ನಲೆಯಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ 24/09/2024 ರಿಂದ 23/11/2024 ರವರೆಗೂ 60 ದಿನಗಳ ವರೆಗೆ ಕನಿಷ್ಠ 20 ರಿಂದ 25 ಗ್ರಾಮಗಳನ್ನು ತಂಬಾಕು ಮುಕ್ತ ಗ್ರಾಮವನ್ನಾಗಿ ಘೋಷಿಸುವದು ಒಂದು ಪ್ರಮುಖ ಗುರಿಯಾಗಿದೆ ಎಂದು ಡಾ.ಎಸ್.ಎಸ್.ದೊಡ್ಡಮನಿ ಹೇಳಿದರು.


ಖಾನಾಪೂರ ತಾಲೂಕನ್ನು ಉನ್ನತ ಅನುಷ್ಠಾನ ತಾಲೂಕು ಎಂದು ಆಯ್ಕೆ ಮಾಡಿರುವ ಕಾರಣ ಸದರಿ ತಾಲೂಕಿನ 20 ಗ್ರಾಮಗಳನ್ನು ತಂಬಾಕು ಮುಕ್ತ ಗ್ರಾಮಗಳೆಂದು ಘೋಷಿಸಲು ಕ್ರಮಗಳನ್ನು ಕೈಗೊಳ್ಳಬೇಕಾಗಿದೆ ಎಂದು ಸಭೆಗೆ ತಿಳಿಸಿದರು. ತಾಲೂಕಾ ಆರೋಗ್ಯಾಧಿಕಾರಿಗಳಾದ ಡಾ.ಮಹೇಶ ಕಿವಡಸನ್ನವರ ಅವರು ಮಾತನಾಡಿ, ಖಾನಾಪೂರ ತಾಲೂಕಿನ ಗ್ರಾಮಸ್ಥರಿಗೆ ತಂಬಾಕು ಸೇವನೆ ದುಷ್ಪರಿನಾಮ ಕುರಿತು ಅರಿವು ಮೂಡಿಸುವ ಕಾರ್ಯಕ್ರಮವು ಗ್ರಾಮದಲ್ಲಿ ಅಗತ್ಯೆ ಇರುವ ವಿಷಯ. ಸದರಿ 20 ಗ್ರಾಮಮಗಳನ್ನು ತಂಬಾಕು ಮುಕ್ತ ಗ್ರಾಮಗಳೆಂದು ಘೋಷಿಸಲು ನಮ್ಮಿಂದ ನೆರವು ನೀಡಲು **(ಕೊನೆಯ ಪುಟಕ್ಕೆ)**

# ಸುರೇಶ ಯಾದವ ಫೌಂಡೇಶನ್ ಸಾಮಾಜಿಕ ಕಳಕಳಿಯ ಸೇವೆ ಅನನ್ಯ: ದೀಪಕ ಗುಡಗನಟ್ಟಿ

ಬೆಳಗಾವಿ: ಸುರೇಶ ಯಾದವ ಅವರು ಯಾವುದೇ ಸ್ವಾರ್ಥ ಇಲ್ಲದೆ, ಸಾರ್ವಜನಿಕರ ಸೇವೆಗಾಗಿ ಹಗಲಿರುಳು ಶ್ರಮಿಸುತ್ತಿದ್ದಾರೆ, "ಟಿಕೆಗಳು ಸಾಯುತ್ತವೆ, ಕೆಲಸಗಳು ಉಳಿಯುತ್ತವೆ "ಎಂದು ಕರವೇ ಜಿಲ್ಲಾಧ್ಯಕ್ಷ ದೀಪಕ ಗುಡಗನಟ್ಟಿ ಹೇಳಿದರು.

ಇಲ್ಲಿನ ರಾಮತೀರ್ಥ ನಗರದ ವೀರಭದ್ರ ದೇವಸ್ಥಾನ ಆವರಣದಲ್ಲಿ ಸುರೇಶ ಯಾದವ ಫೌಂಡೇಶನ್ ಹಾಗೂ ರಾಮತೀರ್ಥ ನಗರ ರಹವಾಸಿಗಳ ಸಹಯೋಗದಲ್ಲಿ ಜರುಗಿದ "ಕರ್ನಾಟಕ ರಾಜ್ಯೋತ್ಸವ ನಿಮಿತ್ಯ ಗಾಯನ ಹಾಗೂ ನೃತ್ಯ ಸ್ಪರ್ಧೆಗಳು ಹಾಗೂ ಬಹುಮಾನ ವಿತರಣಾ ಸಮಾರಂಭ" ಉದ್ಘಾಟಿಸಿ ಅವರು ಮಾತನಾಡಿದರು.

ಸಮಾಜ ಸೇವೆ ಧ್ಯೇಯವಾಗಿಸಿಕೊಂಡಿರುವ ಅಪರೂಪದ ವ್ಯಕ್ತಿ ಅವರು ಎನ್ನುತ್ತ, "ಆಡಳಿತಾತ್ಮಕ ದೃಷ್ಟಿಯಿಂದ ನಮ್ಮ ದೇಶದಲ್ಲಿ ಭಾಷವಾರು ರಾಜ್ಯಗಳನ್ನಾಗಿ ವಿಂಗಡಿಸಲಾಗಿದೆ. ರಾಜ್ಯ, ಭಾಷೆ ಬೇರೆಯದರೂ ನಾವೆಲ್ಲರೂ ಭಾರತೀಯರೆಂಬ ಮನೋಭಾವ ಬೆಳೆಸಿಕೊಳ್ಳುವ ಮುಖೇನ ಸೌಹಾರ್ದತೆಯಿಂದ ಬದುಕಿದರೆ ಭಾರತ ಮತ್ತಷ್ಟು ಬಲಿಷ್ಠವಾಗಬಲ್ಲುದು. ಆ ನಿಟ್ಟಿನಲ್ಲಿ ಬೆಳಗಾವಿಯಲ್ಲಿ ನಮ್ಮ ದೇಶದ ಎಲ್ಲ ರಾಜ್ಯಗಳ ಜನರು ಸಹೋದರತೆಯಿಂದ ಬಾಳುತ್ತಿರುವುದಕ್ಕೆ




ಇಲ್ಲಿಯ ಕನ್ನಡಿಗರ ಹೃದಯ ವೈಶಾಲ್ಯತೆಗೆ ಸಾಕ್ಷಿ "ಕರ್ನಾಟಕದ ನಾಡಗೀತೆಯ ಆಶಯದಂತೆ ಸರ್ವ ಜನಾಂಗದ ಶಾಂತಿಯ ತೋಟದಂತಿರುವ ಬೆಳಗಾವಿಯಲ್ಲಿ ವಿವಿಧ ಜಾತಿ, ಮತ,ಭಾಷೆ, ಧರ್ಮ,ಪಂಥಗಳ ಭೇದವಿಲ್ಲದೆ ಒಂದೇ ಕುಟುಂಬದಂತೆ ಜನರು ಬದುಕುತ್ತಿರುವುದು ಕರ್ನಾಟಕದ ಪ್ರಜ್ಞೆಗೆ ಕನ್ನಡಿ ಹಿಡಿದಂತಿದೆ" ರಾಜ್ಯದ ಕರ್ನಾಟಕ ರಕ್ಷಣಾ ವೇದಿಕೆಯ ಎಲ್ಲ ಸೈನಿಕರು ಸುರೇಶ ಯಾದವ ಅವರ ಜೊತೆ ನಿಲ್ಲುತ್ತದೆ ಎಂದರು.

ಅಧ್ಯಕ್ಷತೆ ವಹಿಸಿ ಸುರೇಶ ಯಾದವ ಮಾತನಾಡಿ,"ನನ್ನ ಮಾತೃ ಭಾಷೆ ಮರಾಠಿಯಾದರೂ ನಾನು ಶಿಕ್ಷಣ ಪಡೆದದ್ದು ಕನ್ನಡ ಮಾಧ್ಯಮದಲ್ಲಿ. ಸಾಗುತ್ತಿರುವುದು ಕನ್ನಡ–ಮರಾಠಿ ಬಾಂಧವ್ಯದ ಕೊಂಡಿಯಂತಿರುವ ಬೆಳಗಾವಿಯಲ್ಲಿ ನನ್ನ ಜೀವನ ಸಾಗುತ್ತಿರುವುದು ನನ್ನ ಪುಣ್ಯ. ವಿವಿಧ ಸ್ಪರ್ಧೆಗಳನ್ನು ಆಯೋಜಿಸುವ ಮೂಲಕ ಇಂದಿನ ಪೀಳಿಗೆಗೆ ಕರ್ನಾಟಕದ ಸಾಂಸ್ಕೃತಿಕ ಪರಂಪರೆಯನ್ನು ಪರಿಚಯಿಸುವ ಉದ್ದೇಶ ನಮ್ಮದು. ಇಂಥ ಸಾಂಸ್ಕೃತಿಕ ಉತ್ಸವದಲ್ಲಿ ಮಕ್ಕಳಾದಿಯಾಗಿ ಹಿರಿಯರು ಉತ್ಸಾಹದಿಂದ ಪಾಲ್ಗೊಂಡಿರುವುದು ಸಂತಸ ತಂದಿದೆ. ಇಂಥ ಕಾರ್ಯಕ್ರಮಗಳು ನಿರಂತರ ನಡೆಯುವಂತಾಗಲಿ" ಎಂದರು. ಪ್ಯಾನ್ಸಿ ಡ್ರೆಸ್(6–14) ವಿಭಾಗದಲ್ಲಿ ವಿರಾಟ್ ಪಾಟೀಲ ಪ್ರಥಮ, ಸ್ಫೂರ್ತಿ ದ್ವಿತೀಯ, ಪೂರ್ಣಿಮಾ ಮತ್ತು ತನ್ಮಯಿ ತೃತೀಯ, ಪ್ಯಾನ್ಸಿ ಡ್ರೆಸ್ 14 ವರ್ಷ ಮೇಲ್ಪಟ್ಟವರಿಗಾಗಿ ಸಹನಾ ಪಠಗುಂದಿ ಪ್ರಥಮ್ ಅಕ್ಷತಾ ಗೌಡರ ದ್ವಿತೀಯ ಸಹನಾ ಹುಂಜನಾಟ್ಟಿ ತೃತೀಯ,ಸೋಲೋ ಡ್ಯಾನ್ಸ್ ಸ್ನೇಹ ನಾಯಿಕ್ ಪ್ರಥಮ, ಲಕ್ಷ್ಮೀ ನಾಯಿಕ ದ್ವಿತೀಯ, ನಿಧಿ ತೃತೀಯ, ಗುಂಪು

ವಿಭಾಗದಲ್ಲಿ ಚೆನ್ನಮ್ಮ ಪ್ರಥಮ, ಖ. ಕ ದ್ವಿತೀಯ ಸ್ಥಾನ ಪಡೆದರು.ಸಾವಿರಾರು ಸಂಖ್ಯೆಯಲ್ಲಿ ಕನ್ನಡಾಭಿಮಾನಿಗಳು ಭಾಗವಸಿದ್ದರು. ಮುಖ್ಯ ಅತಿಥಿಗಳಾಗಿ ಕೆ. ಎಮ್. ಡಿ. ಸಿ ಬೆಂಗಳೂರು ಮಾಜಿ ಅಧ್ಯಕ್ಷರಾದ ಮುಕ್ತಾರ ಪಠಾಣ, ಬಸವರಾಜ್ ಹಂಜಿ, ಗುರುಪುತ್ರಪ್ಪ ತೋರ್ಗಲ್, ರಾಜಶೇಖರ್ ಶೀಂದ್ರಿ, ನಿಂಗಪ್ಪ ಕರಿಯಪ್ಪಗೋಳ, ವೀರನಗೌಡಾ ಪಾಟೀಲ, ಕೆಂಪಣ್ಣಾ ಜಿನರಾಳ, ಮಹೇಶ ಶಿಗಿಹಳ್ಳಿ, ಸ್ನೇಹ ಬೆಳ್ಳಿ, ನಾನಗೌಡ ಬಿರಾದರ, ಶ್ರೀಶೈಲ ಹೀರೆಮಠ, ಸಿದ್ಧರಾಯ ಶಿಗಿಹಳ್ಳಿ, ಅಭಿಷೇಕ ಅಗಸಗಿ, ಅಕ್ಷಯ ಅಂಬಡಗಟ್ಟಿ, ವಿನಯ ಅಂಬಡಗಟ್ಟಿ, ಶಿವಲಿಂಗಪ್ಪ ಕಬಾಡಗಿ, ಬಿಡ್ನಾಳ್, ಗಣಾಚಾರಿ, ಪೂರ್ಣಿಮಾ ಯಾದವ,ಸಂಗೀತಾ ಗುಣಕಿ, ಛಾಯಾ ಬೆಳ್ಳಿ, ಶಾನಭಾಗ ಸಚಿನ ಬದ್ಯ್ಯಪ್ಪಗೋಳ, ಶಿವಾನಂದ ತಬಾಕಿ ಇತರರು ಇದ್ದರು. ಅರ್ಜುನ್ ಉರಬೀನಟ್ಟಿ ಸ್ವಾಗತಿಸಿದರು. ಮಲ್ಹಾರ ದೀಕ್ಷಿತ ನಿರೂಪಿಸಿದರು. ವೀರನಗೌಡ ಪಾಟೀಲ ವಂದಿಸಿದರು.

# 23 ಅಂಗಡಿ ತೆರವುಗೊಳಿಸದಂತೆ ಮುಖ್ಯಾಧಿಕಾರಿಗೆ ಮನವಿ

**ತಾಳಿಕೋಟೆ:** ಪಟ್ಟಣದ ಬಸ್ ನಿಲ್ದಾಣದ ಕಂಪೌಂಡ ಗೋಡೆಗೆ ಹೊಂದಿಕೊಂಡಿರುವ ಡಬ್ಬಾ ಅಂಗಡಿಗಳನ್ನು ತೆರವುಗೊಳಿಸುವದನ್ನು ನಿಲ್ಲಿಸಬೇಕೆಂದು ಕರ್ನಾಟಕ ರಾಜ್ಯ ಸಮಗಾರ (ಚಮ್ಮಾರ) ಹರಳಯ್ಯ ಸಂಘದ ತಾಲೂಕಾ ಘಟಕದ ನೇತೃತ್ವದಲ್ಲಿ ಸಮಾಜ ಬಾಂದವರು ಪುರಸಭೆ ಮುಖ್ಯಾಧಿಕಾರಿಗೆ ಸೋಮವಾರರಂದು ಮನವಿ ಸಲ್ಲಿಸಿದ್ದಾರೆ.

ಪಟ್ಟಣದ ಪುರಸಭೆ ವ್ಯಾಪ್ತಿಯಲ್ಲಿನ ಸಾರ್ವಜನಿಕ ಸ್ಥಳಗಳಲ್ಲಿ ಇರಿಸಲಾಗಿರುವ ಮತ್ತು ಅತೀಕ್ರಮಿಸಿಕೊಂಡಿರುವ ಡಬ್ಬಾ ಅಂಗಡಿಗಳು, ಗೂಡಂಗಡಿಗಳು ಅಲ್ಲದೇ ಇನ್ನಿತರ ಅಂಗಡಿಗಳನ್ನು ತೆರವುಗೊಳಿಸುವ ಕುರಿತು ಮುಖ್ಯಾದಿಕಾ-ರಿಗಳು ಪ್ರಕಟನೆ ಹೊರಡಿಸಿರುವದನ್ನು ನಾವುಗಳು ಅರೀತುಕೊಂಡಿದ್ದೇವೆ.

ಆದರೆ ಬಸ್ ನಿಲ್ದಾಣಕ್ಕೆ ಹೊಂದಿಕೊಂಡು ಶ್ರೀ ಶಿವಶರಣ ಸಮಗಾರ ಹರಳಯ್ಯ ಸಮಾಜದ ಪರಿಶಿಷ್ಟ ಸಮುದಾಯದ ಕಡುಬಡತನದ ಕುಟುಂಬಗಳು ಡಬ್ಬಾ ಅಂಗಡಿಗಳಿಂದಲೇ ಜೀವನ ನಡೆಸುತ್ತಿದ್ದು ತೆರವುಗೊಳಿಸುವ ಈ ವಿಷಯದಿಂದ ಗೊಂದಲಕ್ಕೆ ಇಡಾಗಿದ್ದೇವೆ ಈಗಾಗಲೇ ಈ ಸ್ಥಳವು ಮಳಿಗೆಗಳ ನಿರ್ಮಾಣಕ್ಕಾಗಿ ಭೂಸೇನಾ ನಿಗಮಕ್ಕೆ ಹಲವು ವರ್ಷಗಳ ಹಿಂದೆಯೇ ಟೆಂಡರ್ ನೀಡಿ



ಮೊದಲನೇ ಕಂತಿನ ಹಣವನ್ನು ಕೂಡಾ ಬಿಡುಗಡೆ ಮಾಡಿದೆ ಅಲ್ಲದೇ ಕಾಮಗಾರಿಯು ಮೊದಲನೇ ಹಂತದ ಪ್ಲಿಂತ್ ಹಂತದವರೆಗೆ ಮಾಡಿದ್ದಾರೆ ಆದರೆ ಈ ಕಡೆ ಅಂಗಡಿಯೂ ಕಟ್ಟಿಲ್ಲಾ ಆ ಜಾಗೆಯಲ್ಲಿರುವ ಬಡ ಕುಟುಂಭಗಳು ಜೀವನ ನಡೆಸುತ್ತಿರುವ ಡಬ್ಬಾ ಅಂಗಡಿಗಳನ್ನು ತೆರವುಗೊಳಿಸಿದರೆ ಹೇಗೆ ಜೀವನ ಸಾಗಿಸಬೇಕು ಅದಕ್ಕಾಗಿ ಮಾನ್ಯರಾದ ಮುಖ್ಯಾಧಿಕಾರಿಗಳು ಅದರಿ ಡಬ್ಬಾ ಅಂಗಡಿಗಳನ್ನು ತೆರವುಗೊಳಿಸಬಾರದೆಂದು ಮುಖ್ಯಾಧಿಕಾರಿಗೆ ಸಲ್ಲಿಸಿದ ಮನವಿಯಲ್ಲಿ ತಿಳಿಸಿದ್ದಾರೆ.

ಮನವಿ ಪತ್ರವನ್ನು ಪುರಸಭೆ ಮುಖ್ಯಾಧಿಕಾರಿ ಮೋಹನ್ ಜಾಧವ ಅವರಿಗೆ ಸಲ್ಲಿಸಿದರು.

ಈ ಸಮಯದಲ್ಲಿ ಕರ್ನಾಟಕ ರಾಜ್ಯ ಸಮಗಾರ(ಚಮ್ಮಾರ) ಹರಳಯ್ಯ ಸಂಘದ ತಾಲೂಕಾ ಘಟಕದ ಕಾಶಿನಾಥ ಮಬ್ರುಮಕರ, ಉದಯ ವಿಜಾಪೂರ, ನಾಗು ವಿಜಾಪೂರ, ಅಶೋಕ ವಿಜಾಪೂರ, ಮದಾರೆಪ್ಪ ವಿಜಾಪೂರ, ಲಕ್ಷ್ಮಣ ವಿಜಾಪೂರ, ಬಾಬು ಮಬ್ರುಮಕರ, ದುರ್ಗಪ್ಪ ಮಬ್ರುಮಕರ, ರಾಮಕೃಷ್ಣ ವಿಜಾಪೂರ, ಲಕ್ಷ್ಮಣ ವಿಜಾಪೂರ, ಶ್ರೀಶೈಲ ವಿಜಾಪೂರ, ಶೌಕತ್ ಲಾಹೋರಿ, ನರೇಂದ್ರ ಅಗರವಾಲಾ, ಜಗದೀಶ ವಿಜಾಪೂರ, ಬಸವರಾಜ ವಿಜಾಪೂರ, ಮೊದಲಾದವರು ಇದ್ದರು.

# ಸಂಗೊಳ್ಳಿ ಸ್ಮಶಾನದ ಮೇಲೂ ವಕ್ಫ್ ವಕ್ರದೃಷ್ಟಿ

**ಬೈಲಹೊಂಗ:** ರಾಜ್ಯಾದ್ಯಂತ ಸದ್ದು ಮಾಡುತ್ತಿರುವ ರೈತರ, ಮಠಗಳ, ಶಾಲೆಗಳ, ಸ್ಮಶಾನ ಭೂಮಿಗಳ ಆಸ್ತಿಗಳ ಪಹಣಿಯಲ್ಲಿ ಕಂಡು ಬರುತ್ತಿರುವ ವಕ್ಫ್ ಹಕ್ಕು ದಾಖಲಾತಿ ವಿಷಯ ಬೈಲಹೊಂಗಲ ತಾಲೂಕಿಗೂ ವಕ್ಕರಿಸಿದೆ.

ಬೈಲಹೊಂಗಲ ತಾಲೂಕಿನ ಸಂಗೊಳ್ಳಿ ಗ್ರಾಮದ ಗ್ರಾಪಂ ಆಸ್ತಿಯನ್ನು ಸಾರ್ವಜನಿಕವಾಗಿ ಸ್ಮಶಾನಕ್ಕೆ ಹಸ್ತಾಂತರಿಸಿದ ಮಸಣಮಠ ಎಂಬ ಹೆಸರಿನ 128 ಸರ್ವೆ ನಂಬರ್ 8 ಏಕರೆ 27 ಗುಂಟೆ ಆಸ್ತಿಯ ಹೆಸರಿನಲ್ಲಿದ್ದ ಪಹಣಿಯಲ್ಲಿ ಶಾಸಾನ ಬಗ್ಗೆ ವಕ್ಫ ಆಸ್ತಿ ಎಂದು ಹಕ್ಕುದಾಖಲಾತಿಯ ಕಾಲಂನಲ್ಲಿ ನಮೊದ ಆಗಿದ್ದು ದಿ.7.11.2024 ರಂದು ಗ್ರಾಮದ ನಾಗ-ರಿಕರೋರ್ವರು ಉತಾರ ತಗೆಸಿ ನೊಡಿದಾಗ ಈ ಮಾಹಿತಿ ಬಹಿರಂಗವಾಗಿದೆ.

ಈ ಕುರಿತು ತಹಶೀಲ್ದಾರ ಹಣಮಂತ ಶಿರಹಟ್ಟಿ ಅವರನ್ನು ಸಂಪರ್ಕಿಸಲಾಗಿ ಗೆಜೇಟನಲ್ಲಿ ಈ ರೀತಿ ಆಗಿರಬಹುದು ಇಲ್ಲಿಯವರೆಗೆ ನಮ್ಮ ಕಚೇರಿಯಿಂದ ಯಾವುದೇ ನೊಟೀಸು ನೀಡಿ ವಕ್ಫ್ ಆಸ್ತಿ ಎಂದು ದಾಖಲಾತಿ ಮಾಡಿಲ್ಲ ಎಂದರು. ಈ ಕುರಿತು ಪತ್ರಿಕೆಯೊಂದಿಗೆ ಮಾತನಾಡಿದ ಗ್ರಾಪಂ ಸದಸ್ಯ ಬಸವರಾಜ ಕೊಡ್ಲಿ ನ್ಯಾಯವಾದಿ ಉಮೇಶ ಲಾಳ ಕೂಡಲೇ ಸ್ಮಶಾನ ಭೂಮಿ ಆಸ್ತಿಯನ್ನು ವಕ್ಫ್ ಆಸ್ತಿ ಎಂದು ನಮೊದ ಮಾಡಿದ್ದನ್ನು ಕೈಬಿಡಬೇಕು. ಇಲ್ಲದಿದ್ದರೆ ಗ್ರಾಮಸ್ಥರು ಸೇರಿ ತಹಶೀಲ್ದಾರ ಕಚೇರಿ ಮುಂದೆ ಧರಣಿ ನಡೆಸುತ್ತೆವೆ.

> **ಬೈಲಹೊಂಗಲ ತಾಲೂಕಿನ ಸಂಗೊಳ್ಳಿ ಗ್ರಾಮದ ಸ್ಮಶಾನ ಭೂಮಿಯನ್ನು ಕಬಳಿಸಲು ಯತ್ನಿಸುತ್ತಿರುವದು ನಮ್ಮ ಗಮನಕ್ಕೆ ಬಂದಿದೆ. ಕೂಡಲೇ ಸ್ಮಶಾನ ಭೂಮಿ ಆಸ್ತಿಯನ್ನು ವಕ್ಫ್ ಆಸ್ತಿ ಎಂದು ನಮೊದ ಮಾಡಿದ್ದನ್ನು ಕೈಬಿಡಬೇಕು. ಇಲ್ಲದಿದ್ದರೆ ಬರುವಂತಹ ದಿನಗಳಲ್ಲಿ ಬೈಲಹೊಂಗಲ ಸಂಪೂರ್ಣ ಬಂದ ಕರೆದು ಉಗ್ರ ಹೋರಾಟ ಮಾಡಲಾಗುವುದು.**
> **ಡಾ.ವಿಶ್ವನಾಥ ಪಾಟೀಲ ಮಾಜಿ ಶಾಸಕ**

# ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಿಸಿದ ಶಾಸಕ ರಮೇಶ ಜಾರಕಿಹೊಳಿ

**ಗೋಕಾಕ:** ತಾಲೂಕಿನ ಕೊಣ್ಣೂರು ಪುರಸಭೆಯಿಂದ ಎಮ್‌ಬಿಬಿಎಸ್ ಹಾಗೂ ಬಿಇ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ನೀಡಲಾದ ಲ್ಯಾಪ್ ಟಾಪ್‌ಗಳನ್ನು ಶಾಸಕ ರಮೇಶ ಜಾರಕಿಹೊಳಿ ಅವರು ಶನಿವಾರದಂದು ನಗರದ ಕಾರ್ಯಾಲಯದಲ್ಲಿ ವಿತ-ರಿಸಿದರು.ಕೊಣ್ಣೂರು ಪುರಸಭೆ ಅಧ್ಯಕ್ಷ ವಿನೋದ ಕರನಿಂಗ, ಉಪಾಧ್ಯಕ್ಷ ಯಲ್ಲಪ್ಪ ನಾಯಕ, ಸದಸ್ಯರಾದ ಪ್ರಕಾಶ ಕರನಿಂಗ, ಗುಳಪ್ಪ ಅಸೂದೆ, ಮಾರುತಿ ಪೂಜೇರಿ, ಅಶೋಕ ಕುಮಾರನಾಯಕ, ಧನ್ಯಕುಮಾರ ಮೇಗೇರಿ, ಸಾವಂತ ತಳವಾರ, ರಾಮಲಿಂಗ ಮಗದುಮ, ಮೇಘಾ ಪವಾರ, ಮುಖ್ಯಾಧಿಕಾರಿ ಎಸ್. ಎಮ್ ಹಿರೇಮಠ, ಇದ್ದರು.



## ಚೂರು-ಪಾರು

## ಚಕ್ರ ಎಸೆತದಲ್ಲಿ ಅವಿನಾಶಗೆ ಪ್ರಥಮ

**ವಿಜಯಪುರ:** ದೇವರ ಹಿಪ್ಪರಗಿ ತಾಲೂಕಿನ ಪಡಗಾನೂರ ಗ್ರಾಮದ ವೆಂಕಟೇಶ್ವರ ಪ್ರೌಢಶಾಲೆಯ ಅವಿನಾಶ ತಳಕೇರಿ ವಿದ್ಯಾರ್ಥಿ ಕೋಲಾರ



ಜಿಲ್ಲೆಯಲ್ಲಿ ನವಂಬರ್ 08 ರಿಂದ 10 ರವರೆಗೆ ನಡೆದ ರಾಜ್ಯ ಮಟ್ಟದ ಶಾಲಾ ಮಕ್ಕಳ ಆಟೋಟಗಳ ಸ್ಪರ್ಧೆಯಲ್ಲಿ ಭಾಗವಹಿಸಿ (14/17 ವರ್ಷ ವಯೋಮಿತಿ) ಚಕ್ರವನ್ನು 48.20 ಮೀ ದೂರ ಎಸೆಯುವ ಮೂಲಕ ಕ್ರೀಡೆಯಲ್ಲಿ ಪ್ರಥಮ ಸ್ಥಾನ ಪಡೆದಿದ್ದಾನೆ.ವಿದ್ಯಾರ್ಥಿ ಸಾಧನೆಗೆ ಮಾರ್ಗದರ್ಶಕ ಹಾಜಿಲಾಲ್ ಮುಲ್ಲಾ, ಭೀಮಾಶಂಕರ ಕೆಂಭೋಗಿ, ರೋಹಿತ್ ರಾಠೋಡ, ವಿನೋದ, ಗ್ರಾಮದ ಗುರು-ಹಿರಿಯರು, ತಂದೆ ಮಲ್ಲಿಕಾರ್ಜುನ ತಳಕೇರಿ ಹಾಗೂ ತಾಯಿ- ನಾಗಮ್ಮ ತಳಕೇರಿ, ಶಾಲಾ ಮುಖ್ಯ ಶಿಕ್ಷಕರು ಅಭಿನಂದನೆ ಸಲ್ಲಿಸಿ ಹರ್ಷ ವ್ಯಕ್ತಪಡಿಸಿದ್ದಾರೆ.

## ನಡಿಗೆ ಸ್ಪರ್ಧೆಯಲ್ಲಿ ರಾಜ್ಯಮಟ್ಟಕ್ಕೆ ಆಯ್ಕೆ

**ನೇಸರಗಿ:** ಇಲ್ಲಿನ ಸರಕಾರಿ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ದ್ವಿತೀಯ



ಪಿಯುಸಿ ಕಲಾ ವಿಭಾಗದ ವಿದ್ಯಾರ್ಥಿನಿ ಕಮಲಾಕ್ಷಿ ಇಂಚಲ ಇವಳು ತುಮಕೂರಿನಲ್ಲಿ ನಡೆದ ರಾಜ್ಯ ಮಟ್ಟದ ನಡಿಗೆ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾಳೆ. ಮತ್ತು ರಾಷ್ಟ್ರ ಮಟ್ಟದ ನಡಿಗೆ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ. ಈ ವಿದ್ಯಾರ್ಥಿಯ ಸಾಧನೆಗೆ ಕಾಲೇಜು ಪ್ರಾಂಶುಪಾಲರಾದ ಎನ್ ಎಮ್ ಕುದರಿಮೋತಿ, ಕಾಲೇಜು ಸುಧಾರಣಾ ಸಮಿತಿ ಉಪಾಧ್ಯಕ್ಷ ಬಸವರಾಜ ಚಿಕ್ಕನಗೌಡರ, ಸಮಿತಿ ಸದಸ್ಯರು, ಭೋಧಕ, ಭೋದಕ್ಕೇತ್ತರ ಸಿಬ್ಬಂದಿ, ವಿದ್ಯಾರ್ಥಿಗಳು ಹರ್ಷ ವ್ಯಕ್ತಪಡಿಸಿದ್ದಾರೆ.

## ಹಿಂಗಾರಿ ಬೆಳೆಗಳ ಸಾಗುವಳಿ ಕ್ರಮಗಳ ಕುರಿತು ತರಬೇತಿ

**ಬಾಗಲಕೋಟೆ:** ಜಿಲ್ಲಾ ಕೃಷಿ ತರಬೇತಿ ಕೇಂದ್ರದಿಂದ ರೈತರ ಅನುಕೂಲಕ್ಕಾಗಿ ನವೆಂಬರ 12 ರಂದು ಮಧ್ಯಾಹ್ನ 3.30 ರಿಂದ ಸಂಜೆ 4.30 ವರೆಗೆ ಗೂಗಲ್ ಮೀಟ್ ಮೂಲಕ ಕಡಲೆ, ಗೋದಿ ಹಾಗೂ ಇತರೆ ಹಿಂಗಾರಿ ಬೆಳೆಗಳ ಸಾಗುವಳಿ ಕ್ರಮಗಳ ಕುರಿತು ಆನ್‌ಲೈನ್ ತರಬೇತಿ ಹಮ್ಮಿಕೊಳ್ಳಲಾಗಿದೆ. ಆಸಕ್ತ ರೈತರು ಗೂಗಲ್ ಮೀಟ್ http://meet.google.com/wgp-umwq-jsw ಲಿಂಕ್ ಮೂಲಕ ತರಬೇತಿಗೆ ಹಾಜರಾಗುವಂತೆ ಜಿಲ್ಲಾ ತರಬೇತಿ ಕೇಂದ್ರದ ಸಹಾಯಕ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಎಸ್ಡಿಎ ಮನೆಗೆ ಸಂಸದ ಶೆಟ್ಟರ್ ಭೇಟಿ



**ಬೆಳಗಾವಿ:** ಆತ್ಮಹತ್ಯೆ ಮಾಡಿಕೊಂಡ ಮೃತ ಸರ್ಕಾರಿ ನೌಕರ ರುದ್ರಣ್ಣ ಯಡವನ್ನವರ ಅವರ ಮನೆಗೆ ಸಾಂತ್ವನ ಹೇಳಲು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದರಾದ ಜಗದೀಶ್ ಶೆಟ್ಟರ ಹಾಗೂ ಭಾರತೀಯ ಜನತಾ ಪಾರ್ಟಿ ಬೆಳಗಾವಿ ಗ್ರಾಮಂತರ ಜಿಲ್ಲಾಧ್ಯಕ್ಷರಾದ ಸುಭಾಷ ಪಾಟೀಲ, ಮಾಜಿ ಶಾಸಕ ಸಂಜಯ ಪಾಟೀಲ, ಮುರುಗೇಂದ್ರಗೌಡ ಪಾಟೀಲ,ಪಂಚನಗೌಡ ದೇಮನಗೌಡ್ರ ಅವರು ತೆರಳಿ ಮೃತ ಸರ್ಕಾರಿ ನೌಕರ ರುದ್ರಣ್ಣಅವರ ತಾಯಿ ಹಾಗೂ ಅವರ ಹೆಂಡತಿಗೆ ಸಾಂತ್ವನ ಹೇಳಿ ಧೈರ್ಯ ತುಂಬಿದರು.ಈ ಸಂದರ್ಭದಲ್ಲಿ ಭಾ.ಜ.ಪಾ ಮುಖಂಡರಾದ ಯಲ್ಲೇಶ ಕೊಲಕಾರ, ವೀರಭದ್ರ ಪೂಜಾರಿ ಹಾಗೂ ಪ್ರಮುಖರು ಉಪಸ್ಥಿತರಿದ್ದರು.

# ಬಿಸಿಯೂಟಕ್ಕೆ ಲಿಂಗಾಯತ ಮಠಗಳೇ ಪ್ರೇರಣೆ

## ಮಠಗಳ ಮಾರ್ಗದರ್ಶನದಲ್ಲಿ ಜನರ ಸೇವೆ ಮಾಡುತ್ತಿರುವೆ ಎಂದ ಸಚಿವೆ ಲಕ್ಷ್ಮೀ ಹೆಬ್ಬಾಳಕರ

ಬೆಳಗಾವಿ: ಸರ್ಕಾರದ ಅನ್ನ ದಾಸೋಹ ಕಾರ್ಯಕ್ರಮಕ್ಕೆ ಲಿಂಗಾಯತ ಮಠಗಳೇ ಪ್ರೇರಣೆಯಾಗಿವೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರಾದ ಲಕ್ಷ್ಮೀ ಹೆಬ್ಬಾಳಕರ್ ಹೇಳಿದ್ದಾರೆ.

ಕಾರಂಜಿ ಮಠದ ಪೀಠಾಧಿಪತಿಗಳಾದ ಶ್ರೀ ಗುರುಸಿದ್ಧ ಸ್ವಾಮಿಗಳ ಅಮೃತ ಮಹೋತ್ಸವ ಕಾರ್ಯಕ್ರಮದಲ್ಲಿ ಅನುಭಾವ ಕಾರಂಜಿ ಪುಸ್ತಕ ಬಿಡುಗಡೆ ಗೊಳಿಸಿ ಮಾತನಾಡಿದ ಸಚಿವರು, ವೀರಶೈವ ಲಿಂಗಾಯತ ಮಠಗಳು ಯಾವುದೇ ಸರ್ಕಾರಗಳಿಗೆ ಪರ್ಯಾಯವಾಗಿ ಎನ್ನುವಂತೆ ಕೆಲಸ ಮಾಡುತ್ತಿವೆ ಎಂದರು.

ಸರ್ಕಾರದ ಪ್ರಮುಖ ಯೋಜನೆಯಾದ, 52 ಸಾವಿರ ಕೋಟಿ ರೂಪಾಯಿ ಗೃಹಲಕ್ಷ್ಮೀ ಯೋಜನೆಯನ್ನು ಅತ್ಯಂತ ಸಮರ್ಪಕವಾಗಿ ನಿಭಾಯಿಸುತ್ತಿರುವೆ ಎಂದು ಸಚಿವರು ಹೇಳಿದರು.

ಮಠಗಳು ಸರ್ಕಾರಕ್ಕೆ ಮಾರ್ಗದರ್ಶನ ಮಾಡುತ್ತಿವೆ. ಮಠಗಳ ಕಾಯಕ ದಾಸೋಹ, ಅನ್ನ ದಾಸೋಹ, ಜ್ಞಾನ ದಾಸೋಹ, ಶಿಕ್ಷಣ ದಾಸೋಹ ಇವುಗಳ ಮೂಲಕ ಸಮಾಜಕ್ಕೆ ಭಾರಿದೊಡ್ಡ ಕೊಡುಗೆ ನೀಡುತ್ತಾ ಬಂದಿವೆ. ಸಮಾಜದಲ್ಲಿ ಉತ್ತಮ ಪ್ರಜೆಗಳನ್ನು ರೂಪಿಸಲು ಲಿಂಗಾಯತ ಮಠಗಳ ಪಾತ್ರ ದೊಡ್ಡದು. ಬೆಳಗಾವಿ ಬಹಳ ಪುಣ್ಯವಂತರು, ಹಲವಾರು ಮಠಗಳ ಮಾರ್ಗದರ್ಶನ ಸಿಗುತ್ತಿದೆ ಎಂದು ತಿಳಿಸಿದರು.

ನಾನು ಸಮಾಜದ ಮಗಳಾಗಿ ಸಮಾಜಕ್ಕೆ ಒಳ್ಳೆ ಹೆಸರು ತರುವಲ್ಲಿ ಎಲ್ಲರ ಸಹಕಾರದೊಂದಿಗೆ ಕೆಲಸ ಮಾಡುತ್ತಿದ್ದೇನೆ.



ಎಲ್ಲಾ ಜಾತಿ ಯವರನ್ನು ಒಟ್ಟಾಗಿ ಕರೆದುಕೊಂಡು ಹೋಗುವ ಕೆಲಸ ಮಾಡುತ್ತಿದ್ದೇನೆ. ಕಾರಂಜಿ ಮಠದ ಗುರುಸಿದ್ಧ ಸ್ವಾಮಿಗಳು 20 ವರ್ಷಗಳ ಹಿಂದೆಯೇ ಒಳ್ಳೆ ಸಮಾಜ ಸೇವಕಿಯಾಗು ಎಂದ ಆಶೀರ್ವಾದ ಮಾಡಿದ್ದರು ಎಂದು ಸಚಿವರು ಸ್ಮರಿಸಿದರು.

ಅವರ ಹಾಗೂ ಎಲ್ಲ ಮಠಾಧೀಶರ ಮಾರ್ಗದರ್ಶನದಲ್ಲಿ ಇಂದು ಮುನ್ನಡೆಯುತ್ತಿದ್ದೇನೆ. ಗುರುಸಿದ್ಧ ಸ್ವಾಮೀ-ಜಿಯವರು ಪ್ರಚಾರ ಪ್ರಿಯರಲ್ಲ. ಕೆಲಸವನ್ನು ಮಾಡಿ ದೇವರ ಪಾದಕ್ಕೆ ಅರ್ಪಿಸುವುದು ಗೊತ್ತು. ಸಮಾಜ ಸುಧಾರಣೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು, ಮಾರ್ಗದರ್ಶಕರಾಗಿ ಕೆಲಸಮಾಡುತ್ತಿದ್ದಾರೆ. ಅವರ 50 ಹಾಗೂ ಷಷ್ಟಬ್ದಿ ವರ್ಷಗಳ ಕಾರ್ಯಕ್ರಮಗಳನ್ನು ಮಾಡಬೇಕು ಎಂದರೂ ಸ್ವಾಮೀ-ಜಿಗಳು ಕೇಳಿರಲಿಲ್ಲ. ಇದೀಗ ಭಕ್ತರೆಲ್ಲಾ ಸೇರಿ ಅವರನ್ನು ಕೇಳದೆಯೇ, ಜಾತ್ಯಾತೀತ ಹಾಗೂ ಪಕ್ಷಾತೀತವಾಗಿ ಈ ಕಾರ್ಯಕ್ರಮವನ್ನು ಆಯೋಜನೆ ಮಾಡಿದ್ದಾರೆ ಎಂದು ಹೇಳಿದರು.

ಸಮಾರಂಭದಲ್ಲಿ ಡಂಬಳ-ಗದಗಿನ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠದ ಜಗದ್ಗುರು ಡಾ.ತೋಂಟದ ಸಿದ್ಧರಾಮ ಮಹಾಸ್ವಾಮಿಗಳು, ಧಾರವಾಡ ಮುರುಘಾಮಠದ ಡಾ. ಮಲ್ಲಿಕಾರ್ಜುನ ಮಹಾಸ್ವಾಮಿಗಳು, ಹುಕ್ಕೇರಿಯ ಗುರುಶಾಂತೇಶ್ವರ ಹಿರೇಮಠದ ಶ್ರೀ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು, ನಿಲಜಿಯ ಅಲೌಕಿಕ ಜ್ಞಾನಮಂದಿರದ ಶ್ರೀ ಶಿವಾನಂದ ಗುರೂಜಿ, ಬೆಳಗಾವಿ ಕಾರಂಜಿಮಠ ಉತ್ತರಾಧಿಕಾರಿಗಳಾದ ಡಾ.ಶಿವಯೋಗಿ ದೇವರು, ಬೆಳಗಾವಿ ರೇಣುಕಾಶ್ರಮದ ಪೂಜ್ಯಶ್ರೀ ಗಂಗಾಮಾತಾಜಿ, ನಾಗನೂರು ಶ್ರೀ ರುದ್ರಾಕ್ಷಿಮಠದ ಪೂಜ್ಯ ಶ್ರೀ ಡಾ.ಅಲ್ಲಮಪ್ರಭು ಮಹಾಸ್ವಾಮಿಗಳು, ಕೆ. ಎಲ್.ಇ ಸಂಸ್ಥೆಯ ಕಾರ್ಯಾಧ್ಯಕ್ಷರಾದ ಡಾ. ಪ್ರಭಾಕರ್ ಕೋರೆ, ವಿಧಾನ ಪರಿಷತ್ ಸದಸ್ಯರಾದ ಚನ್ನರಾಜ ಹಟ್ಟಿಹೊಳಿ, ಮಾಜಿ ವಿಧಾನ ಪರಿಷತ್ ಸದಸ್ಯರಾದ ಮಹಾಂತೇಶ ಕವಟಗಿಮಠ, ಸಂಸದರಾದ ಜಗದೀಶ್ ಶೆಟ್ಟರ್, ಮಾಜಿ ಶಾಸಕರಾದ ಫಿರೋಜ್ ಸೇಠ್, ಅಮೃತ ಮಹೋತ್ಸವ ಸಮಿತಿಯ ಸದಸ್ಯರಾದ ಡಾ. ಬಸವರಾಜ ಬಾಗೋಜಿ, ಸೋಮಶೇಖರ ಹಿರೇಮಠ, ಬಸವರಾಜ ಹಳಂಗಳಿ, ಸತೀಶ ಮಾಳವದೆ, ವಿಜಯ ಜಾಧವ್, ಡಾ.ಬಸವರಾಜ ಜಗಜಂಪಿ, ಪ್ರಕಾಶ ಗಿರಿಮಲ್ಲನವರ್ ಸೇರಿಣಟಜಜಜಿಟಜಜ ಸಮಿತಿಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ವಿವಿಧ ಗಾಪಂಗೆ ಅಧಿಕಾರಿಗಳ ಭೇಟಿ: ಕಾರ್ಯಕ್ರಮ ಅನುಷ್ಠಾನ ಪರಿಶೀಲನೆ

**ಬಸವನಬಾಗೇವಾಡಿ:** ತಾಲೂಕಿನ ಹುಣಶ್ಯಾಳ ಪಿಬಿ, ಇಂಗಳೇಶ್ವರ ಹಾಗೂ ಡೋಣೂರ ಗ್ರಾಮ ಪಂಚಾಯಿತಿಗಳಿಗೆ ಶನಿವಾರ ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯದ ಸೂಚನೆಯಂತ ತಮಿಳುನಾಡಿನ ಗಾಂಧಿ ಗ್ರಾಮ ರೂರಲ್ ಇನ್‌ಸ್ಟಿಟ್ಯೂಟ್ ಅಧಿಕಾರಿ ಡಾ.ಎ.ಆರ್.ಮಣಿ, ಇ.ಆರ್.ಕೆ. ರೋಸಿವ್ ಭೇಟಿ ನೀಡಿ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನದ ಕುರಿತು ಕ್ಷೇತ್ರ ಭೇಟಿ ನೀಡಿ ಕೇಂದ್ರ,ರಾಜ್ಯ ಪ್ರಾಯೋಜಿತ ಯೋಜನೆಗಳ ಪ್ರಗತಿ ವರದಿ ಪರಿಶೀಲಿಸಿದರು.

ತಾಲೂಕಿನ ಹುಣಶ್ಯಾಳ ಪಿಬಿ ಗ್ರಾಮ ಪಂಚಾಯಿತಿಗೆ ಭೇಟಿ ನೀಡಿ ಗ್ರಾಮ ಪಂಚಾಯಿತಿ ಸಮಗ್ರ ಮಾಹಿತಿಯನ್ನು ಪಡೆದು ಮನರೇಗಾ ಯೋಜನೆಯ ಕಾಮಗಾರಿಯ ಕಡತ, 7 ರಜಿಸ್ಟರ್ ವಹಿಗಳನ್ನು ಪರಿಶೀಲಿಸಿದರು. ಮಹಿಳಾ ಸ್ವಸಹಾಯ ಸಂಘದ ರಜಿಸ್ಟರ್‌ಗಳನ್ನು ಪರಿಶೀಲಿಸಿ ಸಂಘದ ಕಾರ್ಯವೈಖರಿ ಕುರಿತು ಮಾಹಿತಿ ಪಡೆದುಕೊಂಡುಇದರ ಕುರಿತು ಜಿಲ್ಲಾ ಸಂಯೋಜಕರೊಂದಿಗೆ ಚರ್ಚಿಸಿದರು. ಸಾಮಾಜಿಕ ಲೆಕ್ಕ ಪರಿಶೋಧನಾ ಮಾಹಿತಿ, ದಾಖಲಾತಿಯನ್ನು ಪರಿಶೀಲಿಸಿದರು.

ಗ್ರಾಮ ಪಂಚಾಯತಿ ಸಭಾಭವನದಲ್ಲಿ ನರೇಗಾ ಫಲಾನುಭವಿಗಳು, ಗ್ರಾಮದ ಹಿರಿಯ ನಾಗರಿಕರು, ಅಂಗವಿಕಲರು, ಹಾಗೂ ವಿಧವೆಯರ ಪಿಂಚಣಿಯ ದಾಖಲಾತಿಗಳನ್ನು ಪರಿಶೀಲನೆ ಮಾಡಿ ಫಲಾನುಭವಿಗಳ ಜೊತೆ ಸಂವಾದ ನಡೆಸಿ ಪ್ರತಿ ತಿಂಗಳು ಸರಿಯಾದ ಸಮಯದಲ್ಲಿ ಪಿಂಚಣಿ ಬರುತ್ತಿದೆಯೇ ಎಂಬುದರ ಮಾಹಿತಿಯನ್ನು ಪಡೆದುಕೊಂಡರು. ಮನರೇಗಾ ಯೋಜನೆ ಫಲಾನುಭವಿಗಳ ಜೊತೆ ಸಂವಾದ ನಡೆಸಿ ನಿಗದಿತ ಸಮಯದಲ್ಲಿ ಕೂಲಿ ಪಾವತಿ ಆಗುವುದೋ ಇಲ್ಲವೇ ಎಂದು ಫಲಾನುಭವಿಗಳ ಜೊತೆಗೆ ಸಂವಾದ ನಡೆಸುವುದರೊಂದಿಗೆ ಜಾಬ್ ಕಾರ್ಡ ಗಳನ್ನು ವೀಕ್ಷಿಸಿದರು. ಸರ್ಕಾರ ನೀಡುವ ಪಿಂಚಣಿ ಹಣವನ್ನು ಹಾಗೂ ನರೇಗಾ ಯೋಜನೆ ಅಡಿಯಲ್ಲಿ ಸಿಗುವ ಹಣವನ್ನು ಯಾವ ರೀತಿ ತಮ್ಮ ಜೀವನಕ್ಕೆ ಬಳಕೆ ಮಾಡಿಕೊಳ್ಳುತ್ತೀರಿ ಎಂಬುದನ್ನು ಕೇಳಿ ಮಾಹಿತಿ ಪಡೆದುಕೊಂಡರು. ಜಾಬ್ ಕಾರ್ಡ ನಲ್ಲಿನ ಕೆಲವು ಲೋಪದೋಷಗಳನ್ನು ಸರಿಪಡಿಸಿಕೊಳ್ಳಲು ಪಂಚಾಯತಿ ಅಭಿವೃದ್ಧಿ ಅಧಿಕಾರಿಗೆ ಸೂಚಿಸಿದರು.

ಮನರೇಗಾ ಯೋಜನೆ ಅಡಿಯಲ್ಲಿ ನಿರ್ಮಾಣಗೊಂಡ ಆರ್‌ಎಮ್ ಎಸ್ ಶಾಲಾ ಆವರಣದಲ್ಲಿನ ರಕ್ಷಣಾಗೋಡೆ ಕಾಮಗಾರಿ ಹಾಗೂ ನರೇಗಾ



ಯೋಜನೆಯಡಿಯಲ್ಲಿ ಸಾಮಾಜಿಕ ಅರಣ್ಯ ಇಲಾಖೆಯ ಅಡಿಯಲ್ಲಿ ಅನುಷ್ಠಾನಸಿರುವ ನೆಡುತೋಪು ಕಾಮಗಾರಿಯನ್ನು ವೀಕ್ಷಿಸಿ ನರೇಗಾ ಯೋಜನೆಯ ಕಡತ ಮತ್ತು ದಾಖಲಾತಿಗಳನ್ನು ಪರಿಶೀಲಿಸಿದರು. ತದನಂತರ ಪ್ರಧಾನಮಂತ್ರಿಯ ಆವಾಸ್ ಯೋಜನೆಯಡಿಯಲ್ಲಿನ ಮನೆಗಳಿಗೆ ಭೇಟಿ ನೀಡಿ ಯೋಜನೆಯ ಅನುಕೂಲತೆಗಳನ್ನು ಪಡೆದುಕೊಂಡಿರುವ ಫಲಾನುಭವಿಗಳ ಜೊತೆ ಸಂವಾದ ನಡೆಸಿ ಯೋಜನೆಗಳ ಬಗ್ಗೆ ಗ್ರಾಮದ ಅಭಿವೃದ್ಧಿಗೆ ಹಾಗೂ ಶಾಲಾ ಅಭಿವೃದ್ಧಿಗೆ ಕೈಗೊಂಡ ಮನರೇಗಾ ಕಾಮಗಾರಿ ಗಳನ್ನು ವೀಕ್ಷಿಸಿ ಸಂತಸ ವ್ಯಕ್ತಪಡಿಸಿದರು.

ತದನಂತರ ಇಂಗಳೇಶ್ವರ ಗ್ರಾಮ ಪಂಚಾಯಿತಿಗೆ ಭೇಟಿ ನೀಡಿ ಪಿ. ಎಂ ಜಿ ವಾಯ್ ಮನೆಗಳ ನಿರ್ಮಾಣ ದಾಖಲಾತಿಗಳು, ಮನರೇಗಾ ಕಾಮಗಾರಿ ಹಾಗೂ 7 ರಿಜಿಸ್ಟರ್ ಗಳನ್ನು ಪರಿಶೀಲಿಸಿದರು. ಸ್ವಸಹಾಯ ಸಂಘದ ಕಾರ್ಯವೈಖರಿ ಮಾಹಿತಿ ಪಡೆದುಕೊಂಡು ದಾಖಲಾತಿಗಳನ್ನು ಪರಿಶೀಲಿಸಿದರು. ಸ್ವ ಸಹಾಯ ಸಂಘಗಳ ಸದಸ್ಯರ ಹಾಗೂ ನರೇಗಾ ಕೂಲಿಕಾರರ ಜೊತೆ ಸಂವಾದ ನಡೆಸಿ ಜಾಬ್ ಕಾರ್ಡ ಗಳನ್ನು ವೀಕ್ಷಿಸಿ ಪರಿಶೀಲಿಸಿದರು.

ಪ್ರಧಾನ ಮಂತ್ರಿ ಆವಾಸ್ ಯೋಜನೆ ಮನೆಗಳಿಗೆ ಭೇಟಿ ನೀಡಿ ಫಲಾನುಭವಿಗಳ ಜೊತೆ ಸಂವಾದ ನಡೆಸಿ ಕಡತಗಳನ್ನು ಪರಿಶೀಲಿಸಿದರು. ಮನರೇಗಾ ಯೋಜನೆ ಅಡಿಯಲ್ಲಿ ನಿರ್ಮಾಣಗೊಂಡ ಅಮೃತ ಸರೋವರ ಕಾಮಗಾರಿ ಮತ್ತು ಸಾಮಾಜಿಕ ಅರಣ್ಯ ಇಲಾಖೆಯಡಿಯಲ್ಲಿ ಅನುಷ್ಠಾನಸಿರುವ ರಸ್ತೆ ಬದಿ ನೇಡುತೋಪು ಮತ್ತು ನೆಡುತೋಪು ಕಾಮಗರಿಗಳನ್ನು ವೀಕ್ಷಿಸಿದರು. ಹಾಗೂ ಹಿರಿಯ ನಾಗರಿಕರಿಗೆ ತಲುಪುವ ಪಿಂಚಣಿ ಯೋಜನೆಯ ಬಗ್ಗೆ ಹಿರಿಯ ನಾಗರಿಕರೊಂದಿಗೆ ಚರ್ಚೆ ನಡೆಸಿ ಸರಿಯಾದ ಸಮಯದಲ್ಲಿ ವೃದ್ಧಾಪ ವೇತನ ಪಾವತಿಯಾಗುತ್ತಿದೆಯೇ ಎಂದು ಹಿರಿಯ ನಾಗರಿಕರೊಂದಿಗೆ ಸಂವಾದ ನಡೆಸಿದರು.

ತಾಲೂಕಿನ ಡೋಣೂರು ಗ್ರಾಮ ಪಂಚಾಯಿತಿಗೆ ಭೇಟಿ ನೀಡಿ ವಿಶೇಷ ಚೇತನರಿಗೆ ಪಾವತಿಯಾಗುವ ಸರ್ಕಾರದ ಸಹಾಯಧನವು ಸರಿಯಾದ ಸಮಯದಲ್ಲಿ ಫಲಾನುಭವಿಗಳಿಗೆ ದೊರೆಯುತ್ತದೆ ಎಂದು ಅಲ್ಲಿನ ಗ್ರಾಮ ಆಡಳಿತ ಅಧಿಕಾರಿ ಜೊತೆ ಚರ್ಚೆ ನಡೆಸಿ ಫಲಾನುಭವಿಗಳ ಜೊತೆಗೆ ಸಂವಾದ ನಡೆಸಿ ಅಭಿಪ್ರಾಯವನ್ನು ಪಡೆದುಕೊಂಡರು, ನಂತರದಲ್ಲಿ ಮನರೇಗಾ ಯೋಜನೆಯ ಕಾಮಗಾರಿಗಳ ಕಡತಗಳನ್ನು, ಪ್ರಧಾನ ಮಂತ್ರಿ ಆವಾಸ್ ಯೋಜನೆಯ ಕಡತಗಳನ್ನು, 7 ರಿಜಿಸ್ಟರ್ ಗಳನ್ನು ಪರಿಶೀಲನೆ ಮಾಡಿದರು. ನಂತರದಲ್ಲಿ ನರೇಗಾ ಯೋಜನೆಯ ಫಲಾನುಭವಿಗಳ ಜೊತೆ ಸಂವಾದವನ್ನು ನಡೆಸಿ ನರೇಗಾ ಯೋಜನೆಯಿಂದ ಪಡೆದ ಲಾಭಗಳ ಬಗ್ಗೆ ಮತ್ತು ನರೇಗಾ ಕೂಲಿ ಹಣದ ಉಪಯೋಗದ ಫಲಾನುಭವಿಗಳ ಜೊತೆಗೆ ಸಂವಾದ ನಡೆಸಿದರು, ನಂತರದಲ್ಲಿ ನರೇಗಾ ಯೋಜನೆಯಡಿಯಲ್ಲಿನ ಬೋರ್‌ವೆಲ್ ರಿಚಾರ್ಜ್ ಪೀಟ್, ಸರ್ಕಾರಿ ಕನ್ನಡ ಗಂಡು ಮಕ್ಕಳ ಶಾಲಾ ಅವರಣದಲ್ಲಿನ ರಕ್ಷಣಾ ಗೋಡೆ ವೀಕ್ಷಣೆ ಮಾಡಿ ಮಾಹಿತಿ ಫಲಕದಲ್ಲಿನ ಮಾಹಿತಿಯನ್ನು ಅವಲೋಕಿಸಿದರು. ತದನಂತರದಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆಯ ವಸತಿ ಮನೆಗಳನ್ನು ವೀಕ್ಷಣೆ ಮಾಡಿ ಫಲಾನುಭವಿಗಳಿಂದ ಸೌಲಭ್ಯಗಳ ಬಗ್ಗೆ ಅಭಿಪ್ರಾಯ ತಿಳಿದುಕೊಂಡರು.

ತಾಪಂ ಇಒ ಪ್ರಕಾಶ ದೇಸಾಯಿ, ವಿಶ್ವನಾಥ್ ಶಹಾಪುರ, ಅರಣ್ಯ ಅಧಿಕಾರಿ ಪ್ರಶಾಂತ, ವಿಶ್ವನಾಥ ಪಟ್ಟಣಶೆಟ್ಟಿ, ತಾಲೂಕು ಎನ್.ಎಸ್. ಪ್ರವೀಣ ಬಾವಿಕಟ್ಟಿ,ಸಿದ್ದನಗೌಡ ಬಿರಾದಾರ,ತಾಂತ್ರಿಕ ಸಹಾಯಕರಾದ ಅಸ್ಲಮ್ ಮಕಂದರ ಹಾಗೂ ಚಂದ್ರಶೇಖರ್ ಆಡಿನ,ಗ್ರಾಪಂ ಅಭಿವೃದ್ಧಿ ಅಧಿಕಾರಿಗಳಾದ ಇಮತಾಜಾ ಮಮದಾಪುರ, ಜೈಕುಮಾರ್ ದೇವರನಾವದಗಿ, ರಾಜೇಶ್ವರಿ ಪಾಟೀಲ, ತಾಲೂಕು ಎನ್ ಆರ್ ಎಲ್ ಎಮ್ ಸಂಯೋಜಕ ಶಾಂತಮ್ಮ ಸಾಸನೂರ, ಗ್ರಾಪಂ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಮಹಿಳಾ ಸ್ವಸಹಾಯ ಸಂಘದ ಸದಸ್ಯರು, ಗ್ರಾಪಂ ಸಿಬ್ಬಂದಿ ಮತ್ತು ಅನುಷ್ಠಾನ ಇಲಾಖೆಗಳ ಸಿಬ್ಬಂದಿ ಇತರರು ಇದ್ದರು.

# ಬ್ಯಾಂಕಿಂಗ್ ಕ್ಷೇತ್ರಕ್ಕೆ ಜನರ ವಿಶ್ವಾಸವೇ ಮುಖ್ಯ: ಹೆಬ್ಬಾಳಕರ್

## ಯರಗಟ್ಟಿಯಲ್ಲಿ ಲಕ್ಷ್ಮೀ ತಾಯಿ ಸೌಹಾರ್ದ ಸಹಕಾರಿ ಸಂಘದ 9ನೇ ಶಾಖೆ ಉದ್ಘಾಟಿಸಿದ ಸಚಿವೆ

**ಯರಗಟ್ಟಿ::** ಬ್ಯಾಂಕಿಂಗ್ ಕ್ಷೇತ್ರ ವಿಶ್ವಾಸದ ಮೇಲೆ ನಿಂತುಕೊಂಡಿದೆ. ವಿಶ್ವಾಸವಿದ್ದರೆ ಮಾತ್ರ ಹಣಕಾಸು ಸಂಸ್ಥೆಗಳು ಬೆಳೆಯಲು ಸಾಧ್ಯ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರು ಹಾಗೂ ಲಕ್ಷ್ಮೀ ತಾಯಿ ಸೌಹಾರ್ದ ಸಹಕಾರಿ ಸಂಘದ ಗೌರವ ಅಧ್ಯಕ್ಷರೂ ಆದ ಲಕ್ಷ್ಮೀ ಹೆಬ್ಬಾಳಕರ್ ಹೇಳಿದರು.

ಯರಗಟ್ಟಿಯಲ್ಲಿ ಲಕ್ಷ್ಮೀ ತಾಯಿ ಸೌಹಾರ್ದ ಸಹಕಾರಿ ಸಂಘದ 9ನೇ ಶಾಖೆಯನ್ನು ಉದ್ಘಾಟಿಸಿ ಮಾತನಾಡಿದ ಸಚಿವರು, ಇಂದಿನ ಸಂದರ್ಭಗಳಲ್ಲಿ ಅನೇಕ ಕಡೆ ವಿಶ್ವಾಸ ಕಳೆದುಕೊಳ್ಳುವಂಥ ಘಟನೆಗಳು ನಡೆದಿವೆ. ಒಮ್ಮೆ ವಿಶ್ವಾಸ ಕಳೆದುಕೊಂಡಲ್ಲಿ ಅಂಥ ಸಂಸ್ಥೆಗಳು ಬೆಳೆಯಲು ಸಾಧ್ಯವಿಲ್ಲ ಎಂದರು.

ಯರಗಟ್ಟಿ ಭಾಗದ ರೈತರ, ವ್ಯಾಪಾರಸ್ಥರ, ಎಲ್ಲರ ಭವಿಷ್ಯದ ದೃಷ್ಟಿಯಿಂದ, ಎಲ್ಲರ ವಿಶ್ವಾಸದೊಂದಿಗೆ ಈ ಶಾಖೆಯನ್ನು ಆರಂಭಿಸಲಾಗಿದೆ. ಸಂಘವನ್ನು ಹೆಮ್ಮರವಾಗಿ ಬೆಳೆಸುವ ಉದ್ದೇಶ ಹೊಂದಿದ್ದೇವೆ. ಸಂಸ್ಥೆಯಲ್ಲಿ ರಾಜಕಾರಣ ತರದೆ ಉತ್ತಮ ಸೇವೆಯೊಂದಿಗೆ ಸಂಸ್ಥೆಯನ್ನು ಮುನ್ನಡೆಸಲಾಗುವುದು, ಅತ್ಯಂತ ಶಿಸ್ತಿನಿಂದ ಸಂಸ್ಥೆಯನ್ನು ನಡೆಸಲಾಗುತ್ತಿದೆ. ಎಲ್ಲರ ಹಣ ಸುರಕ್ಷಿತವಾಗಿರುತ್ತದೆ ಎಂದು ತಿಳಿಸಿದರು.

ಮುಂದಿನ ದಿನಗಳಲ್ಲಿ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದಲ್ಲೂ



ಹೆಚ್ಚಿನ ಕೆಲಸ ಮಾಡುವ ಅಪೇಕ್ಷೆಯಿದ್ದು, ಜನರ ಮಧ್ಯದಲ್ಲಿಯೇ ಇರಲು ನನಗೆ ಹೆಚ್ಚು ಇಷ್ಟ ಎಂದು ಹೇಳಿದರು.

ಹಿರಿಯ ಸಹಕಾರಿ ಧುರೀಣ ರವೀಂದ್ರ ಯಲಿಗಾರ್ ಮಾತನಾಡಿ, ಸಹಕಾರಿ ರಂಗದಲ್ಲಿ ರಾಜಕೀಯ ತರಬಾರದು. ರಾಜಕೀಯ ಬಂದರೆ ಸಂಸ್ಥೆ ದಾರಿ ತಪ್ಪುತ್ತದೆ. ಲಕ್ಷ್ಮೀ ತಾಯಿ ಸೌಹಾರ್ದ ಸಹಕಾರಿ ಸಂಘ ಯಾವುದೇ ರಾಜಕೀಯ ಇಲ್ಲದೆ, ಜನರ ವಿಶ್ವಾಸ ಗಳಿಸಿರುವುದೇ ಸಂಸ್ಥೆ ಬೆಳೆಯಲು ಕಾರಣ ಎಂದರು.

ಲಕ್ಷ್ಮೀ ಹೆಬ್ಬಾಳಕರ್ ಅವರಿಗೆ 10 ವರ್ಷಗಳಿಗಿಂತ ಹೆಚ್ಚು ಸಮಯದಿಂದ ಸವದತ್ತಿ ಭಾಗದಲ್ಲಿ ಸಂಪರ್ಕವಿದ್ದು, ಹರ್ಷ ಸಕ್ಕರೆ ಕಾರ್ಖಾನೆ ಸ್ಥಾಪಿಸುವ ಮೂಲಕ ಈ ಭಾಗದ ಜನರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಕಾರ್ಖಾನೆ ಮೇಲೆ ಜನರ ವಿಶ್ವಾಸ ಹೆಚ್ಚುತ್ತಿದ್ದು, ಕಬ್ಬು ಪೂರೈಕೆದಾರರ ಸಂಖ್ಯೆ ಬೆಳೆಯುತ್ತಿದೆ ಎಂದು ಹೇಳಿದರು.

ಸಂಘದ ಅಧ್ಯಕ್ಷ ಹಾಗೂ ವಿಧಾನ ಪರಿಷತ್ ಸದಸ್ಯ ಚನ್ನರಾಜ್ ಹಟ್ಟಿಹೊಳಿ ಮಾತನಾಡಿ, ನಂಬಿಕೆಗೆ ಇನ್ನೊಂದು ಹೆಸರಾಗಿರುವ ಲಕ್ಷ್ಮೀ ಹೆಬ್ಬಾಳಕರ್ ಅವರ ಮಾರ್ಗದರ್ಶನದಲ್ಲಿ ಸಂಸ್ಥೆಯನ್ನು ಸ್ಥಾಪಿಸಿ ಮುನ್ನ ನಡೆಸಲಾಗುತ್ತಿದೆ. ರೈತರ ಸಂಬಂಧ ಬೆಳೆದಂತೆ ಶಾಖೆಗಳು ಕೂಡ ಹೆಚ್ಚುತ್ತಿವೆ. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ದೊರೆಯುವ ಎಲ್ಲ ಸೌಲಭ್ಯಗಳನ್ನು ನಮ್ಮ ಸಂಸ್ಥೆಯಲ್ಲಿ ನೀಡಲಾಗುತ್ತಿದೆ. ಕಳೆದ ಮೂರು ವರ್ಷವೂ ಲಾಭದಲ್ಲಿದ್ದು, ಸಂಸ್ಥೆಯನ್ನು ಉತ್ತಮವಾಗಿ ನಡೆಸುತ್ತಿದ್ದೇವೆ ಎಂದರು.

ಸಂಸ್ಥೆಯ ಉಪಾಧ್ಯಕ್ಷ ಮಹಾಂತೇಶ್ ಮತ್ತಿಕೊಪ್ಪ ಮಾತನಾಡಿ, 6ಕೋಟಿ ರೂಪಾಯಿ ಬಂಡವಾಳದಿಂದ ಆರಂಭವಾದ ಸಂಸ್ಥೆ ಇಂದು 45 ಕೋಟಿ ರೂ.ವರೆಗೂ ತಲುಪಿದೆ. ಸದಸ್ಯರ ಸಂಖ್ಯೆ 1400 ರಿಂದ 15000ಕ್ಕೇರಿದೆ. ದಿನದಿಂದ ದಿನಕ್ಕೆ ವಿಶ್ವಾಸಾರ್ಹವಾಗಿ ಸಂಸ್ಥೆ ಬೆಳೆಯುತ್ತಿದೆ ಎಂದು ತಿಳಿಸಿದರು.ಈ ವೇಳೆ ಶಾಸಕ ವಿಶ್ವಾಸ್ ವೈದ್ಯ, ಸ್ಥಳೀಯ ಮುಖಂಡರಾದ ಟಿ.ಕೆ.ಪಾಟೀಲ್, ವಿಠಲ ದೇವರಡ್ಡಿ, ಸಂಸ್ಥೆಯ ಸಿಇಒ ಸಾಗರ ಇಂಗಳಗಿ ಮೊದಲಾದವರು ಇದ್ದರು.

# ವಕ್ಫ್ ಆಸ್ತಿ ವಿರೋಧಿಸಿ ರಸ್ತೆ ತಡೆದು ಪ್ರತಿಭಟನೆ

**ಬಸವನಬಾಗೇವಾಡಿ:** ಪಟ್ಟಣದ ಬಸವೇಶ್ವರ ವೃತ್ತದಲ್ಲಿ ವಿಶ್ವಹಿಂದು ಪರಿಷತ್, ಬಜರಂಗದಳ ನೇತೃತ್ವದಲ್ಲಿ ಸೋಮವಾರ ರೈತರ ಹಾಗೂ ಸಾರ್ವಜನಿಕ ಆಸ್ತಿ ಉಳಿವಿಗಾಗಿ ಸೋಮವಾರ ರಸ್ತಾ ರೋಖೋ ಹಾಗೂ ವಕ್ ವಿರೋಧಿಸಿ ಹೋರಾಟ ಜರುಗಿತು. ಪ್ರತಿಭಟನಾ ಕಾರರು ಕೆಲ ಹೊತ್ತು ವಕ್ಫ್ ಕಾಯ್ದೆ ವಿರೋಧಿಸಿ ರಾಜ್ಯ ಸರ್ಕಾರದ ಕ್ರಮವನ್ನು ವಿರೋಧಿಸಿದರು. ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಶಿರಸ್ತೇದಾರ ಎಂ.ಎಸ್. ಜಾಗೀರದಾರ ಅವರಿಗೆ ಮನವಿ ಸಲ್ಲಿಸಿದರು.


ಪ್ರತಿಭಟನೆ ಉದ್ದೇಶಿಸಿ ಮನಗೂಳಿ ಹಿರೇಮಠದ ಅಭಿನವ ಸಂಗನಬಸವ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ರೈತರು ದಶಕಗಳಿಂದ ಬಿತ್ತಿ ಬೆಳೆಯುತ್ತಿರುವ ಜಮೀನುಗಳನ್ನು, ಮಠ-ಮಂದಿರ, ಶಾಲೆಗಳ ಸ್ವತ್ತುಗಳನ್ನು ವಕ್ಫ್ ಮಂಡಳಿಯ ಆಸ್ತಿಯನ್ನಾಗಿ ಮಾಡಲು ಹೊರಟವರಿಗೆ ತಕ್ಕ ಪಾಠ ಕಲಿಸುವ ಸಾಮರ್ಥ್ಯ ನಮ್ಮ ರೈತ ಬಾಂಧವ-ರಿಗೆ ಹಿಂದು ಸಮಾಜಕ್ಕೆ ಇದೆ. ಸರ್ಕಾರ ರೈತರ ಉತಾರೆಯಲ್ಲಿ ವಕ್ ಆಸ್ತಿ ದಾಖಲಿಸಿ ನೀಡಿದ ನೊಟೀಸ್ ಮರಳಿ ಪಡೆದರೆ ಸಾಲದು ಉತಾರೆ ಪಹಣಿಯ ಕಾಲಂ ನಂ.11 ರಲ್ಲಿರುವ ವಸ್ತಿ ಎಂದು ಬರೆದಿರುವದನ್ನು ಶರತ್‌ಬದ್ಧ ದಾಖಲೆಗಳಿಲ್ಲದೇ ಮೊದಲಿನ ಉತಾರಿದಂತೆ ತಿದ್ದುಪಡಿ ಮಾಡುಬೇಕು. ರೈತ ಬಾಂಧವರಿಗೆ ಸರ್ಕಾರ ಯಾವುದೇ ರೀತಿಯಲ್ಲಿ ತೊಂದರೆ ಕೊಡಬಾರದು. ರಾಜ್ಯ ಸರ್ಕಾರ ಈ



ನಿಟ್ಟಿನಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದರು.

ಮುಖಂಡರಾದ ಸಂಗನಗೌಡ ಚಿಕ್ಕೊಂಡ, ವಿನುತ ಕಲ್ಲೂರ, ಡಾ.ಬಸವರಾಜ ಚವ್ಹಾಣ ಮಾತನಾಡಿದರು. ಪ್ರತಿಭಟನೆಯಲ್ಲಿ ಪ್ರದೀಪ ಮುಂಜಾನೆ, ವಿವೇಕಾನಂದ ಕಲ್ಯಾಣಶೆಟ್ಟಿ, ಮಹೇಶ ಸಾಲವಾಡಗಿ, ಅಶ್ವಿನಿಕುಮಾರ ಪಟ್ಟಣಶೆಟ್ಟಿ, ಮಲ್ಲನಗೌಡ ಅಥಣಿ, ರಾಹುಲ ಜಗತಾಪ, ಯಮನೂರಿ ಜಮಖಂಡಿ, ಮಣಿಕಂಠ ಕಲ್ಲೂರ, ಭಾಗ್ಯವಂತ ಇಂಗಳೇಶ್ವರ ಅಪ್ಪು ಭೂತನಾಳ, ಬಸವರಾಜ ಬಿಜಾಪುರ, ರಾಜು ಮುಳವಾಡ, ಮಹಾದೇವ ತಳವಾರ, ದಯಾನಂದ ಸಾರವಾಡ ಸೇರಿದಂತೆ ಇತರರು ಭಾಗವಹಿಸಿದ್ದರು.

# ವೀರರಾಣಿ ಒನಕೆ ಓಬವ್ವ ಜಯಂತಿ: ಜಿಲ್ಲಾಡಳಿತದಿಂದ ಪುಷ್ಪ ನಮನ ಸಲ್ಲಿಕೆ




ಕೊಪ್ಪಳ : ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ವೀರರಾಣಿ ಒನಕೆ ಓಬವ್ವ ಜಯಂತಿಯನ್ನು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸೋಮವಾರ ಆಚರಿಸಲಾಯಿತು.

ಅಪರ ಜಿಲ್ಲಾಧಿಕಾರಿಗಳಾದ ಸಿದ್ರಾಮೇಶ್ವರ ಅವರು ವೀರರಾಣಿ ಒನಕೆ ಓಬವ್ವ ಅವರ ಭಾವಚಿತ್ರಕ್ಕೆ ಪುಷ್ಪಾರ್ಪಣೆ ಮಾಡಿ ಗೌರವ ನಮನ ಸಲ್ಲಿಸಿದರು.

ಈ ಸಂದರ್ಭದಲ್ಲಿ ಕೊಪ್ಪಳ ನಗರಸಭೆ ಸದಸ್ಯ ಸಿದ್ದು ಮ್ಯಾಗೇರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕೊಟ್ರೇಶ ಮರಬನಹಳ್ಳಿ, ಡಾ.ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮದ ವ್ಯವಸ್ಥಾಪಕಿ ಪುಷ್ಪಲತಾ, ಚಲವಾದಿ ಸಮಾಜದ ಮುಖಂಡರಾದ ಜಿ.ಎಂ.ಬೆಲ್ಲದ್, ಗವಿಸಿದ್ದಪ್ಪ ಚಲವಾದಿ, ಸಿದ್ದು ಮ್ಯಾಗೇರಿ, ಸಿದ್ರಾಮ ಹೊಸಮನಿ, ಹನುಮಂತಪ್ಪ ಬಾಗಾಳಿಗಿಡದ, ಶಾಂತಪ್ಪ ಸೊಂಪುರ, ಗವಿಸಿದ್ದಪ್ಪ ಬೆಲ್ಲಾದ್, ಅನಿಲ್ ಕುಮಾರ, ಕೃಷ್ಣ ಇಟ್ಟಂಗಿ, ಮುತ್ತುರಾಜ್ ಕುಷ್ಟಗಿ ಸೇರಿದಂತೆ ಮತ್ತಿತರರು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

### ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ಸಭೆ

# ಐತಿಹಾಸಿಕ ಪ್ರವಾಸಿ ತಾಣಗಳ ಅಭಿವೃದ್ಧಿಗೆ ಹೆಚ್ಚಿನ ಗಮನ ಹರಿಸಿ – ಸಿದ್ರಾಮೇಶ್ವರ

ಕೊಪ್ಪಳ, : ಜಿಲ್ಲೆಯ ಐತಿಹಾಸಿಕ ಪ್ರವಾಸಿ ತಾಣಗಳ ಅಭಿವೃದ್ಧಿಗೆ ಹೆಚ್ಚಿನ ಗಮನ ಹರಿಸಬೇಕು ಎಂದು ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ಅವರು ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅವರು ಸೋಮವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಕೊಪ್ಪಳ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕೊಪ್ಪಳ ಜಿಲ್ಲೆಯು ಐತಿಹಾಸಿಕ ಪ್ರವಾಸಿ ತಾಣಗಳನ್ನು ಹೊಂದಿದ್ದು, ಜಿಲ್ಲೆಯ ಪ್ರವಾಸೋದ್ಯಮವನ್ನು ರಾಷ್ಟ್ರೀಯ ಮಟ್ಟದಲ್ಲಿ ಅಭಿವೃದ್ಧಿಪಡಿಸಲು ಅಧಿಕಾರಿಗಳು ಕ್ರಮ ವಹಿಸಬೇಕು. ಕೊಪ್ಪಳ ಜಿಲ್ಲೆಯ ಹಿರೇಬೆಣ–ಕಲ್ ಗ್ರಾಮದ ಮೋರೆರ ಬೆಟ್ಟವು ವಿಶ್ವ ಪಾರಂಪರಿಕ ತಾಣದ ತಾತ್ಕಾಲಿಕ ಪಟ್ಟಿಯಲ್ಲಿ ಸೇರ್ಪಡೆಗೊಂಡಿದ್ದು, ಇದರ ರಕ್ಷಣೆ ಹಾಗೂ ಅಭಿವೃದ್ಧಿ ಜೊತೆಗೆ ಜಿಲ್ಲೆಯಲ್ಲಿರುವ ಇತರೆ ಸ್ಮಾರಕಗಳನ್ನು ಗುರುತಿಸಿ ವಿಶ್ವ ಪಾರಂಪರಿಕ ಪಟ್ಟಿಯಲ್ಲಿ ಸೇರ್ಪಡೆಗೊಳಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತಾಗಲಿ. ಕೊಪ್ಪಳ



ನಗರದ ಗವಿಮಠ ಹಾಗೂ ಮಳೆಮಲ್ಲೇಶ್ವರ ಬೆಟ್ಟದಲ್ಲಿರುವ ಅಶೋಕನ ಶಿಲಾಶಸನಕ್ಕೆ ಹೋಗಲು ಕಡಿದಾದ ದಾರಿ ಇದ್ದು ಇದನ್ನು ಸಂಪರ್ಕಿಸಲು ರಸ್ತೆ ಕಲ್ಪಿಸಬೇಕು. ಅಲ್ಲಲ್ಲಿ ಮಾರ್ಗ ಮಧ್ಯೆ ಶಿಲಾಶಾಸನದ ಮಾಹಿತಿ ಫಲಕಗಳನ್ನು ಅಳವಡಿಕೆ ಮಾಡಬೇಕು. ಮಳೆ, ಗಾಳಿಯಿಂದ ಶಿಲಾಶಾಸನ ಧಕ್ಕೆ ಆಗದ ರೀತಿ ರಕ್ಷಣೆ ನೀಡಲು ಅಗತ್ಯ ಕ್ರಮ ಕೈಗೊಳ್ಳಿ. ಕನಕಗಿರಿಯ ವೆಂಕಟಪ್ಪ ಬಾವಿ, ಪುಷ್ಕರಣಿಗಳು ಸೇರಿದಂತೆ ಜಿಲ್ಲೆಯ ಐತಿಹಾಸಿಕ ಪ್ರವಾಸಿ ತಾಣಗಳ ಪಟ್ಟಿ ಮಾಡಿ, ಅವುಗಳನ್ನು ಸಂರಕ್ಷಿತ ತಾಣಗಳೆಂದು ಘೋಷಣೆ ಮಾಡಲು ಕ್ರಮ ವಹಿಸಬೇಕು. ಜಿಲ್ಲೆಯ ಪ್ರವಾಸಿ ತಾಣಗಳನ್ನು ಕೊಪ್ಪಳ ಬ್ರ್ಯಾಂಡ್ ಯೋಜನೆಯಡಿ ಜನರಿಗೆ ಹೆಚ್ಚಿನ ಅರಿವು ಮೂಡಿಸಬೇಕು ಎಂದು ಹೇಳಿದರು.

ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಆನೆಗುಂದಿ ಭಾಗದ ಶ್ರೀ ಅಂಜನಾದ್ರಿ ಬೆಟ್ಟ, ಪಂಪಾ ಸರೋವರ ಈ ಪ್ರವಾಸಿ ತಾಣಗಳಿಗೆ ದೇಶದ ವಿವಿಧ ರಾಜ್ಯಗಳಿಂದ ಹಾಗೂ ವಿದೇಶಿಗರು ಸೇರಿ ಅಪಾರ ಜನಸಂಖ್ಯೆಯಲ್ಲಿ ಬೇಟಿ ನೀಡುತಿದ್ದು, ಇಂತಹ ಸ್ಥಳಗಳ ಅಭಿವೃದ್ಧಿ ಜೊತೆಗೆ ಪ್ರವಾಸಿಗರಿಗೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಬೇಕು. ಜಿಲ್ಲೆಯ ಪ್ರವಾಸೋದ್ಯಮವನ್ನು ಉತ್ತೇಜಿಸಲು ಇಕೋ ಟೂರಿಸಂ (Eco Tourism)ಗೆ ಹೆಚ್ಚು ಒತ್ತು ನೀಡುವುದು ಅವಶ್ಯಕವಾಗಿದೆ. ಜಿಲ್ಲೆಯಲ್ಲಿರು ಪ್ರವಾಸಿ ತಾಣಗಳನ್ನು ಅಭಿವೃದ್ಧಿಪಡಿಸಿದರೆ ಪ್ರವಾಸಿಗರ ಸಂಖ್ಯೆ ಹೆಚ್ಚಾಗಿ ಜಿಲ್ಲೆಯಲ್ಲಿ ಆರ್ಥಿಕವಾಗಿ ಆದ–ಾಯ ಮತ್ತು ಸ್ಥಳೀಯ ಜನರಿಗೆ ಉದ್ಯೋಗ ಅವಕಾಶ ಸೃಷ್ಟಿಯಾಗುತ್ತದೆ. ಕೊಪ್ಪಳದ ಹುಲಿಕೆರೆ ಹಾಗೂ ಗಂಗಾವತಿ ತಾಲ್ಲೂಕಿನ ಸಾಣಾಪುರ ಪ್ರದೇಶದಲ್ಲಿ ಸುಂದರವಾದ ಬೆಟ್ಟಗುಡ್ಡಗಳಿದ್ದು, ರಾಕ್ ಕ್ಲೈಬಿಂಗ್, ಸ್ಲ್ಯಾಕ್ ಲೈನ್ ಮುಂತಾದ ಪ್ರವಾಸೋದ್ಯಮ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು ಎಂದು ಸಂಬಂಧಿಸಿದ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಉಪವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ್ ಮಾಲಗಿತ್ತಿ, ಕೊಪ್ಪಳ ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ಡಿ.ಮಂಜುನಾಥ ಸೇರಿದಂತೆ ವಿವಿಧ ಇಲಾಖೆಗಳ ಹಾಗೂ ಪುರಾತತ್ವ ಇಲಾಖೆ ಅಧಿಕಾರಿಗಳು, ತಹಶಿಲ್ದಾರರು ಉಪಸ್ಥಿತ–ರಿದ್ದರು.

****

### ಚೂರು–ಪಾರು

# ಪ್ರಸ್ತಾವನೆ ಆಹ್ವಾನ

ಗದಗ : ಪ್ರತಿ ವರ್ಷ ಡಿಸೆಂಬರ್ 03 ರಂದು ವಿಶ್ವ ವಿಕಲಚೇತನರ ದಿನಾಚಾರಣೆಯನ್ನು ರಾಜ್ಯ ಮಟ್ಟದಲ್ಲಿ ಆಚರಿಸಲಾಗುತ್ತಿದ್ದು, ಈ ಸಂದರ್ಭದಲ್ಲಿ ವಿಕಲಚೇತನರ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿರುವ ವಿಕಲಚೇತನ ವ್ಯಕ್ತಿಗಳ ಅಥವಾ ಅವರಿಗೆ ಸಹಕರಿಸುವ ಸಾಮಾನ್ಯ ವ್ಯಕ್ತಿಗಳನ್ನು ವಿಶೇಷ ಅಹ್ವಾನಿತರನ್ನಾಗಿ ಕಾರ್ಯಕ್ರಮಕ್ಕೆ ಆಹ್ವಾನಿಸಿ ಗೌರವಿಸಲಾಗುತ್ತದೆ.

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಇಲಾಖೆ, ಗದಗ ವ್ಯಾಪ್ತಿಗೆ ಒಳಪಡುವ ವಿಕಲಚೇತನರು ವಿಕಲಚೇತನರ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ (ವಿಕಲಚೇತನ ವ್ಯಕ್ತಿಗಳು ಅಥವಾ ಅವ–ರಿಗೆ ಸಹಕರಿಸುವ ಸಾಮಾನ್ಯ ವ್ಯಕ್ತಿಗಳು) ವ್ಯಕ್ತಿಗಳ ಹೆಸರನ್ನು ಅವರ ಸಾಧನೆಯ ವಿವರಗಳನ್ನೊಳಗೊಂಡ ಕಿರು ಪರಿಚಯದೊಂದಿಗೆ ಪ್ರಸ್ತಾವನೆಯನ್ನು ನವೆಂಬರ್ 19 ರೊಳಗಾಗಿ ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಕಛೇರಿಗೆ ಸಲ್ಲಿಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಗದಗ ಜಿಲ್ಲೆಯ ತಾಲ್ಲೂಕ ಪಂಚಾಯತಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಮ್. ಆರ್.ಡಬ್ಲ್ಯೂ ?ಯಗಳಾದ ಖಾಜಾಹುಸೇನ ಕಾತರಕಿ, ತಾಲ್ಲೂಕ ಪಂಚಾಯತ, ಗದಗ 8867556465, ಬಸವರಾಜ ಓಲಿ, ತಾಲ್ಲೂಕ ಪಂಚಾಯತ, ರೋಣ – 9741615926, ಶಶಿಕಲಾ ವಡ್ಡಟ್ಟಿ, ತಾಲ್ಲೂಕ ಪಂಚಾಯತ, ಮುಂಡರಗಿ 9611922445, ಭಾರತಿ ಮುರಶಿಳ್ಳಿ, ತಾಲ್ಲೂಕ ಪಂಚಾಯತ, ಶಿರಹಟ್ಟಿ 8951128679 ಶಿವಾನಂದ ಹಾದಿಮನಿ, ತಾಲ್ಲೂಕ ಪಂಚಾಯತ, ನರಗುಂದ – 9591679022 ಹಾಗೂ ವಿಕಲಚೇತನರ ಹಾಗೂ ಹಿರಿಯ ನಾಗ–ರಿಕರ ಸಬಲೀಕರಣ ಇಲಾಖೆ, ಗದಗ ಜಿಲ್ಲಾಡಳಿತ ಭವನ, ಕೊಠಡಿ ಸಂಖ್ಯೆ: 029 ರ ದೂರವಾಣಿ ಸಂಖ್ಯೆ: 08372–220419 ಮೂಲಕ ಸಂಪರ್ಕಿಸಬಹುದಾಗಿದೆ.

## ರಂಗಾಯಣ ಧಾರವಾಡ ಕಲಾವಿದರ ತಾತ್ಕಾಲಿಕ ಆಯ್ಕೆಗೆ ಅರ್ಜಿ ಆಹ್ವಾನ

ಧಾರವಾಡ : ರಂಗಾಯಣದಿಂದ ಡಿಸೆಂಬರ್ ಮಾಹೆಯಲ್ಲಿ ರಂಗಭೂಮಿ ಅನುಭವವಿರುವ ನುರಿತ ಕಲಾವಿದರಿಂದ ಹೊಸ ನಾಟಕವನ್ನು ಸಿದ್ಧಪಡಿಸುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ.

ಸಿದ್ಧಪಡಿಸುವ ಹೊಸ ನಾಟಕಕ್ಕೆ 15 ಜನ ಕಲಾವಿದರನ್ನು ಆಯ್ಕೆ ಮಾಡಿಕೊಳ್ಳಲಾಗುವುದು. ಅರ್ಹತೆಯುಳ್ಳ 22 ರಿಂದ 35 ವರ್ಷದೊಳಗಿನ ವಯೋಮಿತಿಯುಳ್ಳ ಆಸಕ್ತ ಕಲಾವಿದರನ್ನು ತಾತ್ಕಾಲಿಕವಾಗಿ ಆಯ್ಕೆ ಮಾಡಲಾಗುವುದು.

ಆಸಕ್ತ ಕಲಾವಿದರು ಸ್ವ–ವಿವರದೊಂದಿಗೆ ನವೆಂಬರ 28, 2024 ಸಂಜೆ 5 ಗಂಟೆಯ ಒಳಗಾಗಿ ಆಡಳಿತಾಧಿಕಾರಿಗಳು, ರಂಗಾಯಣ ಪಂ. ಬಸವರಾಜ ಬಯಲು ರಂಗಮಂದಿರ, ಕಾಲೇಜು ರಸ್ತೆ, ಧಾರವಾಡ–580001 ವಿಳಾಸಕ್ಕೆ ಮುದ್ದಾಂ, ಅಂಚೆ ಮೂಲಕ ಅಥವಾ ಇಮೇಲ್ (dharwad-rangayana@gmail.com ) ಮೂಲಕ ಅರ್ಜಿ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ, 0836–2441706ಗೆ ಸಂಪರ್ಕಿಸಲು ರಂಗಾಯಣದ ಆಡಳಿತಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

## ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯ ನ.೦೯ ರಿಂದ ಜಿಲ್ಲಾಡಳಿತದಿಂದ ವಿಶೇಷ ಅಭಿಯಾನ: ಸದುಪಯೋಗಕ್ಕೆ ಮನವಿ

ಕೊಪ್ಪಳ : ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯ 2025 ರ ನಿಮಿತ್ತ ಕೊಪ್ಪಳ ಜಿಲ್ಲಾಡಳಿತದಿಂದ ವಿಶೇಷ ಅಭಿಯಾನವನ್ನು ನ.09 ರಿಂದ ನ.24ರವರೆಗೆ 2 ಮತ್ತು 4ನೇ ಶನಿವಾರ ಹಾಗೂ ಭಾನುವಾರದಂದು ಜಿಲ್ಲೆಯ 5 ವಿಧಾನಸಭಾ ಕ್ಷೇತ್ರದ ಎಲ್ಲಾ ಮತಗಟ್ಟೆಗಳಲ್ಲಿ ಹಮ್ಮಿಕೊಳ್ಳಲಾಗಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳುವಂತೆ ಜಿಲ್ಲಾಧಿಕಾರಿ ನಲಿನ್ ಅತುಲ್ ಅವರು ತಿಳಿಸಿದ್ದಾರೆ.

ಭಾರತ ಚುನಾವಣಾ ಆಯೋಗದ ವೇಳಾಪಟ್ಟಿಯನ್ವಯ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯ 2025ರ ಸಂಬಂಧ ಜಿಲ್ಲೆಯ ವಿಧಾನಸಭಾ ಕ್ಷೇತ್ರಗಳಾದ 60–ಕುಷ್ಟಗಿ, 61–ಕನಕಗಿರಿ, 62–ಗಂಗಾವತಿ, 63–ಯಲಬುರ್ಗಾ ಮತ್ತು 64–ಕೊಪ್ಪಳ ವಿಧಾನಸಭಾ ಕ್ಷೇತ್ರಗಳ ಕರಡು ಮತದಾರರ ಪಟ್ಟಿಗಳನ್ನು ಅಕ್ಟೋಬರ್ 29 ರಂದು ಪ್ರಕಟಿಸಲಾಗಿದೆ?.

ವಿಶೇಷ ಅಭಿಯಾನ ವಿವರ: ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯದ ವಿಶೇಷ ಅಭಿಯಾನವು ನ.09, 10, 23 ಹಾಗೂ ನ.24 ರಂದು ನಡೆಯಲಿದ್ದು, ಕೊಪ್ಪಳ ಜಿಲ್ಲೆಯ 5 ವಿಧಾನಸಭಾ ಕ್ಷೇತ್ರಗಳಲ್ಲಿನ ಎಲ್ಲಾ ಮತಗಟ್ಟೆಗಳಲ್ಲಿ ಎಲ್ಲಾ ಬೂತ್ ಮಟ್ಟದ ಅಧಿಕಾರಿಗಳು ಹಾಗೂ ಮೇಲ್ವಿಚಾರಕರು ಉಪಸ್ಥಿತರಿರುತ್ತಾರೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ವಿಶೇಷ ಅಭಿಯಾನದಲ್ಲಿ ಪಾಲ್ಗೊಂಡು ಮತದಾರರ ಪಟ್ಟಿಯಲ್ಲಿ ಸೇರ್ಪಡೆ, ಮಾರ್ಪಾಡು, ಬದಲಾವಣೆ ಹಾಗೂ ತೆಗೆದು ಹಾಕಲು ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಸಲ್ಲಿಸಬೇಕು. ಈ ವಿಶೇಷ ಅಭಿಯಾನವನ್ನು ಯಶಸ್ವಿಗೊಳಿಸುವಂತೆ ಜಿಲ್ಲಾಧಿಕಾರಿಗಳ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ.

## ಇ–ಶ್ರಮ್ ನೋಂದಾಯಿತ ಕಾರ್ಮಿಕರಿಗೆ ಆದ್ಯತಾ ಪಡಿತರ ಚೀಟಿ ವಿತರಣೆ

ಬೆಂಗಳೂರು : ಸರ್ವೋಚ್ಚ ನ್ಯಾಯಾಲಯವು ಇ–ಶ್ರಮ್ ನೋಂದಾಯಿತ ಕಾರ್ಮಿಕರಿಗೆ ಆದ್ಯತಾ ಪಡಿತರ ಚೀಟಿ (ಬಿ.ಪಿ.ಎಲ್) ನೀಡಲು ಆದೇಶಿಸಿದ್ದು, ಆದ್ಯತಾ ಪಡಿತರ ಚೀಟಿ ಹೊಂದಲು ಅರ್ಹ ಇ–ಶ್ರಮ್ ನೋಂದಾಯಿತ ಕಾರ್ಮಿಕರಿಗೆ ಆದ್ಯತಾ ಪಡಿತರ ಚೀಟಿ ನೀಡುವ ಕಾರ್ಯ ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಪ್ರಾರಂಭವಾಗಿರುತ್ತದೆ.

ಆದ್ಯತಾ ಪಡಿತರ ಚೀಟಿ ಹೊಂದಿಲ್ಲದ ಇ–ಶ್ರಮ್ ನೋಂದಾಯಿತ ಎಲ್ಲಾ ಅರ್ಹ ಕಾರ್ಮಿಕರು ನಿಮ್ಮ ಹತ್ತಿರದ ಆಹಾರ, ನಾಗ–ರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯನ್ನು ಸಂಪರ್ಕಿಸುವುದು. ಹೆಚ್ಚಿನ ಮಾಹಿತಿಗಾಗಿ ಟೋಲ್ ಫ್ರೀ ದೂರವಾಣಿ ಸಂಖ್ಯೆ:1800–425–9339 ಅಥವಾ ಸಹಾಯವಾಣಿ 1967ಕ್ಕೆ ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 5.30 ಗಂಟೆಯವರೆಗೂ ಸಂಪರ್ಕಿಸುವಂತೆ ಆಹಾರ, ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನ.೧೪ ರಿಂದ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮಗಳು

ಕೊಪ್ಪಳ : ಕೊಪ್ಪಳ ಜಿಲ್ಲೆಯಲ್ಲಿ ನವೆಂಬರ್ 14 ರಿಂದ ನವೆಂಬರ್ 20ರವರೆಗೆ 71ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಹಕಾರ ಸಂಘಗಳ ಉಪನಿಬಂಧಕರು ತಿಳಿಸಿದ್ದಾರೆ.

71ನೇ ಅಖಿಲ ಭಾರತ ಸಹಕಾರ ಸಪ್ತಾಹ–2024ರ ಮುಖ್ಯಧ್ಯೇಯವು ವಿಕಸಿತ ಭಾರತ ನಿರ್ಮಾಣದಲ್ಲಿ ಸಹಕಾರ ಸಂಸ್ಥೆಗಳ ಪಾತ್ರ ಎಂಬುದಾಗಿದ್ದು, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಬೆಂಗಳೂರು, ಕೊಪ್ಪಳ ಜಿಲ್ಲಾ ಸಹಕಾರ ಯೂನಿಯನ್ ಮತ್ತು ಕೊಪ್ಪಳ ಸಹಕಾರ ಇಲಾಖೆ ಮತ್ತು ಜಿಲ್ಲೆಯ ವಿವಿಧ ಸಹಕಾರ ಸಂಘಗಳ ಸಂಯುಕ್ತ ಆಶ್ರಯದಲ್ಲಿ 7 ದಿನಗಳ ಕಾಲ ಕಾರ್ಯಕ್ರಮಗಳು ನಡೆಯಲಿವೆ.

ಸಹಕಾರ ಸಂಘಗಳ ಉಪನಿಬಂಧಕರ ಮನವಿ: 7 ದಿನಗಳಲ್ಲಿ ಕಡ್ಡಾಯವಾಗಿ ಸಹಕಾರ ಸಂಘಗಳ ಕಟ್ಟಡದ ಮೇಲೆ ಸಪ್ತವರ್ಣದ ಸಹಕಾರ ಬಾವುಟವನ್ನು ಹಾರಿಸುವುದರೊಂದಿಗೆ ಸಹಕಾರ ಕ್ಷೇತ್ರದ ಅಸ್ತಿತ್ವವನ್ನು ಸಾರ್ವಜನಿಕರಿಗೆ ತೋ–ರಿಸಿಕೊಡಬೇಕು. ಅಂದಿನ ದಿನಗಳಲ್ಲಿ ಹಿರಿಯ ಸಹಕಾರಿಗಳಿಗೆ ಅವರ ಸೇವೆಯನ್ನು ಗುರುತಿಸಿ ಗೌರವಿಸುವ ಕಾರ್ಯಕ್ರಮ, ಹೊಸ ಯೋಜನೆಗಳ ಅನುಷ್ಠಾನ ಮುಂತಾದ ನೈಜ ಅರ್ಥಪೂರ್ಣ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಈ ಹಿನ್ನಲೆಯಲ್ಲಿ ಜನಸಾಮಾನ್ಯರಿಗೆ ಹಾಗೂ ಸಹಕಾರಿಗಳಿಗೆ ಉಪಯುಕ್ತವಾಗುವಂಥಹ ಉಚಿತ ಆರೋಗ್ಯ ತಪಾಷಣೆ ಶಿಬಿರ, ಲಸಿಕೆ ಕಾರ್ಯಕ್ರಮ, ರಕ್ತದಾನ ಶಿಬಿರ, ಸಹಕಾರ ಸಂಘಗಳು ಎದುರಿಸುತ್ತಿರುವ ಸವಾಲುಗಳು, ಸವಾಲುಗಳನ್ನು ಎದುರಿಸಲು ಅಗತ್ಯವಾದ ಮಾರ್ಗೋಪಾಯಗಳು, ಸಂವಾದ ಕಾರ್ಯಕ್ರಮಗಳು, ವಿಡಿಯೋ ಕಾನ್ಫರೆನ್ಸ್, ವೆಬಿನಾರ್ ಮುಂತಾದ ಸಾಮಾಜಿ–ಕ ಕಳಕಳಿಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದಾಗಿದೆ. ಕಾರಣ ಜಿಲ್ಲೆಯ ಎಲ್ಲಾ ಸಹಕಾರ ಸಂಘಗಳ ಆಡಳಿತ ಮಂಡಳಿ ಸದಸ್ಯರು ಮತ್ತು ಸಿಬ್ಬಂದಿಯು ಕಾರ್ಯಕ್ರಮ ಜರುಗುವ ಸ್ಥಳದಲ್ಲಿ ಹಾಜರಾಗಿ ಸಹಕಾರ ಚಳುವಳಿಯನ್ನು ಬಲಪಡಿಸಲು ಕೋರಲಾಗಿದೆ ಎಂದು ಸಹಕಾರ ಸಂಘಗಳ ಉಪನಿಬಂಧಕರು ಮನವಿ ಮಾಡಿದ್ದಾರೆ.

ಸಂವಾದ ಯಾವಾಗ: "ಸಹಕಾರ ಸಚಿವಾಲಯದ ನೂತನ ಪ್ರಯತ್ನಗಳ ಮೂಲಕ ಸಹಕಾರ ಚಳುವಳಿಯನ್ನು ಬಲಪಡಿಸುವುದು" ಕುರಿತು ನ.14ರಂದು ಬೆಳ್ಳಿಗ್ಗೆ 11 ಗಂಟೆಗೆ ಕುಷ್ಟಗಿ ತಾಲ್ಲೂಕಿನ ಹಿರೇಮನ್ನಾಪೂರದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಸಂವಾದ ನಡೆಯಲಿದೆ. ಅದೇ ರೀತಿ "ಸಹಕಾರ ಸಂಸ್ಥೆಗಳಲ್ಲಿ ಅನ್ವೇಷಣೆ, ತಾಂತ್ರಿಕತೆ ಮತ್ತು ಉತ್ತಮ ಆಡಳಿತ" ಕುರಿತು ನ.15ರ ಬೆಳ್ಳಿಗ್ಗೆ 11ಕ್ಕೆ ಗಂಗಾವತಿ ತಾಲ್ಲೂಕಿನ ಜಂಗಮರ ಕಲ್ಗುಡಿ ಗ್ರಾಮದ ಜನತಾ ಕ್ಯಾಂಪ್‌ನ ಇ.ಸಿ.ಐ ಸಭಾಭವನದಲ್ಲಿ, "ಉದ್ಯಮಶೀಲತೆ, ಉದ್ಯೋಗ ಮತ್ತು ಕೌಶಲ್ಯಭಿವೃದ್ಧಿಯನ್ನು ಉತ್ತೇಜಿಸುವಲ್ಲಿ ಸಹಕಾರ ಸಂಸ್ಥೆಗಳ ಪಾತ್ರ" ವಿಷಯ ಕು–ರಿತು ನ.16ರ ಬೆಳ್ಳಿಗ್ಗೆ 11ಕ್ಕೆ ಯಲಬುರ್ಗಾ ತಾಲ್ಲೂಕು ಪ್ರಾಥಮಿಕ ಶಿಕ್ಷಕರ ಪತ್ತಿನ ಸಹಕಾರ ಸಂಘದ ಸಭಾಂಗಣದಲ್ಲಿ, "ಸಹಕಾರಿ ಉದ್ಯಮಗಳಲ್ಲಿ ಪರಿವರ್ತನೆ" ವಿಷಯ ಕುರಿತು ನ.17ರ ಬೆಳ್ಳಿಗ್ಗೆ 11ಕ್ಕೆ ಕುಷ್ಟಗಿ ತಾಲ್ಲೂಕಿನ ಹನುಮನಾಳ ಹಾಲು ಉತ್ಪಾದಕರ ಸಹಕಾರ ಸಂಘದ ಸಭಾಂಗಣದಲ್ಲಿ, "ಸಹಕಾರ ಸಂಸ್ಥೆಗಳ ನಡುವೆ ಸಹಕಾರವನ್ನು ಬಲಪಡಿಸುವುದು" ವಿಷಯ ಕುರಿತು ನ.18ರ ಬೆಳ್ಳಿಗ್ಗೆ 11ಕ್ಕೆ ಕೊಪ್ಪಳ ನಗರದ ಜಿಲ್ಲಾ ಸಹಕಾರ ಯೂನಿಯನ್ ಸಭಾಂಗಣದಲ್ಲಿ, "ಮಹಿಳೆಯರು, ಯುವಕರು ಮತ್ತು ಅಬಲವರ್ಗಗಳಿಗಾಗಿ ಸಹಕಾರ ಸಂಸ್ಥೆಗಳು" ವಿಷಯ ಕುರಿತು ನ19ರ ಬೆಳ್ಳಿಗ್ಗೆ 11ಕ್ಕೆ ಕೊಪ್ಪಳ ನಗರದ ಗಾಣಿಗರ ಸಮುದಾಯ ಭವನದಲ್ಲಿ, "ಉತ್ತಮ ವಿಶ್ವ ನಿರ್ಮಾಣ ಹಾದಿಗಾಗಿ ಹಾಗೂ ಸುಸ್ಥಿರ ಅಭಿವೃದ್ಧಿ ಗುರಿ ಸಾಧನೆಯಲ್ಲಿ ಸಹಕಾರ ಸಂಸ್ಥೆಗಳ ಪಾತ್ರ" ವಿಷಯ ಕುರಿತು ನ.20ರ ಬೆಳ್ಳಿಗ್ಗೆ 11ಕ್ಕೆ ಕಾರಟಗಿಯ ಶ್ರೀ ಲಕ್ಷ್ಮೀ ವೆಂಕಟೇಶ್ವರ (ಎಲ್.ವಿ.ಟಿ)ಕಲ್ಯಾಣ ಮಂಟಪದಲ್ಲಿ ಸಂವಾದ ಕಾರ್ಯಕ್ರಮ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

# ರಾಜ್ಯೋತ್ಸವದ ಪ್ರಯುಕ್ತ ನಾಟಕೋತ್ಸವ

ಬೆಳಗಾವಿ : ಕರ್ನಾಟಕ ರಾಜ್ಯೋತ್ಸವ ಪ್ರಯುಕ್ತ ಇದೆ ಗುರುವಾರ ದಿನಾಂಕ:14–11–2024 ರಿಂದ 16–11–2024ರ ವರೆಗೆ ಮೂರು ದಿನಗಳ ನಾಟಕೋತ್ಸವವನ್ನು ಬೆಳಗಾವಿಯ ಕನ್ನಡ ಭವನದಲ್ಲಿ ಪ್ರತಿ ದಿನ ಸಂಜೆ 6–30 ಕ್ಕೆ ಆಯೋಜಿಸಲಾಗಿದೆ.

ಗಡಿ ಭಾಗದಲ್ಲಿ ವರ್ಷವಿಡೀ ಕರ್ನಾಟಕ ರಾಜ್ಯೋತ್ಸವ ಆಚ–'ರಿಸಬೇಕೆನ್ನುವ ಪರಿಕಲ್ಪನೆಯ ಹಿನ್ನೆಲೆಯಲ್ಲಿ 'ಕನ್ನಡ ಭವನ' ದ ಅಧ್ಯಕ್ಷರಾದ ಡಾ. ಪ್ರಭಾಕರ ಕೋರೆಯವರ ಮಾರ್ಗದರ್ಶನದಲ್ಲಿ ಮೂರು ದಿನಗಳ ಕಾಲ ಕನ್ನಡ ಭವನ ರಂಗಮಂದಿರದಲ್ಲಿ ಪ್ರಪ್ರಥಮ ಬಾರಿಗೆ ವಿಭಿನ್ನ ಕಥಾವಸ್ತುಗಳನ್ನು ಹೊಂದಿದ ಎರಡು ನಾಟಕಗಳು ಹಾಗೂ ಒಂದು ಸಣ್ಣಾಟವನ್ನು ಬೇರೆ ಬೇರೆ ಜಿಲ್ಲೆಗಳ ಕಲಾವಿದ–ರಿಂದ ಹಮ್ಮಿಕೊಳ್ಳಲಾಗಿದೆ.

ದಿನಾಂಕ 14–11–2024 ರಂದು ಕಲಘಟಗಿ ತಾಲೂಕಿನ ಹುಲಗಿನಕಟ್ಟಿ ಗ್ರಾಮದ ಶ್ರೀ ಸಿದ್ಧೇಶ್ವರ ಸಾಂಸ್ಕೃತಿಕ ಕಲಾ ಸಂಘದ ವತಿಯಿಂದ 'ವೀರ ರಾಣಿ ಕಿತ್ತೂರು ಚೆನ್ನಮ್ಮ, ಚಾರಿತ್ರಿಕ ನಾಟಕ ಹಾಗೂ ದಿನಾಂಕ 15–11–2024ರಂದು ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರದ 'ರಂಗ ಸೌಗಂಧ'ದ ವತಿಯಿಂದ ಪೌರಾಣಿಕ ನಾಟಕ 'ರಕ್ತರಾತ್ರಿ' ಮತ್ತು ದಿನಾಂಕ 16–11–2024ರಂದು ರಾಮದುರ್ಗ ತಾಲೂಕಿನ ಸಾಲಹಳ್ಳಿ ಗ್ರಾಮದ ಶ್ರೀ ಸದಾಶಿವ ಮಹಿಳಾ ನಾಟಕ ಮಂಡಳಿ ವತಿಯಿಂದ ಮಹಿಳೆಯರೇ ಅಭಿನಯಿಸುವ ಜಾನಪದ ಸಣ್ಣಾಟ 'ಸಂಗ್ಯಾ ಬಾಳ್ಯಾ' ಪ್ರದರ್ಶನಗೊಳ್ಳಲಿದೆ. ಅಂದು 'ಕನ್ನಡ ಭವನ'ದ ಅಧ್ಯಕ್ಷರಾದ ಡಾ. ಪ್ರಭಾಕರ ಕೋರೆ, ಬೆಳಗಾವಿ ರಾಣಿ ಚೆನ್ನಮ್ಮನ ವಿಶ್ವವಿದ್ಯಾಲಯದ ಕುಲಸಚಿವರಾದ ಸಂತೋಷ ಕಾಮಗೌಡರ, ರಂಗಕರ್ಮಿ ಬಿ.ಎಸ್. ಗವಿಮಠ, ಡಾ. ಬಸವರಾಜ ಜಗಜಂಪಿ, ಡಾ. ಸರಜೂ ಕಾಟ್ಕರ ಡಾ. ರಾಮಕೃಷ್ಣ ಮರಾಠೆ, ಸುಭಾಷ ಏಣಗಿ, ಮುಂತಾದ ಹಿರಿಯರು ನಾಟಕೋತ್ಸವ ಉದ್ಘಾಟಣಾ ಕಾರ್ಯಕ್ರಮದಲ್ಲಿ ಭಾಗವಹಿಸುವರು.

ಬೆಳಗಾವಿಯಲ್ಲಿ ಸದಾ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳು ನಡೆಯಬೇಕೆನ್ನುವ 'ಕನ್ನಡ ಭವನ' ಕಾರ್ಯಕಾರಿ ಸಮಿತಿ ಸದಸ್ಯರ ಹಂಬಲಕ್ಕೆ ಬೆಂಬಲವಾಗಿ ಸಹೃದಯ ರಂಗಾಸಕ್ತ ಮನಸ್ಸುಗಳು ಸ್ಪಂದಿಸಬೇಕೆಂದು ಪ್ರಕಟಣೆಯಲ್ಲಿ ಕೋರಲಾಗಿದೆ.

### ವೀರವನಿತೆ ಒನಕೆ ಓಬವ್ವ ಜಯಂತಿ

# ತಾಯ್ನೆಲಕ್ಕಾಗಿ ಹೋರಾಡಿದ ಒನಕೆ ಓಬವ್ವಳ ಶೌರ್ಯ ಎಲ್ಲರಿಗೂ ಮಾದರಿ ಅಪರ ಜಿಲ್ಲಾಧಿಕಾರಿ

ಗದಗ : ತಾಯ್ನೆಲಕ್ಕಾಗಿ ಶೌರ್ಯದಿಂದ ಹೋರಾಡಿದ ವೀರವನಿತೆ ಒನಕೆ ಓಬವ್ವ ಎಲ್ಲರಿಗೂ ಮಾದರಿಯಾಗಿದ್ದಾರೆ ಎಂದು ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ ಎಂ. ಅವರು ಹೇಳಿದರು.

ನಗರದ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ದಲ್ಲಿ ಸೋಮವಾರ ಗದಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರುಗಳ ಸಹಯೋಗದಲ್ಲಿ ಏರ್ಪಡಿಸಲಾದ ವೀರವನಿತೆ ಒನಕೆ ಓಬವ್ವ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ಕರ್ನಾಟಕ ಇತಿಹಾಸವನ್ನು ಗಮನಿಸಿದಾಗ ದೇಶದ ರಕ್ಷಣೆಗಾಗಿ ಅನೇಕ ವೀರ ಮಹಿಳೆಯರು ತಮ್ಮ ಪ್ರಾಣವನ್ನು ಮುಡುಪಾಗಿಟ್ಟಿದ್ದನ್ನು ಸ್ಮ–ರಿಸಬಹುದಾಗಿದೆ. ಅಂತಹ ವೀರ ಮಹಿಳೆಯರ ಸಾಲಿನಲ್ಲಿ ಒನಕೆ ಓಬವ್ವ ಸಹಿತ ವಿರಾಜಮಾನರಾಗಿದ್ದಾರೆ. ಒನಕೆ ಓಬವ್ವ ಅವರ ಸಾಹಸ ಎಲ್ಲ–ರಿಗೂ ಆದರ್ಶಪ್ರಾಯವಾಗಿದೆ ಎಂದು



ಅಭಿಪ್ರಾಯಪಟ್ಟರು.

ಗದಗ ಬೆಟಗೇರಿ ನಗರಸಭೆ ಪ್ರಾಧಿಕಾರದ ಅಧ್ಯಕ್ಷ ಅಕ್ಬರಸಾಬ ಬಬರ್ಜಿ ವೀರವನಿತೆ ಓಬವ್ವ ಅವರ ಭಾವಚಿತ್ರಕ್ಕೆ ಪುಷ್ಪ ಸಮರ್ಪಿಸಿ ವೀರವನಿತೆ ಒನಕೆ ಓಬವ್ವ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಉಪನ್ಯಾಸಕರಾಗಿ ಆಗಮಿಸಿದ ಹಂಪಿ ಕನ್ನಡ ವಿಶ್ವವಿದ್ಯಾಲಯದ ಚರಿತ್ರೆ ವಿಭಾಗದ ಪ್ರಾಧ್ಯಾಪಕ ಡಾ. ವಿರೂಪಾಕ್ಷ ಮಾತನಾಡಿ, ಜಗತ್ತಿನಲ್ಲಿ ಮೂಡನಂಬಿಕೆ, ತಾರತಮ್ಯ ಹೋಗಲಾಡಿಸಿ ಸಮಾನತೆಗಾಗಿ ಹಾಗೂ ಅಭಿವೃದ್ಧಿಗಾಗಿ ಅನೇಕ ನೇತಾರರು, ಶರಣರು, ಮುಖಂಡರು ಶ್ರಮಿಸಿದ್ದಾರೆ. ಅದರಿಂದ ಸಾಮಾಜಿಕ, ತಂತ್ರಜ್ಞಾನ, ರಾಜಕೀಯ ಕ್ರಾಂತಿಗಳೂ ಸಹ ನಡೆದಿವೆ ಎಂದರು.

ಚಿತ್ರದುರ್ಗದ ನಾಯಕರ ಬಳಿ ಕಹಳೆಯವನಾಗಿ ಸೇವೆ ಸಲ್ಲಿಸುತ್ತಿದ್ದ ಮದ್ದಹನುಮಪ್ಪನ ಹೆಂಡತಿಯೇ ಓಬವ್ವ. ಹೈದರ್ ಅಲಿಯು ಚಿತ್ರದುರ್ಗ ಕೋಟೆಯನ್ನು ಅಕ್ರಮಿಸಲು ವಿಫಲನಾದನು. ನಂತರ ಹೈದರ್ ಅಲಿಯು ಕುಟಿಲ ಮಾರ್ಗದಿಂದ ಕೋಟೆಯನ್ನು ಬೇಧಿಸಲು ಗೂಢಚಾರರನ್ನು ನೇಮಿಸಿ ತಯಾರಿ ನಡೆಸಿದರು. ಮದ್ದಹನುಮಪ್ಪನು ಮಧ್ಯಾಹ್ನ ಮನೆಗೆ ಬಂದಾಗ ಓಬವ್ವಳು ಆತನಿಗೆ ಊಟಕ್ಕೆ ಬಡಿಸಿ ಕುಡಿಯುವ ನೀರು ತರಲು ಸಿಹಿ ನೀರಿನ ಕೊಳಕ್ಕೆ ನೀರು ತುಂಬಿಕೊಳ್ಳಲು ಬಂದಳು. ಕಳ್ಳಗಿಂಡಿಯ ಕಡೆಯಿಂದ ಶತ್ರುಗಳ ಅಸ್ಪಷ್ಟ ಮಾತುಗಳು , ಸುಳಿವು ಸಿಕ್ಕ ತಕ್ಷಣವೇ ಕಳ್ಳಗಿಂಡಿಂ–ು ಬಳಿಗೆ ಶತ್ರುಗಳನ್ನು ಎದುರಿಸಲು ಸಿದ್ಧಳಾದರು. ಒನಕೆಯನ್ನು ಹಿಡಿದು ಒಬ್ಬೊಬ್ಬರಾಗಿ ನುಸುಳಿ ಬಂದವರ ತಲೆಗೆ ಒನಕೆ ಪೆಟ್ಟು ಕೊಟ್ಟು ಕೊಂದು ಹಾಕತೊಡಗಿದಳು. ಊಟ ಮುಗಿಸಿದ ಮದ್ದ ಹನುಮಪ್ಪನು ತನಗೆ ಕುಡಿಯುವ ನೀರು ತರಲು ಹೋದ ಓಬವ್ವಳನ್ನು ಕಾಣಲು ಕೊಳದ ಬಳಿಗೆ ಬಂದಾಗ ಅಲ್ಲಿಯ ಸನ್ನಿವೇಶವನ್ನು ನೋಡಿ ತನ್ನ ಕಹಳೆಯನ್ನು ಮೊಳಗಿಸಿದನು. ದುರ್ಗದ ಸೈನಿಕರು ಧಾವಿಸಿ ಬಂದು ಶತ್ರುಗಳನ್ನು ಹೊಡೆದೋಡಿಸಿದರು. ಹೀಗೆ ಶತ್ರುಗಳ ಕುಟಿಲ ಆಕ್ರಮಣವನ್ನು ತಡೆದು ಓಬವ್ವಳು ತನ್ನ ಸಮಯ ಪ್ರಜ್ಞೆ ಹಾಗೂ ಧೈರ್ಯ ಶೌರ್ಯದಿಂದ ಮೆರೆದಿದ್ದು ಎಲ್ಲರಿಗೂ ಆದ–'ರ್ಶಪ್ರಾಯವಾಗಿದೆ ಎಂದು ಇತಿಹಾಸ ವಿವರಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಭರತ್ ಎಸ್, ಹೆಚ್ಚುವರಿ ಜಿಲ್ಲಾ ಪೊಲೀಸ ವರಿಷ್ಠಾಧಿಕಾರಿ ಎಂ.ಬಿ.ಸಂಕದ, ಉಪವಿಭಾಗಾಧಿಕಾರಿ ಎಂ.ಗಂಗಪ್ಪ, ಗದಗ ಬೆಟಗೇರಿ ನಗರಸಭೆ ಪೌರಾಯುಕ್ತ ಮಹೇಶ ಪೋತದಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ವೀರಯ್ಯ ಸ್ವಾಮಿ ಬಿ, ವಾರ್ತಾಧಿಕಾರಿ ವಸಂತ ಮಡ್ಲೂರ ಸೇರಿದಂತೆ ವಿವಿಧ ಇಲಾಖೆಯ ಅಧಿಕಾ–ರಿಗಳು, ಸಮುದಾಯದ ಮುಖಂಡರು, ಗಣ್ಯರು, ಹಾಜರಿದ್ದರು.

ಬಾಹುಬಲಿ ಜೈನರ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

# ಜೈಲಿನ ಕಿಟಕಿಗಳಿಗೆ ಮೇಶ್ ಹಾಕಿಸಿ ಗೋಡೆಗಳಿಗೆ ಪೈಂಟ್ ಮಾಡಿಸಿ :ಎಸ್.ಕೆ. ವಂತಿಕೋಡಿ



ಕಾರವಾರ – ಕಾರವಾರಜಿಲ್ಲಾಕಾರಾಗೃಹದನಿವಾಸಿಗಳಿಗೆ ಸೊಳ್ಳೆ ಕಡಿತವಾಗದಂತೆ ತಡೆಯಲುಜೈಲಿನ ಕಿಟಕಿಗಳಿಗೆ ಸೊಳ್ಳೆಗಳು ಬಾರದಂತೆ ಮೆಶ್ ಹಾಕಿಸಿ ಹಾಗೂ ಗೋಡೆಗಳಿಗೆ ಹೊಸದಾಗಿ ಪೈಂಟ್ ಮಾಡಿಸುವಂತೆ ಕಾರಾಗೃಹ ಇಲಾಖೆಯ ಅಧಿಕಾರಿಗಳಿಗೆ ರಾಜ್ಯ ಮಾನವ ಹಕ್ಕು ಆಯೋಗದ ನ್ಯಾಯಾಂಗ ಸದಸ್ಯರಾದಎಸ್.ಕೆ. ವಂತಿಕೋಡಿಸೂಚನೆ ನೀಡಿದರು.

ಅವರು ಸೋಮವಾರಕಾರವಾರದಜಿಲ್ಲಾಕಾರಾಗೃಹಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಕಾರಾಗೃಹವಾಸಿಗಳು ಜೈಲಿನಲ್ಲಿ ಸೊಳ್ಳೆಯ ಸಮಸ್ಯೆಯ ಬಗ್ಗೆ ತಿಳಿಸಿದರು, ಈ ಕುರಿತಂತೆ ಜೈಲು ಕೊಠಡಿಯ ಕಿಟಕಿಗಳಿಗೆ ಸೊಳ್ಳೆಗಳು ಬಾರದಂತೆ ಮೆಸ್ ಅಳವಡಿಸುವಂತೆ ಸೂಚಿಸಿದ ಅವರುಜೈಲಿನ ಗೋಡೆಗಳಿಗೆ ಪೈಂಟ್ ಮಾಡಿ ಹಲವು ವರ್ಷಗಳು ಕಳೆದಿರುವುದನ್ನು ಕಂಡು ಉತ್ತಮ ಗುಣಮಟ್ಟದ ಪೈಂಟ್ ಮಾಡಿಸುವಂತೆ ಹಾಗೂ ಕಾರಾಗೃಹದ ಸುತ್ತಮುತ್ತ ಸ್ವಚ್ಛತೆಗೆಆದ್ಯತೆ ನೀಡುವಂತೆ ಮತ್ತು ವೈದ್ಯ–ರಿಂದ ನಿಯಮಿತವಾಗಿ ಆರೋಗ್ಯ ತಪಾಸಣೆ ನಡೆಸುವಂತೆ ಸೂಚಿಸಿದರು.

ಕಾರಾಗೃಹದಅಡುಗೆ ಮನೆಗೆ ಭೇಟಿ ನೀಡಿ, ಸ್ವತ: ಆಹಾರ ಸೇವಿಸಿ, ಯಾವುದೇಕಾರಣ–ಕ್ಕೂಆಹಾರದಗುಣಮಟ್ಟದಲ್ಲಿಕೊರತೆಕಂಡುಬಾರದಂತೆಎಚ್ಚರಿಕೆ ವಹಿಸುವಂತೆ ಹಾಗೂ ತಾಜಾ ಮತ್ತುಗುಣಮಟ್ಟದ ಕಾಳುಗಳು ಮತ್ತು ತರಕಾರಿಗಳನ್ನು ಬಳಕೆ ಮಾಡುವಂತೆ ಹಾಗೂ ಕೊಠಡಿಗಳು ಮತ್ತು ಶೌಚಾಲಯಗಳಲ್ಲಿ ಪ್ರತಿನಿತ್ಯ ಸ್ವಚ್ಛತೆಕಾಪಾಡುವಂತೆ ನಿರ್ದೇಶನ ನೀಡಿದರು.

ಕಾರಾಗೃಹವಾಸಿಗಳೊಂದಿಗೆ ಮಾತನಾಡಿದ ಅವರು ಜೈಲಿನಲ್ಲಿಏನಾದರೂ ಸಮಸ್ಯೆಗಳಿವೆಯೇ, ಊಟ ಸರಿಯಿದೆಯೇ , ಮೂಲಭೂತ ಸೌಲಭ್ಯಗಳು ಸರಿಯಿವೆಯೇ, ಎಲ್ಲಾರನ್ನುವಿಚಾರಣೆಗೆಕೋರ್ಟ್ ಗೆ ಹಾಜರು ಪಡಿಸುತ್ತಿದ್ದಾರೆಯೇ, ವಿಸಿ ಮೂಲಕ ವಿಚಾರಣೆ ನಡೆಯುತ್ತಿದೆಯೇ , ವಕೀಲರ ನೇಮಕ ಆಗಿದೆಯೇಎಂದು ವಿಚಾರಿಸಿದರು.ಈ ಕು–ರಿತಂತೆಯಾವುದೇ ಸಮಸ್ಯೆಇಲ್ಲವೆಂದು ಕಾರಾಗೃಹವಾಸಿಗಳು ತಿಳಿಸಿದರು.

ಜೈಲಿನಲ್ಲಿ ಅಳವಡಿಸಿರುವ ಸಿಸಿಟಿವಿಗಳನ್ನು ಪರಿಶೀಲನೆ ನಡೆಸಿದರು.

ಬೆಳಗಾವಿ ಕಾರಾಗೃಹದ ಸಹಾಯಕ ಅಧೀಕ್ಷಕ ಕೃಷ್ಣ ಮೂರ್ತಿ, ಕಾರವಾರಕಾರಾಗೃಹದ ಪ್ರಭಾರಅಧೀಕ್ಷಕ ಫಕೀರಪ್ಪತಮ್ಮಣ್ಣದಾಂಡೇನವರ್, ನಗರ ಪೊಲೀಸ್‌ಠಾಣೆಯಇನ್ಸ್‌ಪೆಕ್ಟರ್‌ರಮೇಶ್ ಹೂಗಾರ್ ಉಪಸ್ಥಿತರಿದ್ದರು.

ನಂತರಕಾರವಾರ ನಗರ ಪೊಲೀಸ್‌ಠಾಣೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

# ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ

ಕಾರವಾರ – ಪ್ರಸಕ್ತ ಆರ್ಥಿಕ ವರ್ಷದ ಮುಕ್ತಾಯದ ಹಂತದಲ್ಲಿದ್ದು, ತ್ವರಿತವಾಗಿ ತೆರಿಗೆ ಸಂಗ್ರಹಣೆ ಮಾಡುವ ನಿಟ್ಟಿನಲ್ಲಿ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾ ಪಂಚಾಯತ್‌ನ ಅಭಿವೃದ್ಧಿ ಶಾಖೆಯ ಉಪಕಾರ್ಯದರ್ಶಿ ಪ್ರಕಾಶ್ ಹಾಲಮ್ಮನವರ್ ಸೂಚನೆ ನೀಡಿದರು.

ಅವರು ಮಂಗಳವಾರ ಶಿರಸಿ ತಾಲೂಕಿನ ಅಬ್ದುಲ್ ನಜೀರ ಸಾಬ ಸಭಾಂಗಣದಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. 15ನೇ ಹಣಕಾಸಿನಲ್ಲಿ ಬಾಕಿ ಇರುವ ಕಾಮಗಾರಿಗಳು ಮತ್ತು ಮೊತ್ತ, ಕಾಮಗಾರಿ ವಾಸ್ತವ ಸ್ಥಿತಿ, ಗ್ರಂಥ–ಾಲಯ ನಿರ್ವಹಣೆ, ಗ್ರಂಥಾಲಯ ಮೇಲ್ವಿಚಾರಕರು ಹಾಗೂ ಸಿಬ್ಬಂದಿ ನೇಮಕ, ಸಕಾಲ ಅರ್ಜಿಗಳ ನಿರ್ವಹಣೆ, ಇ–ಹಾಜರಾತಿ ಕುರಿತು ಯಾವುದೇ ಸಮಸ್ಯೆಗಳು ಬಾರದಂತೆ ಗಮನ ವಹಿಸಬೇಕು. ಈ ಕುರಿತು ಜಾಗೃತರಾಗದಿದ್ದರೆ ನೇರವಾಗಿ ಕ್ರಮ ಕೈಗೊಳ್ಳಲಾಗುವುದು ಎಂದರು. ಇನ್ನೂ ನರೇಗಾ ಕೂಲಿಕಾರರ ಮಕ್ಕಳ ಆರೈಕೆಗಾಗಿ ನಿರ್ಮಿಸಲಾದ ಕೂಸಿನ ಮನೆಯಲ್ಲಿ ಮಕ್ಕಳ ಸಂಖ್ಯೆ ಹೆಚ್ಚಿಸಬೇಕು, ಜೊತೆಗೆ ಅವ–ರಿಗೆ ಪೌಷ್ಟಿಕ ಆಹಾರ ಒದಗಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು ಎಂದರು.ಈ ನಡುವೆ ತಾಲೂಕಿನ ದೇವನಳ್ಳಿ ಹಾಗೂ ಕಾನಗೋಡ ಗ್ರಾಮ ಪಂಚಾಯತ್‌ಗಳಿಗೆ ಭೇಟಿ ನೀಡಿ ತೆರಿಗೆ ವಸೂಲಾತಿ, ಕಡತಗಳ ನಿರ್ವಹಣೆ, ಗ್ರಂಥಾಲಯಗಳ ನಿರ್ವಹಣೆಗಳ ಬಗ್ಗೆ ಪರಿಶೀಲನೆ ನಡೆಸಿ ಪುಸ್ತಕಗಳ ನಿರ್ವಹಣೆ, ವಿದ್ಯಾರ್ಥಿಗಳಿಗೆ ನೀಡಲಾದ ಸೌಲಭ್ಯಗಳ ಕುರಿತು ಪರಿಶೀಲಿಸಿ ಗ್ರಂಥಾಲಯಕ್ಕೆ ಸಂಬಂಧಿಸಿದ ಅಗತ್ಯ ಸಲಹೆ ನೀಡಿದರು. ಈ ಸಂದರ್ಭದಲ್ಲಿ ತಾಲೂಕು ಪಂಚಾಯತ್ ವ್ಯವಸ್ಥಾಪಕ ಸುಬ್ರಾಯ ಭಟ್, ಯೋಜನಾಧಿಕಾರಿ ಅಶೋಕ್ ನಾಯ್ಕ, ನರೇಗಾ ಸಹಾಯಕ ನಿರ್ದೇಶಕ ಚನ್ನಬಸಪ್ಪ ಡಿ, ಎಇಇ ಬಸವರಾಜ್, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಕರ ವಸೂಲಿಗಾರರು ಹಾಜರಿದ್ದರು.

## ಹೈನ ಆಡಿಯೋ ಹಕ್ಕು ಖರೀದಿಸಿದ ಜೀ ಮ್ಯೂಸಿಕ್




ಅಮೃತ ಫಿಲಂ ಸೆಂಟರ್ ಮತ್ತು ಕೆ ಕೆ ಕಂಬೈನ್ಸ್ ಆಡಿಯಲ್ಲಿ ತಯಾರಾಗಿರುವ ಚಿತ್ರ 'ಹೈನ' ಚಿತ್ರದ ಆಡಿಯೋ ಹಕ್ಕು ರೈಟ್ಸ್ ಜೀ ಮ್ಯೂಸಿಕ್ ಖರೀದಿಸಿದೆ . ನಿರ್ದೇಶಕ ವೆಂಕಟ್ ಭಾರದ್ವಾಜ್ ಈ ಸುದ್ದಿಯನ್ನು ಮಾಧ್ಯಮಗಳೊಂದಿಗೆ ಹಂಚಿಕೊಂಡಿದ್ದಾರೆ.

ಚಿತ್ರದಲ್ಲಿ 4ಹಾಡುಗಳಿದ್ದು ಎಲ್ಲ ವಯಸ್ಸಿನ ಜನ–ರಿಗೆ ಇಷ್ಟವಾಗುವಂಥ ಸಾಹಿತ್ಯ ಸಂಗೀತ ದೃಶ್ಯಗಳನ್ನು ಸಂಂ–ಯೋಜಿಸಲಾಗಿದೆ ಎಂದು ನಿರ್ದೇಶಕರು ಹೇಳಿದ್ದಾರೆ . ಪ್ರಮುಖವಾಗಿ ಈ ಚಿತ್ರದಲ್ಲಿ ಕನ್ನಡ ಖಂಕ ಹೈನ ಶೀರ್ಷಿಕೆ ಸಂಗೀತ ಕಾರ್ತಿಕ್ ಗುಬ್ಬಿ ಹಾಡಿದ್ದಾರೆ ಅದೇ ಚಿತ್ರದ ಹೈಲೈಟ್

ಸುಮಾರು 52 ಕ್ಕೂ ಅಧಿಕ ತಾರಾಗಣ ಬಳಗ ಈ ಚಿತ್ರದಲ್ಲಿ ಪಾತ್ರ ನಿರ್ವಹಿಸಿದೆ , ಭಾರತ ? ಬಾಂಗ್ಲಾದೇಶ ಗಡಿಯಲ್ಲಿ ಮತ್ತು ತುಂಬಾ ಅತಿ ಸೂಕ್ಷ್ಮವಾದ ಪ್ರದೇಶಗಳಲ್ಲಿ ಈ ಚಿತ್ರ ತಂಡ ದೃಶ್ಯಗಳನ್ನು ಚಿತ್ರೀಕರಿಸಿದೆ.. ಹೈನ ಚಿತ್ರ ನಿಜ ಘಟನೆ ಆಧಾರ ಚಿತ್ರವಾಗಿದ್ದು ಹೈನ ಚಿತ್ರವೂ ಅತಿ ಶೀಘ್ರದಲ್ಲಿ ಬೆಳ್ಳಿ ತೆರೆಮೇಲೆ ಬಿಡುಗಡೆ ಆಗಲಿದೆ , ವೆಂಕಟ್ ಭಾರದ್ವಾಜ್ ನಿರ್ದೇಶನ ಮಾಡಿರುವ ಚಿತ್ರಕ್ಕೆ, ಲವ್ ಪ್ರಾನ್ ಮೆಹ್ತಾ ಸಂಗೀತ , ನಿಶಾಂತ್ ನಾಣಿ ಚಿತ್ರಕ್ಕೆ ಛಾಯಾಗ್ರಹಣ., ಲಕ್ಷ್ಮಣ್ ಶಿವಶಂಕರ್ ಸಂಭಾಷಣೆ ಮತ್ತು ಶಮೀಕ್ ಭಾರದ್ವಾಜ್ ರವರ ಸಂಕಲನವಿದೆ

ತಾರಾಗಣದಲ್ಲಿ ಡಾ.ರಾಜ್ ಕಮಲ್,ಹರ್ಷ ಅರ್ಜುನ್ ಕಲಾಲ್,ದಿಗಂತ್ ,ಲಕ್ಷ್ಮಣ್ ಶಿವಶಂಕರ್,ನಿರಂಜನ್,ವೆಂಕಟ್ ಭಾರದ್ವಾಜ್, ಶಿರಿರ್ ಕುಮಾರ್, ನಂದಕುಮಾರ್,ಮನೋಹರ್,ಅಭಿಷೇಕ್ ಐಯಂಗಾರ್,ಲಾರೆನ್ಸ್ ಪ್ರೀತಮ್ ಸೇರಿ ಇನ್ನಿತರರಿದ್ದಾರೆ.

## ಶತಮಾನಗಳ ಹಿಂದಿನ ಕಥೆ ಹೇಳುವ 'ಕಂಗುವ'



ವಿಭಿನ್ನ ಪಾತ್ರದಲ್ಲಿ ಸೂರ್ಯ

ಶಿವ ನಿರ್ದೇಶನದಲ್ಲಿ ಸೂರ್ಯ ನಾಯಕರಾಗಿ ನಟಿಸಿರುವ ಬಹು ನಿರೀಕ್ಷಿತ 'ಕಂಗುವ' ಚಿತ್ರ ನವೆಂಬರ್ ೧೪ ರಂದು ಪ್ರಪಂಚದಾದ್ಯಂತ ಅದ್ದೂರಿಯಾಗಿ ಬಿಡುಗಡೆಯಾಗುತ್ತಿದೆ. ಭಾರತದಲ್ಲಿ ಸುಮಾರು ೬೦೦೦ ಕ್ಕೂ ಅಧಿಕ ಚಿತ್ರಮಂದಿರಗಳಲ್ಲಿ ತೆರೆಕಾಣುತ್ತಿರುವ ಈ ಚಿತ್ರ, ಕರ್ನಾಟಕದಲ್ಲಿ ಹೆಸರಾಂತ ಕೆವಿಎನ್ ಸಂಸ್ಥೆ ಮೂಲಕ ಬಿಡುಗಡೆಯಾಗುತ್ತಿದೆ.

ಇತ್ತೀಚಿಗೆ ಈ ಚಿತ್ರದ ಪ್ರಚಾರಕ್ಕಾಗಿ ನಟ ಸೂರ್ಯ ಬೆಂಗಳೂ–ರಿಗೆ ಆಗಮಿಸಿದ್ದರು. ಈ ಚಿತ್ರದ ಹಾಡುಗಳು ಮತ್ತು ಟ್ರೇಲರ್ ಪ್ರೇಕ್ಷಕರನ್ನು ಬೇರೆ ಪ್ರಪಂಚಕ್ಕೇ ಕರೆದುಕೊಂಡು ಹೋಗುತ್ತದೆ.

ಪ್ರೇಕ್ಷಕರಿಗೆ ಅದ್ಭುತವಾದ ಚಿತ್ರವೊಂದನ್ನು ಕೊಡಬೇಕು ಎಂದು ಚಿತ್ರತಂಡ ತವಕದಲ್ಲಿದೆ. ತಮಿಳು ಚಿತ್ರರಂಗದಲ್ಲೇ ಅತ್ಯಂತ ದೊಡ್ಡ ಚಿತ್ರ ಇದು. ಇಡೀ ದೇಶ ಮತ್ತು ಹೊರದೇಶಗಳಲ್ಲೂ ಈ ಚಿತ್ರ ದೊಡ್ಡ ಮಟ್ಟದಲ್ಲಿ ಬಿಡುಗಡೆಯಾಗುತ್ತಿದೆ ಎಂದು ಕೆವಿಎನ್ ಪ್ರೊಡಕ್ಷನ್ಸ್ ನ ವೆಂಕಟ್ ತಿಳಿಸಿದರು.

ನಾವು ಈ ಚಿತ್ರವನ್ನು ಬಹಳ ಪ್ರೀತಿಯಿಂದ ಮಾಡಿದ್ದೇವೆ. ಈ ಚಿತ್ರ ಬರೀ ಹಣ ಮತ್ತು ಶ್ರಮದಿಂದ ಆಗಿಲ್ಲ ಎಂದು ಮಾತು ಆರಂಭಿಸಿದ ನಟ ಸೂರ್ಯ ನಮ್ಮ ನಿರ್ದೇಶಕ ಶಿವ ಎಲ್ಲಾ ತಂತ್ರಜ್ಞರ ಶ್ರಮ.

ರಾಜಮೌಳಿ ಅವರಿಂದ 'ಬಾಹುಬಲಿ' ಚಿತ್ರದಿಂದ ಪ್ಯಾನ್ ಇಂಡಿಯಾ ಪರಿಕಲ್ಪನೆ ಶುರುವಾಯಿತು. 'ಕೆಜಿಎಫ್' ಮತ್ತು 'ಕಾಂತಾರ' ಚಿತ್ರಗಳು ಅದನ್ನು ಇನ್ನಷ್ಟು ವಿಸ್ತರಿಸಿದವು. ಒಂದೊಳ್ಳೆಯ ಚಿತ್ರವನ್ನು ಕೊಟ್ಟರೆ ಜನರು ಪ್ರೋತ್ಸಾಹಿಸುತ್ತಾರೆ ಎಂಬುದು ಅಥ–ರ್ವವಾಗಿದೆ.ಈ ಉದ್ದೇಶದಿಂದ 'ಕಂಗುವ' ಚಿತ್ರವನ್ನು ಮಾಡಿದ್ದೇವೆ.

ನಮ್ಮ ಛಾಯಾಗ್ರಾಹಕ ವೆಟ್ರಿ, ಸಂಗೀತ ನಿರ್ದೇಶಕ ದೇವಿ ಶ್ರೀ ಪ್ರಸಾದ್ ಎಲ್ಲರೂ ಚಿತ್ರ ಅದ್ಭುತವಾಗಿ ಮೂಡಿಬರುವುದಕ್ಕೆ ಕಾರಣವಾಗಿದ್ದಾರೆ. ವಿಶೇಷವೆಂದರೆ, ಈ ಚಿತ್ರಕ್ಕೆ ಲೈಟ್‌ಗಳನ್ನೇ ಬಳಸದೆ ನೈಜವಾಗಿ ಚಿತ್ರೀಕರಿಸಲಾಗಿದೆ. ಈ ಚಿತ್ರವು ನಮ್ಮನ್ನು ೭೦೦ ವರ್ಷಗಳ ಹಿಂದಕ್ಕೆ ಕರೆದೊಯ್ಯಲಿದೆ. ೩ಡಿ ಮತ್ತು ೪ಡಿ ವರ್ಷನ್‌ಗಳಲ್ಲೂ ಪ್ರದರ್ಶನವಾಗಲಿದೆ ಎಂದರು.

ಸ್ಟುಡಿಯೋ ಗ್ರೀನ್ ಮತ್ತು ಯುವಿ ಕ್ರಿಯೇಷನ್ಸ್ ಲಾಂಛನದಲ್ಲಿ ನಿರ್ಮಾಣವಾಗಿರುವ ಈ ಚಿತ್ರದಲ್ಲಿ ಸೂರ್ಯ ದ್ವಿಪಾತ್ರಗಳಲ್ಲಿ ನಟಿಸಿದ್ದಾರೆ. ಬಾಬಿ ಡಿಯೋಲ್ , ದಿಶಾ ಪಟಾನಿ , ನಟರಾಜನ್ ಸುಬ್ರಮಣ್ಯಂ , ಯೋಗಿ ಬಾಬು , ರೆಡಿನ್ ಕಿಂಗ್ಸ್ಲಿ , ಕೋವೈ ಸರಳಾ , ಆನಂದರಾಜ್, ಕೆ.ಎಸ್ ರವಿಕುಮಾರ್ ಮುಂತಾದವರು ತಾರಾಬಳಗದಲ್ಲಿದ್ದಾರೆ.



# ಮಕ್ಕಳನ್ನು ನಿದ್ದೆಯಿಂದ ಎಬ್ಬಿಸೋ ತಪ್ಪು ಮಾಡಿದ್ರೆ ಯಾವೆಲ್ಲಾ ಸಮಸ್ಯೆಯಾಗುತ್ತೆ ಗೊತ್ತಾ?



ನಿದ್ದೆ ಆರೋಗ್ಯಕ್ಕೆ ಬಹಳ ಮುಖ್ಯ. ಯಾವುದೇ ವ್ಯಕ್ತಿಗೆ ನಿದ್ದೆಯ ಕೊರತೆಯುಂಟಾದರೆ ನಾನಾ ಕಾಯಿಲೆಗಳು ಕಾಡಲಾರಂಭಿಸುತ್ತದೆ. ಮಕ್ಕಳಲ್ಲಿ ನಿದ್ರಾಹೀನತೆ ಸಮಸ್ಯೆಯು ಅವರ ಮೆದುಳಿನ ಮೇಲೆ ಪರಿಣಾಮ ಬೀರುವುದು.

ಮಕ್ಕಳನ್ನು ನಿದ್ದೆಯಿಂದ ಎಬ್ಬಿಸೋ ತಪ್ಪು ಮಾಡಿದ್ರೆ ಯಾವೆಲ್ಲಾ ಸಮಸ್ಯೆಯಾಗುತ್ತೆ ಗೊತ್ತಾ?

ಮಕ್ಕಳಿಗೆ ನಿದ್ದೆ ಬಹಳ ಮುಖ್ಯ. ಹೆಚ್ಚಿನ ಸಂದರ್ಭಗಳಲ್ಲಿ ಮಕ್ಕಳು ತಡರಾತ್ರಿವರೆಗೂ ಆಡುತ್ತಾ ಇರುತ್ತಾರೆ ಹೀಗಾಗಿ ಬೆಳಗ್ಗೆ ತಡವಾಗಿ ಏಳುತ್ತಾರೆ. ಆದರೆ ಹೆತ್ತವರು ಮಕ್ಕಳನ್ನು ಬೇಗನೇ ಏಳುವಂತೆ ಒತ್ತಾಯಿಸುತ್ತಾರೆ. ಮಕ್ಕಳು ನಿದ್ದೆ ಮಾಡಿರುವಾಗ ಅವರನ್ನು ನಿದ್ದೆಯಿಂದ ಎಬ್ಬಿಸುವುದು ಅವರ ಮೆದುಳಿನ ಮೇಲೆ ಪರಿಣಾಮ ಬೀರಬಲ್ಲದು. ಹಾಗಾಗಿ ಪೋಷಕರು ಯಾವಾಗಲೂ ತಮ್ಮ ಮಗುವಿಗೆ ಸಂಪೂರ್ಣ ನಿದ್ದೆ ದೊರೆಯುತ್ತಿದೆಯೇ ಎನ್ನುವುದನ್ನು ಖಚಿತಪಡಿಸಿಕೊಳ್ಳುವುದು ಬಹಳ ಮುಖ್ಯ.

**ಮೆದುಳಿಗೆ ಉತ್ತಮ ನಿದ್ರೆ ಮುಖ್ಯ**

ಕಳಪೆ ಗುಣಮಟ್ಟದ ನಿದ್ರೆ ಮೆದುಳಿಗೆ ಹಾನಿಕಾರಕವಾಗಿದೆ. ನರಮಂಡಲದ ಬೆಳವಣಿಗೆಯಲ್ಲಿ ನಿದ್ರೆ ಬಹಳ ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಅದರ ಕೊಡುಗೆ ಮಕ್ಕಳು ಮತ್ತು ಯುವಕರಲ್ಲಿ ಬದಲಾಗುತ್ತದೆ. ಕಡಿಮೆ ನಿದ್ರೆ ಪಡೆದ ಮಕ್ಕಳು ಸಾಕಷ್ಟು ನಿದ್ದೆ ಮಾಡಿದವರಿಗಿಂತ ಹೆಚ್ಚು ಮಾನಸಿಕ ಆರೋಗ್ಯ ಮತ್ತು ನಡವಳಿಕೆಯ ಸಮಸ್ಯೆಗಳನ್ನು ಹೊಂದಿರುತ್ತಾರೆ.

ಕಡಿಮೆ ನಿದ್ರೆಯು ಒತ್ತಡ, ಖಿನ್ನತೆ, ಆತಂಕ ಮತ್ತು ಆಕ್ರಮಣ–ಕಾರಿ ನಡವಳಿಕೆಗೆ ಸಂಬಂಧಿಸಿದೆ. ನಿದ್ರೆಯ ಕೊರತೆಯಿರುವ ಮಕ್ಕಳು ನಿರ್ಧಾರಗಳನ್ನು ತೆಗೆದುಕೊಳ್ಳುವುದು, ಸಮಸ್ಯೆಯನ್ನು ಪರಿಹರಿಸುವುದು ಮತ್ತು ಕಲಿಕೆಯಲ್ಲಿ ಸಮಸ್ಯೆಗಳನ್ನು ಹೊಂದಿರುತ್ತಾರೆ.

**ಮಕ್ಕಳು ಮತ್ತು ಯುವಕರಲ್ಲಿ ನಿದ್ರೆಯ ಪರಿಣಾಮ**

ಅಧ್ಯಯನದ ಪ್ರಕಾರ, ವಯಸ್ಕ–ರಿಗೆ, ನಿದ್ರೆ ಮುಖ್ಯವಾಗಿ ನಿರ್ವಹಣೆ ಮತ್ತು ದುರಸ್ತಿಗೆ ಸಂಬಂಧಿಸಿದೆ, ಆದ–ರೆ ಮಕ್ಕಳಿಗೆ, ಅವರ ಬೆಳವಣಿಗೆಗೆ ನಿದ್ರೆ ಬಹಳ ಮುಖ್ಯ. ಮೆದುಳಿನ ಬೆಳವಣಿಗೆಗೆ ಮತ್ತು ಸಿನಾಪ್ಟಿಕ್ ಸಂಪರ್ಕಗಳನ್ನು ಬಲಪಡಿಸಲು ಇದು ಅವಶ್ಯಕವಾಗಿದೆ. ಸಂಶೋಧಕರು ಇಲಿಗಳನ್ನು ಪರೀಕ್ಷಿಸಿದರು ಮತ್ತು ಕಳಪೆ ನಿದ್ರೆಯ ಗುಣಮಟ್ಟವು ವಯಸ್ಕರಿಗಿಂತ ಯುವ ಇಲಿಗಳ ಮೆದುಳಿನ ಮೇಲೆ ಹೆಚ್ಚು ಪರಿಣಾಮ ಬೀರುತ್ತದೆ ಎಂದು ಕಂಡುಹಿಡಿದಿದೆ. ಯುವ ಮಿದುಳುಗಳು ನಿದ್ರೆಯ ಕೊರತೆಯನ್ನು ನಿಭಾಯಿಸಲು ಸಾಧ್ಯವಾಗುವುದಿಲ್ಲ ಎಂದು ಅವರು ಕಂಡುಕೊಂಡರು.

**ಮಲಗುವ ಹಾಗೂ ಏಳುವ ಸಮಯ**

ಕಳಪೆ ನಿದ್ರೆಯ ಗುಣಮಟ್ಟ ಅಥ–ವಾ ಮಕ್ಕಳಲ್ಲಿ ನಿದ್ರೆಯ ಕೊರತೆಯು ಅವರ ಮೆದುಳಿನ ಮೇಲೆ ಋಣಾತ್ಮಕ ಪರಿಣಾಮ ಬೀರಬಹುದು ಎಂದು ಇದು ತೋರಿಸುತ್ತದೆ, ಇದರ ಪರಿಣಾಮಗಳನ್ನು ದೀರ್ಘಕಾಲದವರೆಗೆ ಕಾಣಬಹುದು. ಅಂತಹ ಪರಿಸ್ಥಿತಿಯಲ್ಲಿ, ಪೋಷಕರು ತಮ್ಮ ಮಕ್ಕಳಿಗೆ ಸರಿಯಾದ ಸಮಯಕ್ಕೆ ಮಲಗಲು ಮತ್ತು ಸರಿಯಾದ ಸಮಯಕ್ಕೆ ಏಳುವ ಅಭ್ಯಾಸಗಳನ್ನು ಬೆಳೆಸಲು ಸಹಾಯ ಮಾಡಬೇಕು.

**ನ್ಯೂರೋ ಡೆವಲಪ್‌ಮೆಂಟಲ್ ಡಿಸಾರ್ಡರ್‌ಗಳಿಗೆ ನಿದ್ರೆಗೂ ಇರುವ ಸಂಬಂಧ**

ಮಕ್ಕಳಲ್ಲಿ ನಿದ್ರಾ ಭಂಗ ಮತ್ತು ನರಗಳ ಬೆಳವಣಿಗೆಯ ಅಸ್ವಸ್ಥತೆಗಳ ನಡುವಿನ ಸಂಬಂಧವನ್ನು ಅಧ್ಯಯನವೊಂದು ಕಂಡುಹಿಡಿದಿದೆ. ನಿದ್ರೆಯ ಕೊರತೆಯು ಮೆದುಳಿನಲ್ಲಿರುವ ಕ್ಯಾಸ್ ಪ್ರೋಟೀನ್‌ಗಳ ಮೇಲೆ ಪರಿಣಾಮ ಬೀರುತ್ತದೆ. ಇದು ಕಲಿಕೆ ಮತ್ತು ಸ್ಮರಣೆಗೆ ಅವಶ್ಯಕವಾಗಿದೆ. ಇವುಗಳು ಆಟಿಸಂ ಸ್ಪೆಕ್ಟ್ರಮ್ ಡಿಸಾರ್ಡರ್ (ಂಖಆ) ಗಾಗಿ ಆನುವಂಶಿಕ ಅಪಾಯದ ಅಂಶಗಳೊಂದಿಗೂ ಸಂಬಂಧಿಸಿದೆ. ಮಗುವಿಗೆ ಸ್ವಲೀನತೆಯ ಆನುವಂಶಿಕ ಸಮಸ್ಯೆಗಳಿದ್ದರೆ ನಿದ್ರೆಯ ಕೊರತೆಯು ಅದನ್ನು ಇನ್ನಷ್ಟು ಪ್ರಚೋದಿಸುತ್ತದೆ.



# ಕೂದಲಿನ ಸುಧಾರಿತ ಆರೋಗ್ಯಕ್ಕಾಗಿ ಸೀಬೆ ಎಲೆಗಳ ಚಿಕಿತ್ಸೆ !

ಸಾಮಾನ್ಯವಾಗಿ ಪೇರಲೆ ಅಥ–ವಾ ಸೀಬೆಹಣ್ಣು ಎಂದು ಕರೆಯಲ್ಪಡುವ ಈ ಹಣ್ಣು ಹಲವಾರು ಆರೋಗ್ಯವರ್ಧಕ ಗುಣಲಕ್ಷಣಗಳಿಗೆ ಹೆಸರುವಾಸಿಯಾಗಿದೆ. ಆದರೆ ಈ ಹಣ್ಣಿನ ಎಲೆಗಳೂ ಕೂಡ ಕೂದಲಿನ ಚರ್ಮ ಮತ್ತು ಆರೋಗ್ಯಕ್ಕೆ ಅತ್ಯುತ್ತಮ ಮನೆಮದ್ದು ಎನ್ನುವುದು ಗೊತ್ತೆ? ಹಾಗಿದ್ದರೆ ಇದನ್ನು ಬಳಸುವುದರಿಂದ ಕೂದಲಿಗೆ ಏನೆಲ್ಲಾ ಪ್ರಯೋಜನಗಳಿವೆ? ಈ ಎಲೆಗಳನ್ನು ಬಳಸುವ ವಿಧಾನ ಹೇಗೆ ಇತ್ಯಾದಿಗಳ ಬಗ್ಗೆ ತಿಳಿಯೋಣ.

ಪೇರಲೆ ಅಥವಾ ಸೀಬೆಹಣ್ಣಿನ ಗಿಡದ ಎಲೆಯಲ್ಲಿಯೂ ಕೂಡ ನೈಸರ್ಗಿಕ ಖನಿಜಾಂಶಗಳು ಮತ್ತು ವಿಟಮಿನ್ ಗಳನ್ನು ಹೊಂದಿದ್ದು, ಇದರ ಪೋಷಕಾಂಶಗಳು ತಲೆಕೂದಲು ಮತ್ತು ಚರ್ಮಕ್ಕೆ ಅತ್ಯಂತ ಉತ್ತಮ ಎನ್ನುವ ವಿಷಯ ನಿಮಗೆ ಗೊತ್ತೆ ? ಪೇರಲೆ ಹಣ್ಣು ವಿಟಮಿನ್ ಬಿ ಮತ್ತು ಸಿ ಯನ್ನು ಹೇರಳವಾಗಿ ಹೊಂದಿದ್ದು, ಇದು ದೇಹಕ್ಕೆ ಎಷ್ಟು ಉತ್ತಮ ಎನಿಸಿ ಕೊಂಡಿದೆಯೋ ಅಂತೆಯೇ ಇದು ಕೊಲಾಜೆನ್ ನ ಚಟುವಟಿಕೆಯನ್ನು ಸುಧಾರಿಸುತ್ತಾ ಕೂದಲಿನ ಆರೋಗ್ಯ ಕಾಪಾಡುವಲ್ಲಿ ಅತ್ಯಂತ ಮುಖ್ಯ ಪಾತ್ರವಹಿಸುತ್ತದೆ.

ಈ ಎಲೆಗಳು ಕ಼ೂದ಼ಲು಼ದು಼ರು಼ವಿಕೆ಼ಂ಼ು಼ಂತ಼ಹ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಮತ್ತು ಕೂದಲಿನ ಮರು ಬೆಳವಣಿಗೆಯಲ್ಲಿ ಕೊಡುಗೆಯನ್ನು ನೀಡುತ್ತದೆ. ಈ ಎಲೆಗಳು ಆಂಟಿ ಮೈಕ್ರೊ ಬಿಯಲ್, ಉರಿಯೂತದ ಮತ್ತು ಉತ್ಕರ್ಷಣ ನಿರೋಧಕಗಳ ಸಮೃದ್ಧ ಮೂಲವಾಗಿದ್ದು ಅದು ನೆತ್ತಿಯ ಸೋಂಕುಗಳು ಮತ್ತು ಇನ್ನಿತರ ಸಮಸ್ಯೆಗಳನ್ನು ಹೋಗಲಾಡಿಸುವಲ್ಲಿ ಸಹಾಯ ಮಾಡುತ್ತದೆ ಮತ್ತು ಆರೋಗ್ಯಕರ ಕೂದಲಿನ ಮೂಲವನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ. ಪ್ರತಿದಿನ ನೀವು ಸ್ನಾನ ಮಾಡುವ ಬಿಸಿನೀರಿನಲ್ಲಿ ಪೇರಲೆ ಎಲೆಗಳನ್ನು ಸೇರಿಸಿ ಕೂದಲನ್ನು ತೊಳೆಯುವುದರಿಂದ ಏನೆಲ್ಲಾ ಲಾಭಗಳಿವೆ ನೋಡೋಣ.

**ಕೂದಲಿಗೆ ಪ್ರಮುಖವಾದ ಕಾಲಜನ್ ಚಟುವಟಿಕೆಯನ್ನು ಹೆಚ್ಚಿಸುತ್ತದೆ**


ಪೇರಲೆ ಅಥವಾ ಸೀಬೆ ಎಲೆಯನ್ನು ಕುದಿಸಿದ ನೀರನ್ನು ಪ್ರತಿದಿನ ಹಚ್ಚುವುದರಿಂದ ತ್ವಚೆಯ ಮೇಲಿನ ಬ್ಯಾಕ್ಟೀ–ರಿಯಾಗಳ ವಿರುದ್ಧ ಹೋರಾಡುತ್ತದೆ ಮತ್ತು ನೆತ್ತಿಯ ಮೇಲಿನ ಉರಿಯೂತದ ಸಮಸ್ಯೆಗಳನ್ನು ಕಡಿಮೆ ಮಾಡುವಲ್ಲಿ ಸಹಾಯ ಮಾಡುತ್ತದೆ. ವಿಟಮಿನ್ ಸಿ ಯ ಇರುವಿಕೆಯು ಕಾಲಜನ್ ಚಟುವಟಿಕೆಗಳನ್ನು ಹೆಚ್ಚಿ ಸುತ್ತದೆ ಮತ್ತು ಕೂದಲಿನ ಬೆಳವಣಿಗೆಯನ್ನು ಉತ್ತೇಜಿಸುವುದು ಮಾತ್ರ ವಲ್ಲದೆ ಲೈಕೋಪೀನ್ ಯುವಿ ಕಿರಣಗಳಿಂದ ರಕ್ಷಿಸುತ್ತದೆ. ಪ್ರತಿದಿನ ಬಳಸಿದಾಗ ಕೂದಲು ಬೆಳವಣಿಗೆಯನ್ನು ಹೆಚ್ಚಿಸಲು ಈ ನೀರು ಸುಲಭ ಮತ್ತು ಪರಿಣಾಮಕಾರಿ ಮಾರ್ಗವಾಗಿದೆ. ಹಣ್ಣುಗಳಲ್ಲಿ ಕಂಡು ಬರುವ ಲೈಕೋಪೀನ್, ರಕ್ಷಣಾತ್ಮಕ ಪದರವನ್ನು ರಚಿಸುವ ಮೂಲಕ ಯುವಿ ಹಾನಿಯಿಂದ ಕೂದಲನ್ನು ರಕ್ಷಿಸಲು ಸಹಾಯ ಮಾಡುತ್ತದೆ, ಮತ್ತು ಕೂದಲಿನ ಆರೋಗ್ಯವನ್ನು ಕಾಪಾಡುತ್ತದೆ .

**ಫ್ಲೆವೊನಾಯ್ಡ್ ಗಳನ್ನು ಸಮೃದ್ದವಾಗಿ ಒಳಗೊಂಡಿದೆ**

ಕ್ವೆರ್ಸೆಟಿನ್ ಮತ್ತು ವಿಟಮಿನ್ ಸಿ ಯಂತಹ ಉತ್ಕರ್ಷಣ ನಿರೋಧಕಗಳು ಸೇರಿದಂತೆ ಫ್ಲೇವನಾಯ್ಡ್‌ಗಳ ಸಮೃದ್ಧತೆಯು ನಮ್ಮ ಕೂದಲಿನ ಆರೋಗ್ಯದ ಮೇಲೆ ಸಕಾರಾತ್ಮಕ ಪರಿಣಾಮಗಳನ್ನು ಬೀರುವಲ್ಲಿ ಸಹಾಯಕ. ಈ ಎಲೆಗಳನ್ನು ಬೇಯಿಸಿದ ನೀರಿನಲ್ಲಿ ಇರುವ ಈ ಫ್ಲೇವ ನಾಯ್ಡ್‌ಗಳು







ಕೂದಲಿನ ಹೊಳಪನ್ನು ಕಾಪಾಡುತ್ತದೆ. ಇದನ್ನು ಪ್ರತೀದಿನ ಬಳಸುವುದರಿಂದ ಕಳೆದುಹೋದ ನೈಸರ್ಗಿಕ ಹೊಳಪನ್ನು ಸಹ ಪುನರುಜ್ಜೀವನಗೊಳಿಸಬಹುದು. ಮತ್ತು ಪರಿಣಾಮ ಕಾರಿಯಾದ ಫಲಿತಾಂಶಕ್ಕಾಗಿ ಇದನ್ನು ಪ್ರತಿದಿನ ಬಳಸಬೇಕು ಈ ಕ್ರಮವನ್ನು ಅನುಸರಿಸುವುದರಿಂದ ಉತ್ತಮ ಬದಲಾವಣೆಗಳನ್ನು ಕಾಣಬಹುದು.

**ಕೂದಲಿನ ದಟ್ಟತೆ ಮತ್ತು ಬೆಳವಣಿಗೆಯನ್ನು ಹೆಚ್ಚಿಸುತ್ತದೆ**

ಪೇರಲೆ ಎಲೆಗಳಲ್ಲಿ ವಿಟಮಿನ್ ಸಿ ಯು ಹೇರಳವಾಗಿರುವುದರಿಂದ ಇದು ನೆತ್ತಿಯಲ್ಲಿನ ಕಾಲಜನ್ ಉತ್ಪಾದನೆಯನ್ನು ಹೆಚ್ಚಿಸುತ್ತದೆ. ಕೊಲಾಜನ್ ಉತ್ಪಾದನೆಯಲ್ಲಿ ಹೆಚ್ಚಳವು ನೆತ್ತಿಯ ಆರೋಗ್ಯವನ್ನು ಕಾಪಾಡುತ್ತಾ ಕೂದಲಿನ ದಟ್ಟತೆಯನ್ನು ಕಾಪಾಡುವಲ್ಲಿ ಮತ್ತು ಬೆಳವಣಿಗೆಯನ್ನು ಅಭಿವೃದ್ದಿಗೊಳಿಸುವಲ್ಲಿ ಸಹಾಯ ಮಾಡುತ್ತದೆ.ಇದು ಕೂದಲಿನ ಶಾಫ್ಟ್‌ಗಳನ್ನು ಸುಗಮಗೊಳಿಸುತ್ತದೆ, ಕೂದಲನ್ನು ನಯಗೊಳಿಸಿದಂತೆ ಮಾಡುತ್ತದೆ, ಒರಟುತನವನ್ನು ಕಡಿಮೆ ಮಾಡುತ್ತದೆ ಮತ್ತು ಹೊಳಪು, ನಯವಾದ ಮುಕ್ತಾಯವನ್ನು ನೀಡುತ್ತದೆ.

**ನೆತ್ತಿಯನ್ನು ಸ್ವಚ್ಛಗೊಳಿಸುತ್ತದೆ**

ಪೇರಲೆ ಎಲೆಗಳು ಆಂಟಿ ಫಂಗಲ್ ಮತ್ತು ಬ್ಯಾಕ್ಟೀರಿಯಾ ವಿರೋಧಿ ಗುಣಗಳಿಂದ ತುಂಬಿದ್ದು ಅದು ನಮ್ಮ ನೆತ್ತಿಯ ಸೋಂಕನ್ನು ತಡೆಯಲು ಸಹಾಯ ಮಾಡುತ್ತದೆ. ಇದರಲ್ಲಿರುವ ವಿಟಮಿನ್ ಸಿ ಯು ಕೂದಲಿನ ಬೇರುಗಳನ್ನು ದೃಢಪಡಿಸುತ್ತವೆ ಮತ್ತು ಇದರ ಮೂಲಕ ಕೂದಲು ಒಡೆಯುವುದನ್ನು ಕಡಿಮೆ ಮಾಡುತ್ತದೆ. ಈ ಎಲೆಗಳು ಕೂದಲಿನ ಕಿರುಚೀಲಗಳ ಸುತ್ತಲೂ ಸಂಗ್ರಹವಾಗಿರುವ ಕೊಳೆ ಮತ್ತು ತಲೆಹೊಟ್ಟನ್ನು ನಿವಾರಿಸುವಲ್ಲಿ ಸಹಾಯ ಮಾಡುತ್ತದೆ. ಇದರ ಮೂಲಕ ನಯವಾದ ಮತ್ತು ರೇಷ್ಮೆಯಂತಹ ಕೂದಲನ್ನು ನೀಡುತ್ತಾ ಕೂದಲಿನ ಸ್ವಚ್ಚತೆ ಮತ್ತು ಸುಧಾರಿತ ನೆತ್ತಿಯ ಆರೋಗ್ಯವನ್ನು ನೀಡುತ್ತದೆ . ಅಲ್ಲದೆ ಕೂದಲು ಬೇಗನೇ ಎಣ್ಣೆಯುಕ್ತವಾಗುವುದನ್ನು ತಡೆಯುತ್ತದೆ.

**ಕ಼ೂದ಼ಲು಼ದು಼ರು಼ವಿಕೆ಼ಂ಼ು಼ನ್ನು ತಡೆಯುತ್ತದೆ**

ಕೂದಲಿನ ಬೆಳವಣಿಗೆಗೆ ವಿಟಮಿನ್ ಇ ಅತ್ಯಗತ್ಯವಾಗಿದ್ದು, ಸೀಬೆ ಎಲೆಗಳು ವಿಟಮಿನ್ ಇ ಯನ್ನು ಹೇರಳವಾಗಿ ಹೊಂದಿದೆ. ಅಲ್ಲದೆ ಕೂದಲಿನ ಆರೋಗ್ಯಕ್ಕೆ ಅಗತ್ಯವಾದ ವಿಟಮಿನ್ ಬಿ ಕಾಂಪ್ಲೆಕ್ಸ್ ಮತ್ತು ಬಯೋಟಿನ್ ಗಳು , ಮತ್ತು ವಿಟಮಿನ್ ಇ ಮತ್ತು ಬಿಯನ್ನು ಸಮೃದ್ದವಾಗಿ ಹೊಂದಿವೆ.ಈ ವಿಟಮಿನ್ ಗಳು ಕೂದಲಿನ ಆರೈಕೆಯನ್ನು ಉತ್ತಮ ರೀತಿಯಿಂದ ಮಾಡುವುದಲ್ಲದೆ. ಕೂದಲಿನ ಎಳೆಗಳು ಒಡೆಯದಂತೆ ತಡೆಯುತ್ತವೆ. ಅಲ್ಲದೆ ಈ ಎಲೆಗಳಲ್ಲಿ ನೋವು ನಿವಾರಕ ಗುಣಲಕ್ಷಣಗಳಿವೆ. ಮತ್ತು ಮಧುಮೇಹ ಅಥವಾ ಅತಿಯಾದ ಅಲಂಕಾರವಿಧಾನಗಳಿಂದ ಉಂಟಾಗುವ ಕೂದಲುದುರುವಿಕೆಗೆ ಉತ್ತಮ ಚಿಕಿತ್ಸೆ ನೀಡುತ್ತದೆ.

**ಸೀಬೆ ಎಲೆಗಳಲ್ಲಿರುವ ವಿಶೇಷ ಗುಣಗಳು ಮತ್ತು ಉಪಯೋಗಗಳು**


ಪೇರಲೆ ಅಥವಾ ಸೀಬೆ ಎಲೆಯ ನೀರು ಕೂದಲಿನ ಆರೈಕೆ ಮಾಡುವ ಜನಪ್ರಿಯ ಮನೆ ಮದ್ದೆಂದರೆ ತಪ್ಪಾಗಲಾರದು. ಆರೋಗ್ಯಕರ ಕೂದಲಿನ ಬೆಳವಣಿಗೆಯನ್ನು ಉತ್ತೇಜಿಸಲು ಮತ್ತು ನೆತ್ತಿಯ ಆರೋಗ್ಯವನ್ನು ಇದು ಸುಧಾರಿಸುವ ಸಾಮರ್ಥ್ಯಕ್ಕಾಗಿ ಹೆಸರುವಾಸಿಯಾಗಿದೆ.

ಪೇರಲೆ ಎಲೆಗಳಲ್ಲಿರುವ ಜೀವಸತ್ವಗಳು ಮತ್ತು ಅಗತ್ಯ ಪೋಷಕಾಂಶ ಗಳು,ಕೂದಲು ಕಿರುಚೀಲಗಳನ್ನು ಬಲಪಡಿಸಲು, ಕೂದಲು ಉದುರುವಿಕೆ ಯನ್ನು ಕಡಿಮೆ ಮಾಡಲು ಮತ್ತು ತಲೆಹೊಟ್ಟು ತಡೆಯಲು ಸಹಾಯ ಮಾಡುತ್ತದೆ.

ಕೂದಲಿಗೆ ಮದ್ದಿನ ರೂಪದಲ್ಲಿ ಈ ಎಲೆಯ ನೀರು ನೆತ್ತಿಯ ರಕ್ತ ಪರಿಚಲನೆ ಯನ್ನು ಉತ್ತೇಜಿಸಲು ಸಹಾಯ ಮಾಡುತ್ತದೆ . ಕೂದಲಿನ ಬೆಳವಣಿಗೆ ಉತ್ತೇಜಿಸುವುದು ಮಾತ್ರವಲ್ಲದೆ , ಕೂದಲಿನ ಒಟ್ಟಾರೆ ವಿನ್ಯಾಸ ಮತ್ತು ಹೊಳಪನ್ನು ಸುಧಾರಿಸುವಲ್ಲಿ ಸಹಾಯಕ.

ಪೇರಲೆ ಎಲೆಯನ್ನು ಸೇರಿಸಿದ ನೀರಿನ್ನು ನೆತ್ತಿಗೆ ಮಸಾಜ್ ಮಾಡಬಹುದು ಅಥವಾ ಶ್ಯಾಂಪೂ ಬಳಸಿ ತೊಳೆದ ನಂತರ ಈ ನೀರಿನಿಂದ ಕೂದಲನ್ನು ತೊಳೆಯಬಹುದು ಇದರಿಂದ ಕೂದಲು ಪುನಶ್ಚೇತನಗೊಳ್ಳುತ್ತದೆ ಮತ್ತು ಹೊಸ ಹೊಳಪು ಬರುವಂತೆ ಮಾಡುತ್ತದೆ.

ಸೀಬೆ ಎಲೆಗಳ ನೈಸರ್ಗಿಕ ಉರಿಯೂತ ವಿರೋಧಿ ಗುಣಗಳು ಮತ್ತು ಆಂಟಿಮೈಕ್ರೊಬಿಯಲ್ ಗುಣಲಕ್ಷಣಗಳು ನೆತ್ತಿಯನ್ನು ಶಮನಗೊಳಿಸಲು ಸಹಾಯ ಮಾಡುತ್ತದೆ, ನೆತ್ತಿಯಲ್ಲಿ ಉಂಟಾಗುವ ಕಿರಿಕಿರಿಯನ್ನು ಕಡಿಮೆ ಮಾಡುತ್ತದೆ ಮತ್ತು ಕೂದಲಿನ ಆರೋಗ್ಯದ ಮೇಲೆ ಅಡ್ಡ ಪರಿಣಾಮ ಬೀರುವ ಸೋಂಕನ್ನು ತಡೆಯುತ್ತದೆ.



# ಮಕ್ಕಳನ್ನು ನಿದ್ದೆಯಿಂದ ಎಬ್ಬಿಸೋ ತಪ್ಪು ಮಾಡಿದ್ರೆ ಯಾವೆಲ್ಲಾ ಸಮಸ್ಯೆಯಾಗುತ್ತೆ ಗೊತ್ತಾ?

ನಿದ್ದೆ ಆರೋಗ್ಯಕ್ಕೆ ಬಹಳ ಮುಖ್ಯ. ಯಾವುದೇ ವ್ಯಕ್ತಿಗೆ ನಿದ್ದೆಯ ಕೊರತೆಯುಂಟಾದರೆ ನಾನಾ ಕಾಯಿಲೆಗಳು ಕಾಡಲಾರಂಭಿಸುತ್ತದೆ. ಮಕ್ಕಳಲ್ಲಿ ನಿದ್ರಾಹೀನತೆ ಸಮಸ್ಯೆಯು ಅವರ ಮೆದುಳಿನ ಮೇಲೆ ಪರಿಣಾಮ ಬೀರುವುದು.

ಮಕ್ಕಳಿಗೆ ನಿದ್ದೆ ಬಹಳ ಮುಖ್ಯ. ಹೆಚ್ಚಿನ ಸಂದರ್ಭಗಳಲ್ಲಿ ಮಕ್ಕಳು ತಡರಾತ್ರಿವರೆಗೂ ಆಡುತ್ತಾ ಇರುತ್ತಾರೆ ಹೀಗಾಗಿ ಬೆಳಗ್ಗೆ ತಡವಾಗಿ ಏಳುತ್ತಾರೆ. ಆದರೆ ಹೆತ್ತವರು ಮಕ್ಕಳನ್ನು ಬೇಗನೇ ಏಳುವಂತೆ ಒತ್ತಾಯಿಸುತ್ತಾರೆ. ಮಕ್ಕಳು ನಿದ್ದೆ ಮಾಡಿರುವಾಗ ಅವರನ್ನು ನಿದ್ದೆಯಿಂದ ಎಬ್ಬಿಸುವುದು ಅವರ ಮೆದುಳಿನ ಮೇಲೆ ಪರಿಣಾಮ ಬೀರಬಲ್ಲದು. ಹಾಗಾಗಿ ಪೋಷಕರು ಯಾವಾಗಲೂ ತಮ್ಮ ಮಗುವಿಗೆ ಸಂಪೂರ್ಣ ನಿದ್ದೆ ದೊರೆಯುತ್ತಿದೆಯೇ ಎನ್ನುವುದನ್ನು ಖಚಿತಪಡಿಸಿಕೊಳ್ಳುವುದು ಬಹಳ ಮುಖ್ಯ.

**ಮೆದುಳಿಗೆ ಉತ್ತಮ ನಿದ್ರೆ ಮುಖ್ಯ**

ಕಳಪೆ ಗುಣಮಟ್ಟದ ನಿದ್ರೆ ಮೆದುಳಿಗೆ ಹಾನಿಕಾರಕವಾಗಿದೆ. ನರಮಂಡಲದ ಬೆಳವಣಿಗೆಯಲ್ಲಿ ನಿದ್ರೆ ಬಹಳ ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಅದರ ಕೊಡುಗೆ ಮಕ್ಕಳು ಮತ್ತು ಯುವಕರಲ್ಲಿ ಬದಲಾಗುತ್ತದೆ. ಕಡಿಮೆ ನಿದ್ರೆ ಪಡೆದ ಮಕ್ಕಳು ಸಾಕಷ್ಟು ನಿದ್ದೆ ಮಾಡಿದವರಿಗಿಂತ ಹೆಚ್ಚು ಮಾನಸಿಕ ಆರೋಗ್ಯ ಮತ್ತು ನಡವಳಿಕೆಯ ಸಮಸ್ಯೆಗಳನ್ನು ಹೊಂದಿರುತ್ತಾರೆ.

ಕಡಿಮೆ ನಿದ್ರೆಯು ಒತ್ತಡ, ಖಿನ್ನತೆ, ಆತಂಕ ಮತ್ತು ಆಕ್ರಮಣ–ಕಾರಿ ನಡವಳಿಕೆಗೆ ಸಂಬಂಧಿಸಿದೆ. ನಿದ್ರೆಯ ಕೊರತೆಯಿರುವ ಮಕ್ಕಳು ನಿರ್ಧಾರಗಳನ್ನು ತೆಗೆದುಕೊಳ್ಳುವುದು, ಸಮಸ್ಯೆಯನ್ನು ಪರಿಹರಿಸುವುದು ಮತ್ತು ಕಲಿಕೆಯಲ್ಲಿ ಸಮಸ್ಯೆಗಳನ್ನು ಹೊಂದಿರುತ್ತಾರೆ.

**ಮಕ್ಕಳು ಮತ್ತು ಯುವಕರಲ್ಲಿ ನಿದ್ರೆಯ ಪರಿಣಾಮ**

ಅಧ್ಯಯನದ ಪ್ರಕಾರ, ವಯಸ್ಕ–ರಿಗೆ, ನಿದ್ರೆ ಮುಖ್ಯವಾಗಿ ನಿರ್ವಹಣೆ ಮತ್ತು ದುರಸ್ತಿಗೆ ಸಂಬಂಧಿಸಿದೆ, ಆದ–ರೆ ಮಕ್ಕಳಿಗೆ, ಅವರ ಬೆಳವಣಿಗೆಗೆ ನಿದ್ರೆ ಬಹಳ ಮುಖ್ಯ. ಮೆದುಳಿನ ಬೆಳವಣಿಗೆಗೆ ಮತ್ತು ಸಿನಾಪ್ಟಿಕ್ ಸಂಪರ್ಕಗಳನ್ನು ಬಲಪಡಿಸಲು ಇದು ಅವಶ್ಯಕವಾಗಿದೆ. ಸಂಶೋಧಕರು ಇಲಿಗಳನ್ನು ಪರೀಕ್ಷಿಸಿದರು ಮತ್ತು ಕಳಪೆ ನಿದ್ರೆಯ ಗುಣಮಟ್ಟವು ವಯಸ್ಕರಿಗಿಂತ ಯುವ ಇಲಿಗಳ ಮೆದುಳಿನ ಮೇಲೆ ಹೆಚ್ಚು ಪರಿಣಾಮ ಬೀರುತ್ತದೆ ಎಂದು ಕಂಡುಹಿಡಿದಿದೆ. ಯುವ ಮಿದುಳುಗಳು ನಿದ್ರೆಯ ಕೊರತೆಯನ್ನು ನಿಭಾಯಿಸಲು ಸಾಧ್ಯವಾಗುವುದಿಲ್ಲ ಎಂದು ಅವರು ಕಂಡುಕೊಂಡರು.

**ಮಲಗುವ ಹಾಗೂ ಏಳುವ ಸಮಯ**

ಕಳಪೆ ನಿದ್ರೆಯ ಗುಣಮಟ್ಟ ಅಥ–ವಾ ಮಕ್ಕಳಲ್ಲಿ ನಿದ್ರೆಯ ಕೊರತೆಯು ಅವರ ಮೆದುಳಿನ ಮೇಲೆ ಋಣಾತ್ಮಕ ಪರಿಣಾಮ ಬೀರಬಹುದು ಎಂದು ಇದು ತೋರಿಸುತ್ತದೆ, ಇದರ ಪರಿಣಾಮಗಳನ್ನು ದೀರ್ಘಕಾಲದವರೆಗೆ ಕಾಣಬಹುದು. ಅಂತಹ ಪರಿಸ್ಥಿತಿಯಲ್ಲಿ, ಪೋಷಕರು ತಮ್ಮ ಮಕ್ಕಳಿಗೆ ಸರಿಯಾದ ಸಮಯಕ್ಕೆ ಮಲಗಲು ಮತ್ತು ಸರಿಯಾದ ಸಮಯಕ್ಕೆ ಏಳುವ ಅಭ್ಯಾಸಗಳನ್ನು ಬೆಳೆಸಲು ಸಹಾಯ ಮಾಡಬೇಕು.

**ನ್ಯೂರೋ ಡೆವಲಪ್‌ಮೆಂಟಲ್ ಡಿಸಾರ್ಡರ್‌ಗಳಿಗೆ ನಿದ್ರೆಗೂ ಇರುವ ಸಂಬಂಧ**

ಮಕ್ಕಳಲ್ಲಿ ನಿದ್ರಾ ಭಂಗ ಮತ್ತು ನರಗಳ ಬೆಳವಣಿಗೆಯ ಅಸ್ವಸ್ಥತೆಗಳ ನಡುವಿನ ಸಂಬಂಧವನ್ನು ಅಧ್ಯಯನವೊಂದು ಕಂಡುಹಿಡಿದಿದೆ. ನಿದ್ರೆಯ ಕೊರತೆಯು ಮೆದುಳಿನಲ್ಲಿರುವ ಕ್ಯಾಸ್ ಪ್ರೋಟೀನ್‌ಗಳ ಮೇಲೆ ಪರಿಣಾಮ ಬೀರುತ್ತದೆ. ಇದು ಕಲಿಕೆ ಮತ್ತು ಸ್ಮರಣೆಗೆ ಅವಶ್ಯಕವಾಗಿದೆ. ಇವುಗಳು ಆಟಿಸಂ ಸ್ಪೆಕ್ಟ್ರಮ್ ಡಿಸಾರ್ಡರ್ (ಂಖಆ) ಗಾಗಿ ಆನುವಂಶಿಕ ಅಪಾಯದ ಅಂಶಗಳೊಂದಿಗೂ ಸಂಬಂಧಿಸಿದೆ. ಮಗುವಿಗೆ ಸ್ವಲೀನತೆಯ ಆನುವಂಶಿಕ ಸಮಸ್ಯೆಗಳಿದ್ದರೆ ನಿದ್ರೆಯ ಕೊರತೆಯು ಅದನ್ನು ಇನ್ನಷ್ಟು ಪ್ರಚೋದಿಸುತ್ತದೆ.



## ರೈತ ಸಂಘದಿಂದ ದಿಢೀರ್ ರಾಜ್ಯರಸ್ತೆ ತಡೆ



**ಮುಧೋಳ:** ಪ್ರಸಕ್ತ ಹಂಗಾಮಿನ ಕಾರ್ಖಾನೆಗೆ ಕಳುಹಿಸುವ ಕಬ್ಬಿಗೆ ದರ ಘೋಷಣೆ ಹಾಗು ಹಿಂದಿನ ಬಾಕಿ ಉಳಿಸಿಕೊಂಡಿರುವ ಸಕ್ಕರೆ ಕಾರ್ಖಾನೆಯವರು ಬಾಕಿ ಚುಕ್ತಾ ಮಾಡಿದ ನಂತರ ಕಬ್ಬು ನುರಿಸುವ ಕಾರ್ಯವನ್ನು ಆರಂಭಿಸಬೇಕು. ಎಂದು ರೈತ ಸಂಘದ ಮುಖಂಡರು, ಕಬ್ಬು ಬೆಳೆಗಾರರು ಸೇರಿ ಸಂಜೆ 6.ಘಂಟೆಗೆ ಧೀಡಿರನೇ ವಿಜಯಪೂರ-ಬೆಳಗಾವಿ, ಮುಧೋಳ-ನಪ್ಪಾಣಿ ರಾಜ್ಯ ಹೆದ್ದಾರಿ ರಸ್ತೆ ಸಂಪೂರ್ಣ ಬಂದ್ ಮಾಡಿ ತಮ್ಮ ಆಕ್ರೋಶ ವ್ಯಕ್ತಪಡಿಸಿ ಕಾರ್ಖಾನೆ ಮಾಲಿಕರ ಮತ್ತು ಸರಕಾರದ ವಿರುಧ್ಧ ಧಿಕ್ಕಾರ ಕೂಗಿದರು.

ನಾಗರಿಕರ ಪರದಾಟ : ನಗರದ ಸಂಗೋಳ್ಳಿ ರಾಯಣ್ಣನ ವೃತ್ತದಲ್ಲಿ ಜಮಾಯಿಸಿದ್ದ ನೂರಾರು ರೈತರು ಧೀಡಿರನೇ ರಸ್ತೆ ಬಂದ್ ಮಾಡಿದ ಪರಿಣಾಮ ವಿದ್ಯಾರ್ಥಿಗಳು, ನಾಗ-ರಿಕರು, ಬೇರೆ ಬೇರೆ ಸ್ಥಳಗಳಿಗೆ ತೆರಳಲು ಹಾಗು ಪರೂರಿಗೆ ಪ್ರಯಾಣಿಸಬೇಕಿದ್ದ ಪ್ರಯಾಣಿಕರು ಸಹ ಧೀಡಿರನೆ ರಸ್ತೆ ಬಂದ್ ಆದ ಪರಿಣಾಮ ದಿಕ್ಕು ತೋಚದೇ ಪರದಾಡುವ ಪರಿಸ್ಥಿತಿ ಕಂಡು ಬಂದಿತು.

ಬಂದೋಬಸ್ತ : ಸಿಪಿಆಯ್. ಮಹಾದೇವ ಶಿರಹಟ್ಟಿ, ಎಸ್ಸೈ. ಅಜಿತಕುಮಾರ ಹೊಸಮನಿ ನೇತೃತ್ವದಲ್ಲಿ ಯಾವದೇ ರೀತಿಯ ತಕರಾರು, ಗಲಾಟೆ ಹಾಗು ಸಾರ್ವಜನಿಕರಿಗೆ ತೊಂದರೆ ಆಗದಂತೆ ಪೊಲೀಸ್ ಬಂದೋಬಸ್ತ ಕೈಗೊಂಡಿದ್ದರು.

## ವಕ್ಫ್ ಕಾಯ್ದೆ ವಿರೋಧಿಸಿ ರಸ್ತೆ ತಡೆದು ಪ್ರತಿಭಟನೆ

ರಾಮದುರ್ಗ: ಅಭಿವೃದ್ಧಿ ದೃಷ್ಟಿಯಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರಗಳು ಉತ್ತರ ಕರ್ನಾಟಕವನ್ನು ನಿರ್ಲಕ್ಷಿಸಲಾಗಿದ್ದು, ಲೋಕಾಪೂರದಿಂದ ರಾಮದುರ್ಗ ಮೂಲಕ ಧಾರವಾಡಕ್ಕೆ ರೇಲ್ವೆ ಮಾರ್ಗವನ್ನು ವಿಸ್ತರಿಸುವಂತೆ ಕೇಂದ್ರ ಸರಕಾರವನ್ನು ಒತ್ತಾಯಿಸುವ ನಿಟ್ಟಿನಲ್ಲಿ ಐಹಿಹಾಸಿಕ ಹೋರಾಟ ನಿರ್ಣಯವಾಗಲಿದ್ದು, ಅಭಿವೃದ್ಧಿಗೆ ನಾಂದಿ ಹಾಡಬೇಕೆಂದು ರೇಲ್ವೆ ಹೋರಾಟ ಕ್ರಿಯಾ ಸಮಿತಿಯ ಮುಖಂಡ ಮೊಹಮ್ಮದಶೆಫಿ ಬೆಣ್ಣಿ ಹೇಳಿದರು.

ಪಟ್ಟಣದ ಪ್ರೆಸ್‌ಕ್ಲಬ್‌ನಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಅವರು ಮಾತನಾಡಿ, 2004-05ರಲ್ಲಿ ರೇಲ್ವೆ ಮಾರ್ಗಕ್ಕೆ ಒತ್ತಾಯಿಸಿ ಅನೇಕ ಹೋರಾಟಗಳು ನಡೆದಿವೆ. ತದನಂತರದಲ್ಲಿ ಹೋರಾಟದ ಸ್ವರೂಪ ಬದಲಾಗಿ ಈಗ ಬೃಹತ್ ಪ್ರತಿಭಟನೆಗೆ ವೇದಿಕೆ ಸಿದ್ದವಾಗಿದೆ. ಈ ಹೋರಾಟವು ಜಾತ್ಯಾತೀತ ಮತ್ತು ಪಕ್ಷಾತೀತವಾಗಿ ನಡೆಯುತ್ತಿದ್ದು ಎಲ್ಲ ಸಾರ್ವಜನಿಕರು ಬೆಂಬಲಿಸುವಂತೆ ಅವರು ಮನವಿ ಮಾಡಿದರು.



ನ.12 ಮಂಗಳವಾರ ಬೆಳಿಗ್ಗೆ 10 ಗಂಟೆಗೆ ಪಟ್ಟಣದ ವೆಂಕಟೇಶ್ವರ ದೇವಸ್ಥಾನದಿಂದ ಪ್ರತಿಭಟನೆ ಹೊರಟು ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಮಿನಿ ವಿಧಾನಸೌಧಕ್ಕೆ ತೆರಳಿ ತಹಶೀಲ್ದಾರ್ ಮೂಲಕ ಮನವಿ ಸಲ್ಲಿಸಲಾಗುವುದು. ಸಾರ್ವಜನಿಕರು ಹಾಗೂ ವ್ಯಾಪಾರಸ್ಥರು ಸ್ವಯಂ ಘೋಷಿತವಾಗಿ ತಮ್ಮ ಅಂಗಡಿ ಮುಗ್ಗಟ್ಟುಗಳನ್ನು ಬಂದ್ ಮಾಡಿ ಪ್ರತಿಭಟನೆಯಲ್ಲಿ ಪಾಲ್ಗೊಳ್ಳುವಂತೆ ಅವರು ಮನವಿ ಮಾಡಿದರು.

ಮತ್ತೊಬ್ಬ ರೇಲ್ವೆ ಹೋರಾಟ ಕ್ರಿಯಾ ಸಮಿತಿ ಮುಖಂಡ ಗೈಬು ಜೈನೆಖಾನ್ ಮಾತನಾಡಿ, ನಿರಂತರ ಹೋರಾಟದ ಫಲವಾಗಿ 2016-17ರಲ್ಲಿ ಅನುದಾನವನ್ನು ಮೀಸಲಿಟ್ಟು, ಸರ್ವೆ ನಡೆಸಿ ಕ್ರಿಯಾ ಯೋಜನೆಯನ್ನು ಸಿದ್ದಪಡಿಸಿತ್ತು. ಕಾಲಾನಂತರ ಅದು ಸ್ಥಗಿ-ತವಾಗಿದೆ. ಈಗ ಮತ್ತೆ ಹೋರಾಟದ ಸ್ವರೂಪ ಬದಲಾದಂತೆ ಜನರ ಬೆಂಬಲ ವ್ಯಕ್ತವಾಗುತ್ತಿದೆ. ಮುಂಬರುವ ದಿನಗಳಲ್ಲಿ ಲೋಕಾಪೂರ, ರಾಮದುರ್ಗ, ಸವದತ್ತಿ ಮತ್ತು ಧಾರವಾಡ ತಾಲೂಕಿನ ಜನರನ್ನು ಒಂದೆಡೆ ಸೇರಿಸಿ ಪಾದಯಾತ್ರೆ ಚಳುವಳಿ, ಪತ್ರ ಚಳುವಳಿ ಮತ್ತು ನೈರುತ್ಯ ರೇಲ್ವೆ ಕಛೇರಿ ಎದುರು ಪ್ರತಿಭಟನೆ ಮಾಡುವುದಾಗಿ ಚರ್ಚಿಸಲಾಗಿದೆ ಎಂದು ತೆಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಪ್ರೆಸ್‌ಕ್ಲಬ್ ಅಧ್ಯಕ್ಷ ಮಲ್ಲಿಕಾರ್ಜುನ ಧೂಪದ, ರೇಲ್ವೆ ಹೋರಾಟ ಸಮಿತಿ ಮುಖಂಡ ಎಂ.ಕೆ. ಯಾದವಾಡ ಇದ್ದರು.

## ರೈಲ್ವೆ ಹೋರಾಟಕ್ಕೆ ಸಂಘಟನೆಗಳ ಬೆಂಬಲ



ರಾಮದುರ್ಗ: ಲೋಕಾಪುರದಿಂದ ರಾಮದುರ್ಗ ಮಾರ್ಗವಾಗಿ ಧಾರವಾಡಕ್ಕೆ ಸಂಪರ್ಕ ಕಲ್ಪಿಸುವ ನೂತನ ರೇಲ್ವೆ ಮಾರ್ಗಕ್ಕೆ ಒತ್ತಾಯಿಸಿ ನ.12ರಂದು ರೇಲ್ವೆ ಹೋರಾಟ ಕ್ರಿಯಾ ಸಮಿತಿ ಕರೆ ನೀಡಿದ ಪ್ರತಿಭಟನೆಗೆ ಪಟ್ಟಣದ ಹಲವು ಸಂಘಟನೆಗಳು ಬೆಂಬಲ ವ್ಯಕ್ತಪಡಿಸಿ, ಪ್ರತಿಭಟನೆಯಲ್ಲಿ ಪಾಲ್ಗೊಳ್ಳುವುದಾಗಿ ತಿಳಿಸಿದರು.


ಪಟ್ಟಣದ ಪ್ರೆಸ್‌ಕ್ಲಬ್‌ನಲ್ಲಿ ತಾಲೂಕು ರಡ್ಡಿ ಸಮಾಜ, ವಿರಕ್ತಮಠ ಟ್ರಸ್ಟ್ ಕಮಿಟಿ, ರೇಲ್ವೆ ಹೋರಾಟ ಸಮಿತಿಯ ಪದಾಧಿಕಾರಿಗಳು ಸೋಮವಾರ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿ, ರಾಮದುರ್ಗ ತಾಲೂಕಿನ ಸರ್ವಾಂಗೀನ ಅಭಿವೃದ್ಧಿಗೆ ರೇಲ್ವೆ ಮಾರ್ಗ ಅತೀ ಅವಷ್ಯವಿದೆ. ಪಕ್ಷಾತೀತ ಮತ್ತು ಜಾತ್ಯಾತೀತ ಹೋರಾಟಕ್ಕೆ ಸರ್ವ ಸಮುದಾಯ ಜನರ ಬೆಂಬಲ ವ್ಯಕ್ತವಾಗುತ್ತಿದೆ. ಈ ಹಿನ್ನೆಲೆಯಲ್ಲಿ ನ.12ರಂದು ನಡೆಯುವ ಬೃಹತ್ ಹೋರಾಟಕ್ಕೆ ಕೈಜೋಡಿಸುವುದಾಗಿ ವಿವಿಧ ಸಂಘಟನೆಗಳ ಮುಖಂಡರು ಹೇಳಿದರು.

ವಿರಕ್ತಮಠ ಟ್ರಸ್ಟ್ ಕಮಿಟಿ ಅಧ್ಯಕ್ಷ ಪ್ರದೀಪ ಪಟ್ಟಣ, ಕಾರ್ಯದರ್ಶಿ ಬಸವರಾಜ ಗಂಗಣ್ಣವರ, ಸದಸ್ಯರಾದ, ಶಿವಯೋಗಿ ಚಿಕ್ಕೋಡಿ, ಮಹಾಂತೇಶ ಉಮತಾರ, ಮಲಕಾಜಪ್ಪ ಮುಳ್ಳೂರ, ಚನ್ನಪ್ಪ ಸೊಬರದ, ತಾಲೂಕು ರಡ್ಡಿ ಸಮಾಜದ ಅಧ್ಯಕ್ಷ ಜ್ಞಾನೇಶ್ವರ ಮೇಲಪ್ಪಗೋಳ, ಮುಖಂಡರಾದ ಜಿ.ಬಿ. ರಂಗನಗೌಡ್ರ, ಗೋಪಾಲ ಸಂಶಿ, ಕೃಷ್ಣಗೌಡ ಪಾಟೀಲ, ಹನಮಂತ ಹಂಚನಾಳ, ರೇಲ್ವೆ ಹೋರಾಟ ಸಮಿತಿಯ ಬಸೀರಮ್ಮದ ಬೈರಕದಾರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

**ಚೂರು-ಪಾರು**

## ಮಲೇಷಿಯಾದಲ್ಲಿ ಗುರು-ಶಿಷ್ಯೆಯ ಭಾರತ ಸಂಸ್ಕೃತಿ ಯಾತ್ರೆ

**ಮಹಾಲಿಂಗಪುರ:** ರಾಷ್ಟ್ರೀಯ ಬಸವ ಪ್ರತಿಷ್ಠಾನ ಬೆಂಗಳೂರು ವತಿಯಿಂದ ಭಾರತ ಸಂಸ್ಕೃತಿ ಯಾತ್ರೆಯ ದಶಮಾನೋತ್ಸವ ಸಮಾರಂಭವನ್ನು ಬಾಲಿ





ಮಲೇಷಿಯಾ, ಥೈಲ್ಯಾಂಡ್‌ಗಳಲ್ಲಿ ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ. ಅಲ್ಲಿ ಬಸವತತ್ವ ಪ್ರಚಾರ ಮಾಡಲಿರುವ ಈ ಯಾತ್ರೆಯಲ್ಲಿ ಬಾಗಲಕೋಟ ಜಿಲ್ಲೆಯ ಬನಹಟ್ಟಿ ಹಾಗೂ ಮಹಾಲಿಂಗಪುರದ ಇಬ್ಬರು ಗುರು-ಶಿಷ್ಯರು ಭಾಗವಹಿಸುತ್ತಿರುವುದು ವಿಶೇಷವಾಗಿದೆ. ಬನಹಟ್ಟಿಯ ಸಾಹಿತಿ ಡಾ.ಬಿ.ಆರ್.ಪೊಲೀಸ್‌ಪಾಟೀಲ ಹಾಗೂ ಅವರ ಶಿಷ್ಯೆಯಾದ ಮಹಾಲಿಂಗಪುರದ ಕವಯತ್ರಿ ಶಿಕ್ಷಕಿ ದಾಕ್ಷಾಯಣಿ ಅಶೋಕ ಮಂಡಿ (ಹುಣಶ್ಯಾಳ) ಪಾಲ್ಗೊಳ್ಳುತ್ತಿದ್ದಾರೆ. ದಾಕ್ಷಾಯಣಿ ಮಂಡಿ ಬನಹಟ್ಟಿ ಕಾಲೇಜಿನಲ್ಲಿ ಡಾ.ಬಿ.ಆರ್.ಪೊಲಿಸಪಾಟೀಲ ಅವರ ವಿದ್ಯಾರ್ಥಿಯಾಗಿದ್ದರು. ಇದೀಗ ಅವರೂ ಕೂಡ ಶಿಕ್ಷಕಿಯಾಗಿ, ಕವಯಿತ್ರಿಯಾಗಿ ಬೆಳೆದಿದ್ದಾರೆ. ನ.17ರಿಂದ 28ರವರೆಗೆ ನಡೆಯುವ ಭಾರತ ಸಂಸ್ಕೃತಿ ಯಾತ್ರೆಯಲ್ಲಿ ನಮ್ಮ ನೆಲದ ಬಸವಣ್ಣನವರ ಆಶಯವನ್ನು ವಿದೇಶಿ ನೆಲದಲ್ಲಿ ವಿಸ್ತರಿಸಲು ಗುರುವಿನಿಂದಗೆ ಶಿಷ್ಯೆ ಕೂಡ ಹೊರಟಿರುವುದು ಗುರುವಿಗೂ ಗರ್ವ, ಶಿಷ್ಯೆಗೂ ಅಭಿಮಾನದ ಸಂಗತಿ.

## ಬೈಕ್ ಸೇರಿ ಬಂಪರ್ ಕೊಡುಗೆ ನೀಡಿದ 'ಬಾಣಕಾರ ಟೆಕ್ಸ್‌ಟೈಲ್ಸ್'



**ರಬಕವಿ-ಬನಹಟ್ಟಿ:** ದಸರಾ ಹಾಗು ದೀಪಾವಳಿ ನಿಮಿತ್ತ ಜವಳಿ ಗ್ರಾಹಕರಿಗೆ ಉತ್ಕ್ರಷ್ಟವಾದ ವಸ್ತುಗಳೊಂದಿಗೆ ಲಕ್ಕಿ ಡ್ರಾ ಕೂಪನ್ ಯೋಜನೆ ಆಯೋಜಿಸಿದ್ದ ಬಾಗಲಕೋಟೆ ಜಿಲ್ಲೆಯ ಬನಹಟ್ಟಿಯ ಬಾಣಕಾರ ಟೆಕ್ಸ್‌ಟೈಲ್ಸ್‌ನ ಮಾಲಿಕ ಮಲ್ಲಿಕಾರ್ಜುನ ಬಾಣ-ಕಾರ ಸೋಮವಾರ ಸಂಜೆ ಡ್ರಾ ಮಾಡುವ ಮೂಲಕ ಅದೃಷ್ಟಶಾಲಿಗಳಿಗೆ ಬೈಕ್, ಟಿವಿ, ಮೊಬೈಲ್, ಫ್ರಿಜ್ ಸೇರಿದಂತೆ ಸಾವಿರಾರು ಬಹುಮಾನಗಳನ್ನು ಉಡುಗೊರೆಯಾಗಿ ನೀಡುವಲ್ಲಿ ಯಶಸ್ವಿಯಾದರು.ಬನಹಟ್ಟಿಯ ಬಾಣಕಾರ ಟೆಕ್ಸ್‌ಟೈಲ್ಸ್ ಆವರಣದಲ್ಲಿ ಜರುಗಿದ ಅದೃಷ್ಟಶಾಲಿಗಳ ವಿಜೇತ ಕಾರ್ಯಕ್ರಮದಲ್ಲಿ ಮಾತನಾಡಿದ, ಉತ್ತಮ ಗುಣಮಟ್ಟದಲ್ಲಿ ಕಟ್ಟಕಡೆಯ ಕುಟುಂಬಗಳಿಗೂ ಕೈಗೆಟುಕುವ ದರದಲ್ಲಿ, ಕಡಿಮೆ ಲಾಭದೊಂದಿಗೆ ಹೋಲ್‌ಸೇಲ್ ಹಾಗು ರಿಟೇಲ್ ದರದಲ್ಲಿ ಬ್ರ್ಯಾಂಡೆಡ್ ಕಂಪನಿಯಿಂದ ನೇರ ಗ್ರಾಹಕರಿಗಾಗಿ ತಲುಪಿಸುವ ನಿಟ್ಟಿನಲ್ಲಿ ಸೇವೆ ಒದಗಿಸುತ್ತಿದೆ ಎಂದರು.ಪಂಕಜ ಬಾಣ-ಕಾರ, ಪ್ರಮೋದ ಬಾಣಕಾರ, ಭೀಮಶಿ ಮಗದುಮ್, ಪಂಡಿತ ಪಟ್ಟಣ, ಶ್ರೀಶೈಲ ದಭಾಡಿ, ರಾಜೇಂದ್ರ ಭದ್ರನ್ನವರ, ಚನ್ನವೀರಪ್ಪ ಬಾಣಕಾರ, ಬಸವರಾಜ ಬಾಣಕಾರ, ಸೇರಿದಂತೆ ಅನೇಕರಿದ್ದರು.

**ನಮ್ಮ ಪತ್ರಿಕೆಯ ದಿ.12-11-2024ರ ಸಂಚಿಕೆಯಲ್ಲಿ 2ನೇ ಪುಟದಲ್ಲಿ ಪ್ರಕಟವಾದ ಜ್ಞಾನದ ಕೆಲಸ ಅಜ್ಞಾನ ಅಳಿಸುತ್ತದೆ : ಸಿದ್ದೇಶ್ವರ ಶ್ರೀ ಸುದ್ದಿಯಲ್ಲಿ ಕಣ್ತಪ್ಪಿನಿಂದಾಗಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ ಮಾತನಾಡುತ್ತಿರುವ ಭಾವಚಿತ್ರ ಪ್ರಕಟವಾಗಿದೆ. ಅದಕ್ಕಾಗಿ ವಿಷಾದಿಸುತ್ತೇವೆ.**

**- ಸಂಪಾದಕರು**

# ಜಮೀನಿನಲ್ಲಿ ವಕ್ಫ್ ಆಸ್ತಿ ನಮೂದು ಖಂಡಿಸಿ ಬೃಹತ್ ಪ್ರತಿಭಟನೆ

### ನಾಗರಿಕ ಹಿತ ರಕ್ಷಣಾ ವೇದಿಕೆ, ವಿಹಿಂಪ, ಭಜರಂಗ ದಳ, ಮಾಜಿ ಸೈನಿಕರ ಸಂಘ, ರೈತಪರ ಸೇರಿ ವಿವಿಧ ಸಂಘಟನೆಗಳಿಂದ ಹೋರಾಟ

**ಬೈಲಹೊಂಗಲ:** ರಾಜ್ಯದ ರೈತರ ಜಮೀನಿನ ಮೇಲೆ ಅನಧಿಕೃತವಾಗಿ ವಕ್ಫ ಹೆಸರು ನಮೂದವಾಗಿರುವದನ್ನು ರದ್ದುಗೊಳಿಸಬೇಕು. ವಕ್ಫ ಕಾನೂನು ದುರ್ಭಳಕೆ ಆಗುತ್ತಿದ್ದು ಕೂಡಲೇ ರದ್ದುಪಡಿಸುವಂತೆ ಒತ್ತಾಯಿಸಿ, ನಾಗರಿಕ ಹಿತ ರಕ್ಷಣಾ ವೇದಿಕೆ, ವಿಶ್ವ ಹಿಂದೂ ಪರಿಷತ್, ಭಜರಂಗ ದಳ, ಮಾಜಿಸೈನಿಕರ ಸಂಘ, ರೈತ ಪರ ಸಂಘಟಣೆಗಳು, ದಲಿತ ಸಂಘರ್ಷ ಸಮೀತಿ, ವಿಶ್ವಕರ್ಮ ಸಮಾಜ, ರಾಜಸ್ಥಾನ ಸಂಘ, ಹಡಪದ ಸಮಾಜ ಆಶ್ರಯದಲ್ಲಿ ಪಟ್ಟಣದ ಎಸ್.ಆರ್.ಸರ್ಕಲ್‌ದಲ್ಲಿ ಸುಮಾರು ಎರಡು ಘಂಟೆಗಳ ಕಾಲ ರಸ್ತೆ ರೋಖೋ ನಡೆಸಿ ಪ್ರತಿಭಟಿಸಿ ಉಪವಿಭಾಗಾಧಿಕಾ-ರಿಗಳ ಮೂಲಕ ರಾಜ್ಯಪಾಲರಿಗೆ ಮನವಿ ಅರ್ಪಿಸಿದರು.

ಮಾಜಿ ಶಾಸಕ ಡಾ.ವಿಶ್ವನಾಥ ಪಾಟೀಲ ಮಾತನಾಡಿ, ರಾಜ್ಯದಲ್ಲಿ ವಕ್ಫ ಕಾನೂನು ದುರ್ಭಳಕೆ ಮಾಡಿಕೊಂಡು ರೈತರ ಜಮೀನು, ಸ್ಮಶಾನ ಭೂಮಿ, ಮಠ, ದೇವಾಲಯಗಳು ಇನ್ನಿತರ ಸ್ಥಳಗಳ ಪಹಣಿ ಪತ್ರಿಕೆಯಲ್ಲಿ ಏಕಾ ಏಕಿ ವಕ್ಫ ಆಸ್ತಿ ಎಂದು ನಮೂದಾಗುತ್ತಿದ್ದು ಇದರಿಂದ ಜನ ಸಾಮಾನ್ಯರಲ್ಲಿ ಆತಂಕ ಉಂಟು ಮಾಡಿದೆ. ಕೂಡಲೇ ರಾಜ್ಯ ಸರಕಾರ ಪಹಣಿ ಪತ್ರಿಕೆಯಲ್ಲಿರುವ ವಕ್ಫ ಆದೇಶವನ್ನು ಸಂಪೂರ್ಣವಾಗಿ ರದ್ದು ಮಾಡಬೇಕು. ಕೂಡಲೇ ಕೇಂದ್ರ ಸರಕಾರ ವಕ್ಫ ಕಾಯ್ದೆಯನ್ನು ಹಿಂದಕ್ಕೆ ಪಡೆಯಬೇಕು. ಇಲ್ಲದಿದ್ದರೆ ಮುಂದಿನ ದಿನಮಾನಗಳಲ್ಲಿ ಉಗ್ರ ಹೋರಾಟ ಮಾಡಿ ಸರಕಾರಕ್ಕೆ ಬಿಸಿ ಮುಟ್ಟಿಸಲಾಗುದೆಂದರು.



ಸಂಗೊಳ್ಳಿ ಹಿರೇಮಠದ ಗುರುಲಿಂಗ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ರಾಜ್ಯದಲ್ಲಿ ವಕ್ಫ ಕಾನೂನನ್ನು ಸಂಪೂರ್ಣ ದುರ್ಭಳಕೆ ಮಾಡಿಕೊಂಡು ರೈತರ, ಸ್ಮಶಾನ ಭೂಮಿಗಳು ಸೇರಿದಂತೆ ಇತರೇ ಜಮೀನುಗಳ ಪಹಣಿ ಪತ್ರಿಕೆಯಲ್ಲಿ ವಕ್ಫ ಆಸ್ತಿ ಎಂದು ನಮೂದ ಮಾಡಿ ವಂಚನೆಯೊಂದಿಗೆ ಘೋರ ಅನ್ಯಾಯ ಮಾಡುತ್ತಿರುವ ಸರಕಾರದ ವಿರುದ್ಧ ಕಿಡಿ ಕಾರಿ ಕೂಡಲೇ ಈ ಕಾನೂನು ರದ್ದು ಪಡಿಸದಿದ್ದರೆ ಇಲ್ಲದಿದ್ದರೆ ಅಮರಣ ಉಪವಾಸ ಸತ್ಯಾಗ್ರಹ ಹಮ್ಮಿಕೊಳ್ಳಲಾಗುವದೆಂದು ಎಚ್ಚರಿಕೆ ನೀಡಿದರು.

ಚಿತ್ರ ನಟ ಶಿವರಂಜನ ಬೋಳಣ್ಣವರ, ಪ್ರಮೋದಕುಮಾರ ವಕ್ಕುಂದಮಠ, ವಕೀಲರ ಸಂಘದ ಅಧ್ಯಕ್ಷ ಎಂ.ಆರ್. ಮೆಳವಂಕಿ, ಉದ್ಯಮಿ ವಿಜಯ ಮೆಟಗುಡ್ಡ, ನಿಂಗಪ್ಪ ಚೌಡಣ್ಣವರ, ಜಿ.ಪಂ.ಮಾಜಿ ಸದಸ್ಯ ಶಂಕರ ಮಾಡಲಗಿ, ಕಾಶೀನಾಥ ಬಿರಾದಾರ, ರೈತ ಸಂಘದ ಮುಖಂಡ ಮಹಾಂತೇಶ ಕಮತ, ಬಿ.ಎಂ.ಚಿಕ್ಕನಗೌಡರ ಮಾತನಾಡಿ, ರಾಜ್ಯದಲ್ಲಿ ವಕ್ಫ ಕಾನೂನನ್ನು ಸಂಪೂರ್ಣವಾಗಿ ದುರ್ಭಳಕೆ ಮಾಡಿಕೊಂಡು ರೈತರ ಮತ್ತು ಮನೆ, ಮಠ-ಮಂದಿರ, ಇತರೇ ಪ್ರಮುಖ ಸ್ಥಳಗಳ ಪಹಣಿ ಪತ್ರಿಕೆಯಲ್ಲಿ ವಕ್ಫ ಆಸ್ತಿ ಎಂದು ನಮೂದಾಗುತ್ತಿದ್ದು ಇದನ್ನು ಕೂಡಲೇ ರಾಜ್ಯ ಸರಕಾರ ರದ್ದುಪಡಿಸಬೇಕೆಂದು ಹರಿಹಾಯ್ದರು. ಮುಖ್ಯ ಮಂತ್ರಿ ಸಿದ್ದರಾಮಯ್ಯನವರು ನಾಚಿಕೆ, ಮಾನ, ಮರ್ಯಾದೆ ಇದೆಯಾ ಅಂತಾ ಪ್ರಶ್ನಿಸುತ್ತಾರೆ, ರಾಜ್ಯದಲ್ಲಿ ಇಷ್ಟೊಂದು ಅವಾಂತರ ನಡೆದರೂ ರೈತರ ಭೂಮಿ ಕಬಳಿಸುತ್ತಿರುವ ನಿಮ್ಮ ಸರಕಾರಕ್ಕೆ ನಾಚಿಕೆ ಆಗುವದಿಲ್ಲವೇ ಆಕ್ರೋಶ ವ್ಯಕ್ತಪಡಿಸಿದರು.

ಚಂದ್ರಶೇಖರ ಕೊಪ್ಪದ, ಸಂತೋಷ ಹಡಪದ, ಪುಂಡಲೀಕ ಭಜಂತ್ರಿ, ವಿಜಯ ಪತ್ತಾರ, ಸಿ.ಕೆ.ಮೆಕ್ಕೆದ, ರಾಜು ಬೊಂಗಾಳೆ, ಬೀರಪ್ಪ ದೇಶನೂರ, ಗೂಳಪ್ಪ ಇಟಗಿ, ವೀರನಗೌಡಾ ದೊಡ್ಡವೀರಪ್ಪನವರ, ಅಪ್ಪಣ್ಣ ಹಡಪದ, ಗೀ-ರೀಶ ಹಲಸಗಿ, ಚಿದಂಬರ ಮೇಟಿ, ಸುರೇಶ ಸಂಪಗಾಂವಿ, ಶ್ರೀಕಾಂತ ಶಿರಹಟ್ಟಿ, ಕುಬೇರ ಪೀರಗೋಜಿ, ಬಸಯ್ಯ ಹಿರೇಮಠ, ಸಂಗಮೇಶ ಸವದತ್ತಿಮಠ, ರವಿ ಸಿದ್ದಣ್ಣವರ ಮಾತನಾಡಿ, ಸರಕಾರದ ವಿರುದ್ಧ ಕಿಡಿ ಕಾರಿದರು. ಉಪವಿಭಾಗಾಧಿಕಾರಿ ಪ್ರಭಾವತಿ ಫಕ್ಕೀರಪೂರ ಮನವಿ ಸ್ವೀಕರಿಸಿ ಮಾತನಾಡಿ, ತಮ್ಮ ಮನವಿಯನ್ನು ಸರಕಾರದ ಗಮನಕ್ಕೆ ತರುವದಾಗಿ ಭರವಸೆ ನೀಡಿದ ನಂತರ ಪ್ರತಿಭಟನೆ ಹಿಂದಕ್ಕೆ ಪಡೆದರು.

ಸೋಮನಾಥ ಸೊಪ್ಪಿಮಠ, ಎಫ, ಎಸ್.ಸಿದ್ದನಗೌಡರ, ಮುರಗೆಪ್ಪ ಗೂಂಡ್ಲೂರು, ಬಸವರಾಜ ರಾಯರ, ಮಹಾಂತೇಶ ಜಿಗಜಿನ್ನಿ, ಅಶೋಕ ಜವಳಿ, ನಾರಾಯಣ ನಲವಡೆ, ನಾಗರಾಜ ಗೂಂಡ್ಲೂರ, ಮಲ್ಲಿಕಾರ್ಜುನ ಹುಂಬಿ, ಸುಭಾಶ ತುರಮರಿ ಸೇರಿದಂತೆ ನೂರಾರು ನಾಗರಿಕರು ಇದ್ದರು.

## ನೇಕಾರ ವಸತಿ ಯೋಜನೆ ಫಲಾನುಭವಿ ಆಯ್ಕೆಯಲ್ಲಿ ಗೋಲ್‌ಮಾಲ್

### 40ಕ್ಕೂ ಅಧಿಕ ಅನರ್ಹರನು ರದ್ದುಗೊಳಿಸಿ, ಅರ್ಹರಿಗೆ ನೀಡಲು ಪುರಸಭೆ ಸದಸ್ಯರ ಒತ್ತಾಯ

**ಮಹಾಲಿಂಗಪುರ:** ದೇವರಾಜ ಅರಸು ವಸತಿ ಯೋಜನೆಯಡಿ ವಸತಿ ಇಲಾಖೆಯ ಕುಶಲ ಕರ್ಮಿ ನೇಕಾರರ ವಸತಿ ರಹಿತರಿಗೆ 2021-22ನೇ ಸಾಲಿನಲ್ಲಿ ಮಂಜೂರಿಯಾದ 100 ಮನೆಗಳಲ್ಲಿ 40ಕ್ಕೂ ಅಧಿಕ ನೇಕಾರರು ಮತ್ತು ಕುಶಲ ಕರ್ಮಿಗಳು ಅಲ್ಲದ ವ್ಯಕ್ತಿಗಳನ್ನು ಆಯ್ಕೆಮಾಡಿ ನೇಕಾರರಿಗೆ ಅನ್ಯಾಯ ಮಾಡಲಾಗಿದೆ. ಜಿಲ್ಲಾಧಿಕಾರಿಗಳು ಮತ್ತು ಜವಳಿ ಇಲಾಖೆ ಉಪ ನಿರ್ದೇಶಕರು ನೇಕಾರ ಕಾಲನಿಯಲ್ಲಿ ಅರ್ಹ ಫಲಾನುಭವಿಗಳನ್ನು ಹೊರತು ಪಡಿಸಿ, ಇನ್ನುಳಿದ 40ಕ್ಕೂ ಅಧಿಕ ಅನರ್ಹ ಫಲಾನುಭವಿಗಳ ಪಟ್ಟಿಯನ್ನು ರದ್ದುಗೊಳಿಸಬೇಕೆಂದು ಪುರಸಭೆ ಮಾಜಿ ಅಧ್ಯಕ್ಷ ಬಸವರಾಜ ಹಿಟ್ಟಿನಮಠ ಹೇಳಿದರು.

ಪುರಸಭೆ ಸದಸ್ಯ ಪ್ರಲ್ಹಾದ ಸಣ್ಣಕ್ಕಿ ಅವರ ಕಾರ್ಯಾಲಯದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು ನೇಕಾರ ವೃತ್ತಿಯನ್ನು ಮಾಡದೇ ಇರುವ, ವ್ಯಕ್ತಿಗಳನ್ನು ಆಯ್ಕೆ ಮಾಡಿ ಬಡನೇಕಾರರಿಗೆ ಅನ್ಯಾಯ ಮಾಡಲಾಗಿದೆ. ಜಿಲ್ಲಾಧಿಕಾರಿಗಳು ಮತ್ತು ಜವಳಿ ಇಲಾಖೆ ಉಪನಿರ್ದೇಶಕರು ಈಗಿನ ಆಯ್ಕೆಪಟ್ಟಿಯನ್ನು ರದ್ದುಗೊಳಿಸಿ ಅರ್ಹ ನೇಕಾರರನ್ನು ಆಯ್ಕೆ ಮಾಡಬೇಕೆಂದು ಒತ್ತಾಯಿಸಿದರು.



ಪುರಸಭೆ ಸದಸ್ಯ ಪ್ರಲ್ಹಾದ ಸಣ್ಣಕ್ಕಿ ಮಾತನಾಡಿ ಕುಶಲ ಕರ್ಮಿಗಳ ನೇಕಾರ ವಸತಿ ಯೋಜನೆಯ ಫಲಾನುಭವಿಗಳ ಆಯ್ಕೆಯಲ್ಲಿ ಭಾರಿ ಗೋಲ್‌ಮಾಲ್ ನಡೆದಿದೆ. ಒಬ್ಬೊಬ್ಬ ಫಲಾನುಭವಿಯಿಂದ ಕನಿಷ್ಠ 20 ರಿಂದ 30 ಸಾವಿರ ಲಂಚ ಪಡೆದು ನೇಕಾರರರು ಅಲ್ಲದ 40ಕ್ಕೂ ಅಧಿಕ ಫಲಾನುಭವಿಗಳಿಗೆ ಮನೆ ಹಂಚಿ ಲಕ್ಷಾಂತರ ಅವ್ಯವಹಾರ ನಡೆಸಿ, ಅರ್ಹ ನೇಕಾರರಿಗೆ ಅನ್ಯಾಯ ಮಾಡಿದ್ದಾರೆ. ನೇಕಾರ ಕಾಲನಿಯಲ್ಲಿನ ಫಲಾನುಭವಿಗಳನ್ನು ಹೊರತುಪಡಿಸಿ ಉಳಿದ 40ಕ್ಕೂ ಅಧಿಕ ಅನರ್ಹ ಪಟ್ಟಿಯನ್ನು ರದ್ದುಗೊಳಿಸಿ, ಅರ್ಹ ನೇಕಾರ-ರಿಗೆ ವಸತಿ ಯೋಜನೆಯ ಸೌಲಭ್ಯ ನೀಡಬೇಕು. ಇಲ್ಲದಿದ್ದರೆ ಬೃಹತ್ ಪ್ರತಿಭಟನೆ ನಡೆಸಲಾಗುವದು ಎಂದು ಪುರಸಭೆ ಮುಖ್ಯಾಧಿಕಾರಿಗಳು, ಜವಳಿ ಇಲಾಖೆ ಉಪನಿರ್ದೇಶಕರು ಮತ್ತು ಜಿಲ್ಲಾಧಿಕಾ-ರಿಗಳಿಗೆ ಆಗ್ರಸಿದರು.

ಪುರಸಭೆ ಸದಸ್ಯರಾದ ಬಸವರಾಜ ಚಮಕೇರಿ, ರವಿ ಜವಳಗಿ, ಮುಖಂಡರಾದ ಮಹಾಲಿಂಗ ಮುದ್ದಾಪೂರ, ಚನ್ನಪ್ಪ ರಾಮೋಜಿ, ಚನ್ನಗಿರಿ ಕೆಳಗಡೆ ಸೇರಿದಂತೆ ಹಲವರು ಇದ್ದರು.

## ಶರಣ ಸಾಹಿತ್ಯ ಅಳವಡಿಸಿಕೊಳ್ಳಿ



**ಇಂಡಿ:** ಶರಣ ಸಾಹಿತ್ಯವನ್ನು ಇಂದಿನ ಯುವಕ,ಯುವತಿಯರು ಸೇರಿದಂತೆ ಪ್ರತಿಯೊಬ್ಬ ಕನ್ನಡಿಗ, ಭಾರತೀಯರು ಅನುಸರಿಸುವ ಮತ್ತು ಜೀವನದಲ್ಲಿ ಅಳವಡಿಸಿಕೊಳ್ಳುವ ಅವಶ್ಯಕತೆ ಇದೆ ಎಂದು ಶಾಸಕ ಯಶವಂತರಾಯಗೌಡ ಪಾಟೀಲರು ಹೇಳಿದರು.

ಪಟ್ಟಣದ ಬಸವರಾಜೇಂದ್ರ ಮಂಗಲ ಕಾರ್ಯಾಲಯದಲ್ಲಿ ನಡೆದ ತಾಲೂಕಾ ಪ್ರಥಮ ಶರಣ ಸಾಹಿತ್ಯ ಸಮ್ಮೇಳನ ಹಾಗೂ ಶರಣ ಸಾಹಿತ್ಯ ಪರಿಷತ್ತಿನ ಬೆಳ್ಳಿಹಬ್ಬ ಸಂಭ್ರ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದರು.

ಅನುಭವ ಮಂಟಪದಲ್ಲಿ ನಡೆಯುತ್ತಿದ್ದ ಚರ್ಚೆ ಸಂವಾದಗಳು ಇಂದಿಗೂ ಪ್ರಸ್ತುತವಾಗಿವೆ. ಆ ಕಾರಣಕ್ಕಾಗಿ ಶರಣ ಸಾಹಿತ್ಯ ಮನೆ ಮನದ ಮಾತಾಗಬೇಕಾಗಿದೆ ಎಂದರು.

ಶರಣ ಶರಣೆಯರ ತತ್ವ ಸಿದ್ಧಾಂತಗಳು ವಿಚಾರಧಾರೆಗಳು ಪ್ರತಿಯೊಬ್ಬರ ಮನೆ ಮನ ತಲುಪುವ ಕಾರ್ಯವಾಗಬೇಕಾಗಿದೆ. ಈ ದಿಶೆಯಲ್ಲಿಇಂಡಿಯ ಶರಣ ಸಾಹಿತ್ಯ ಪರಿಷತ್ತು ಮಾಡುತ್ತಿರುವ ಕಾರ್ಯ ಪ್ರಶಂಸನೀಯ.

ಕಲುಷಿತಗೊಂಡಿರುವ ಇಂದಿನ ಸಮಾಜದಲ್ಲಿ ಜಾತ್ಯಾತೀತ ಮನೋಭಾವನೆಗಳನ್ನು ಬೆಳೆಸಲು ಶರಣರ ವಿಚಾರಧಾರೆ ಇಂದಿನ ಯುವ ಜನಾಂಗಕ್ಕೆ ಅವಶ್ಯವಿದ್ದು ಇಂಡಿಯ ಶರಣ ಸಾಹಿತ್ಯ ಈ ದಿಶೆಯಲ್ಲಿ ಕಾರ್ಯಗತವಾಗಬೇಕಾಗಿದೆ ಎಂದರು.

ಸಮ್ಮೇಳನದ ಸರ್ವಾಧ್ಯಕ್ಷ ಎಂ.ಜೆ.ಪಾಟೀಲ ಮಾತನಾಡಿ ಶರಣರ ನಡೆ ನುಡಿಗಳು ನಿಸ್ವಾರ್ಥ ಸಮಾಜ ಕಟ್ಟುವಲ್ಲಿ ಪ್ರಮುಖ ಪಾತ್ರ ಅವರ ಶರಣ ಸಂದೇಶಗಳು ಸಮರಾಭಾವದ ಸೇವಾ ಮನೋಭಾವ ನಮ್ಮ ಯುವಕರು ಪಾಲಿಸಬೇಕಾಗಿದೆ.ಶರಣರು ತಾವು ಬದುಕಿ ಇತರರಿಗೆ ಬದುಕುವದನ್ನು ಕಲಿಸಿದರು. ಲಿಂಗ, ಜಾತಿ, ವರ್ಗ ಜನಾಂಗ, ಭೇದವಿಲ್ಲದೆ ಬಾಳಿದರು, ದಾಸೋಹದ ಮೂಲಕ ಶರಣ ಸಾಹಿತ್ಯಕ್ಕೆ ಪ್ರೋತ್ಸಾಹ ನೀಡಿದ್ದಾರೆ ಎಂದರು.

ವಿಜಯಪುರ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಜಂಬುನಾಥ ಕಲ್ಯಾಣಿ, ವಿಜಯಪುರ ಶ್ರೀ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ವಿ.ಸಿ.ನಾಗಠಾಣ, ಇಂಡಿ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಬಿ.ಎಸ್.ಪಾಟೀಲ,ಶಿಕ್ಷಕ ಬಸವರಾಜ ಗೋರನಾಳ, ವಾಯ್.ಜಿ.ಬಿರಾದಾರ, ಇಂಡಿ ಕಸಾಪ ಘಟಕದ ಅಧ್ಯಕ್ಷ ರಾಘವೇಂದ್ರ ಕುಲಕರ್ಣಿ, ಸಂತೋಷ ವಾಲಿಕಾರ ಮಾತನಾಡಿದರು.

ವೇದಿಕೆಯ ಮೇಲೆ ಪರಮಪೂಜ್ಯ ಶ್ರೀ ಸ್ವರೂಪಾನಂದ ಶ್ರೀಗಳು,ಕಂದಾಯ ಉಪ ವಿಬಾಗಾಧಿಕಾರಿ ಅಬೀದ ಗದ್ಯಾಳ,ಶ್ರೀಮತಿ ಶಾಂತಾಬಾಯಿ ಪಾಟೀಲ,ಜಗದೀಶ ಕ್ಷತ್ರಿ, ಎ.ಸಿ.ಪಾಟೀಲ,ಜಾವೇದ ಮೋಮಿನ, ಪುರಸಭೆ ಅಧ್ಯಕ್ಷ ಲಿಂಬಾಜಿ ರಾಠೋಡ ಜಟ್ಟೆಪ್ಪ ರವಳಿ , ಶಶಿಕಲಾ ಬೇಟಗೇರಿ ಮತ್ತಿತರಿದ್ದರು.

ಮಲ್ಲಿಕಾರ್ಜುನ ಜೇವರಗಿಯವರ ಸಿದ್ದರಾಮ ಚಾರಿತ್ರ್ಯದ ಸಾಂಸ್ಕೃತಿ-ಕ ಅಧ್ಯಯನ ಮತ್ತು ಸದಾನಂದ ಈರನಕೇರಿಯವರ ನಮ್ಮವರು ಗ್ರಂಥ ಬಿಡುಗಡೆಗೊಳಿಸಿದರು.

ಸಮಾರಂಭದಲ್ಲಿ ಕದಳಿ ವೇದಿಕೆಯ ಗಂಗಾಬಾಯಿ ಗಲಗಲಿ, ಶಸಾಪ ನಿಕಟಪೂರ್ವ ಅಧ್ಯಕ್ಷ ಆರ್.ವಿ.ಪಾಟೀಲ,ಎ.ಎಸ್.ಗಾಣಿಗೇರ, ಎಚ್.ಎಸ್. ಏಳಗಾಂವ, ರಾಜಶೇಖರ ಮೇತ್ರಿ , ಮತ್ತಿತರಿದ್ದರು.

ಇದಕ್ಕೂ ಪೂರ್ವ ಪುರಸಭೆ ಅಧ್ಯಕ್ಷ ಲಿಂಬಾಜಿ ರಾಠೋಡ ಇವರಿಂದ ರಾಷ್ಟ್ರ ಧ್ವಜಾರೋಹಣ ಮತ್ತು ಶಸಾಪ ಅಧ್ಯಕ್ಷ ಬಿ.ಎಸ್.ಪಾಟೀಲ ಇವರಿಂದ ಪರಿಷತ್ತ ಧ್ವಜಾರೋಹಣ ನಡೆಯಿತು.

ನಂತರ ಸಮ್ಮೇಳನದ ಅಧ್ಯಕ್ಷ ಎಂ.ಜೆ.ಪಾಟೀಲ ಮತ್ತು ಶಾಂತಾಬಾಯಿ ಪಾಟೀಲ ಇವರ ಮೆರವಣಿಗೆ ಪ್ರವಾಸಿ ಮಂದಿರದಿಂದ ನಗರದ ಪ್ರಮುಖ ವೃತ್ತಗಳಲ್ಲಿ ಹಾಯ್ದು ಬಸವರಾಜೇಂದ್ರ ಮಂಗಲ ಕಾರ್ಯಾಲಯದ ವರೆಗೆ ನಡೆಯಿತು.

# ಅಜ್ಞಾನ ಅಳಿಸುವುದು ಜ್ಞಾನದ ಕೆಲಸ: ಸಿದ್ದೇಶ್ವರ ಶರಣರು

**ಬೆಳಗಾವಿ:** ಬೆಳಕಿನ ಕೆಲಸ ಕತ್ತಲೆಯನ್ನು ಹೊಡೆದೋಡಿಸುವುದು ಹಾಗೂ ಜ್ಞಾನದ ಕೆಲಸ ಅಜ್ಞಾನವನ್ನು ಹೊಡೆದೋಡಿಸುವುದು ಎಂದು ಇಟ್ನಾಳದ ಶ್ರೀ ಸಿದ್ದೇಶ್ವರ ಶರಣರು ಹೇಳಿದರು.

ಗುರ್ಲಾಪುರ ಗ್ರಾಮದ ಜನನಿ ಸಂಸ್ಥೆ ಹಾಗೂ ಶ್ರೀವಿದ್ಯಾ ನಿಧಿ ಕನ್ನಡ ಕಾನ್ವೆಂಟ್ ಶಾಲೆ ಇವುಗಳ ಸಂಂ-ಯುಕ್ತ ಆಶ್ರಯದಲ್ಲಿ ಶಿಶು ಸಂರಕ್ಷಣ ದಿನಾಚರಣೆಯ ನಿಮಿತ್ಯ ದೀಪೋತ್ಸವ ಮತ್ತು ಅಮ್ಮನ ಕೈತುತ್ತು ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯವನ್ನು ವಹಿಸಿ ಮಾತನಾಡುತ್ತಾ ಹುಟ್ಟಿನಿಂದ ಸಾಯುವವರೆಗೂ ಜ್ಞಾನವನ್ನು ಬೆಳೆಸಿಕೊಳ್ಳುವುದು ಮನುಷ್ಯನ ಜೀವನದ ಆದ್ಯ ಕರ್ತವ್ಯ.

ಯಾವ ತಾಯಿಯು ಚಿಕ್ಕಂದಿನಿಂದ ಜ್ಞಾನವನ್ನು ಕೊಡುವುದಿಲ್ಲವೋ ಅವರು ಮಕ್ಕಳಿಗೆ ಶತ್ರುಗಳು ಇದ್ದಂತೆ. ಆದ್ದರಿಂದ ತಂದೆ ತಾಯಿ ಗಳು ಮಕ್ಕಳಿಗೆ ಒಳ್ಳೆಯ ಜ್ಞಾನವನ್ನು ಮಗುವಿನ ಹುಟ್ಟಿನಿಂದ ಬೆಳೆಸಿ ಕೊಡಬೇಕು ಎಂದರು.

ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ ಎಂಬಂತೆ ಮಕ್ಕಳಿಗೆ ಚಿಕ್ಕಂದಿನಿಂದಾಗಲೇ ಒಳ್ಳೆಯ ಜ್ಞಾನವನ್ನು ಬೆಳೆಸಿಕೊಳ್ಳುವಂತೆ ನೋಡಿಕೊಳ್ಳಬೇಕು. ಆದ್ದರಿಂದ ಮಕ್ಕಳಿಗೆ ಜ್ಞಾನವು ಬಹಳ ಮುಖ್ಯವಾದದ್ದು. ಅಮ್ಮ ಅನ್ನುವ ಪದವು ಹೃದಯದಿಂದ ಬರುವಂತದ್ದು. ಒಂದು ತಕ್ಕಡಿಯಲ್ಲಿ ಭೂಮಿ, ಇನ್ನೊಂದು ತಕ್ಕಡಿಯಲ್ಲಿ ತಾಯಿಯನ್ನು ಇಟ್ಟು ತೂಗಿದರೆ ಅಮ್ಮನ ತೂಕ ಹೆಚ್ಚಿರುತ್ತದೆ. ಆದ್ದರಿಂದ ಅಮ್ಮನಿಗೆ ಸರಿಸಾಟಿಯಾಗುವುದು ಜಗತ್ತಿನಲ್ಲಿ ಯಾವುದು ಇಲ್ಲ. ಸ್ವಾಮಿ ವಿವೇಕಾನಂದರ ಮಾತಿನಂತೆ ಓ ಶೃತಿ ನೀನಿದ್ದರೆ ನಾ ಗೆದ್ದೆ ಎನ್ನುವಂತೆ ಶ್ರದ್ಧೆಯಿಂದ ಜ್ಞಾನವನ್ನು



ಬೆಳೆಸಿಕೊಂಡರೆ ಅದ್ಭುತವಾದ ವ್ಯಕ್ತಿಯಾಗಿ ಬೆಳೆಯಬಹುದು ಎಂದು ಹೇಳಿದರು.

ಮುಖ್ಯ ಅತಿಥಿಗಳಾದ ರಾಧಾ ಎಂ ಎನ್ ಮಾತನಾಡುತ್ತಾ, ಎಲ್ಲರೂ ಬಯಸುವುದು ತಮ್ಮ ಮಕ್ಕಳು" ದ ಬೆಸ್ಟ್ "ಆಗಬೇಕೆಂದು, ಆದರೆ ಹೇಗೆ ಆಗಬೇಕು ಎನ್ನುವ ವೈಜ್ಞಾನಿಕ ಜ್ಞಾನ ಇರುವುದಿಲ್ಲ , ಮಗು ಹುಟ್ಟುವುದಕ್ಕಿಂತ ಮೊದಲು ದೇವರಲ್ಲಿ ಬೇಡಿಕೊಳ್ಳುವುದು, ಹರಕೆ ಹೊರುವುದು, ಪೂಜೆ ಮಾಡಿಸುವುದು ಮಾಡುತ್ತೇವೆ. ಆದರೆ ಮಗು ಹುಟ್ಟಿದ ಮೇಲೆ ಅದನ್ನು ಹೇಗೆ ಬೆಳೆಸಿಬೇಕು ಎನ್ನುವ ವೈಜ್ಞಾನಿಕ ತರಬೇತಿ ನಮಗೆ ಇರುವುದಿಲ್ಲ. ನಾಯಿ ಹೇಗೆ ಬೆಳೆಸಬೇಕು, ಬೆಳೆ ಹೇಗೆ ಬೆಳೆಸಬೇಕು, ಪ್ರಾಣಿಗಳನ್ನು ಹೇಗೆ ಸಾಕಬೇಕು ಎಂಬ ತರಬೇತಿಗಳನ್ನು ಪಡೆದುಕೊಳ್ಳುತ್ತೇವೆ. ಹಾಗೂ ನಮ್ಮ ಮಕ್ಕಳನ್ನು ಹೇಗೆ ಬೆಳೆಸಬೇಕು ಎನ್ನುವುದು ಜ್ಞಾನ ಇರುವುದಿಲ್ಲ. ಮಗು ಹುಟ್ಟಿದಾಗ ಅದರ ಮೆದುಳು ವಯಸ್ಕರ ಕಾಲು ಭಾಗ ಆಗಿರುತ್ತದೆ. ಮಗುವಿನಲ್ಲಿ ಅತ್ಯಂತ ವೇಗ ವಾಗಿ ಬೆಳೆಯುವ ಅಂಗವೆಂದರೆ ಅದು ಮೆದುಳು. ಒಂದು ವರ್ಷದಲ್ಲಿ 70% ಮೆದುಳು ಬೆಳವಣಿಗೆ ಯಾಗುತ್ತದೆ. ಹಾಗೂ ಮೂರನೇ ವರ್ಷದಲ್ಲಿ 10% ಮೆದುಳು ಬೆಳವಣಿಗೆ ಯಾಗುತ್ತದೆ. ಐದನೇ ವರ್ಷದಲ್ಲಿ 15% ಮೆದುಳು ಬೆಳವಣಿಗೆ ಆಗುತ್ತದೆ. 25 ನೇ ವಯಸ್ಸಿನಲ್ಲಿ 5% ಮೆದುಳು ಬೆಳವಣಿಗೆ ಆಗುತ್ತದೆ. ಹೀಗೆ 25 ವಯಸ್ಸಿನವರೆಗೆ ಮನುಷ್ಯನ ಮೆದುಳು 100% ಬೆಳವಣಿಗೆ ಆಗುತ್ತದೆ. ಆದರೆ ನಾವುಗಳು ಈ ವಯಸ್ಸಿನಲ್ಲಿ ಮೆದುಳಿನ ಬೆಳವಣಿಗೆಗೆ ಅವಶ್ಯವಿರುವುದನ್ನು ಬಿಟ್ಟು ಮಕ್ಕಳನ್ನು ಬೈಯುವುದು, ದಂಡಿಸುವುದು ಮಾಡುತ್ತೇವೆ. ಇದರಿಂದ ಮಕ್ಕಳ ಮೆದುಳಿನ ಬೆಳವಣಿಗೆ ಕುಂಠಿತವಾಗುತ್ತದೆ ಎಂದು ಮಾತನಾಡಿದರು.

ಅತಿಥಿಗಳಾದ ಎ ಜಿ ಶರಣಾರ್ಥಿ ಗುರುಗಳು ಮಾತನಾಡುತ್ತಾ ನಿಮ್ಮ ಮಕ್ಕಳಿಗೆ ಎಷ್ಟಾದರೂ ಆಸ್ತಿ ಮಾಡಬಹುದು, ಜ್ಞಾನದ ಆಸ್ತಿಯನ್ನು ಮಾಡುವುದು ಅಷ್ಟು ಸುಲಭವಲ್ಲ. ಮಕ್ಕಳಿಗೆ ಮಾಡಿದ ಆಸ್ತಿಯನ್ನು ಬಂಧು-ಬಳಗದವರು ಕಸಿದುಕೊಳ್ಳಬಹುದು. ಆದರೆ ಮಕ್ಕಳಲ್ಲಿ ವಿದ್ಯೆ ಮತ್ತು ಜ್ಞಾನದ ಆಸ್ತಿಯನ್ನು ಯಾರು ಕಸಿದುಕೊಳ್ಳಲು ಸಾಧ್ಯವಿಲ್ಲ ಎಂಬ ಈ ಮಾತನ್ನು ಹೇಳಿದರು.

ಶಿವರುದ್ರಯ್ಯ ಹಿರೇಮಠ್ ಮಾತನಾಡಿ ಶಾಲೆಗಳು ತರಬೇತಿಗಳನ್ನು ನಡೆಸುವುದರೊಂದಿಗೆ ಈ ರೀತಿಯ ಕಾರ್ಯಕ್ರಮಗಳನ್ನು ನಡೆಸುವುದರಿಂದ ಮಕ್ಕಳಲ್ಲಿ ಮತ್ತು ಪಾಲಕರಲ್ಲಿ ಒಳ್ಳೆಯ ಬಾಂಧವ್ಯ ಬೆಳೆಯುವುದರಲ್ಲಿ ಸಹಾಯವಾಗುತ್ತದೆ. ಹೀಗೆ ವಿದ್ಯಾನಿಧಿ ಶಾಲೆಯು ಮೊದಲಿನಿಂದಲೂ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಪಾಲಕರಿಗೆ ಮತ್ತು ಮಕ್ಕಳಿಗೆ ಮುಟ್ಟಿಸುವಲ್ಲಿ ಯಶಸ್ವಿಯಾಗುತ್ತಾ ಬಂದಿರುತ್ತದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಮುಖ್ಯೋಪಾಧ್ಯಾಯರು ವಿಷ್ಣು ದೊಡ್ಡಮನಿ ಅವರು ಮಾತನಾಡಿ ಪಾಲಕರು ಈ ರೀತಿಯಾಗಿ ಭಾಗವಹಿಸುವುದ-ರಿಂದ ಶಾಲೆಯಲ್ಲಿ ಇನ್ನೂ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸಹಾಯವಾಗುತ್ತದೆ ಎಂದರು.

ಸುರೇಶ್ ಪಾಟೀಲ, ಸಿಬ್ಬಂದಿ ಪೂಜಾ ಮರಾಠೆ, ಪವಿತ್ರ ಹಿರೇಮಠ, ಸುರೇಖಾ ಸಾಲ್ಗುಡಿ, ದಾಕ್ಷಾಯಿಣಿ ಅಂಬಿಗೇರ, ಜಗದೀಶ ಹಿರೇಮಠ, ಸಚಿನ ಪಾಲಬಾವಿ, ಸುರೇಶ ನೇಮಗೌಡರ, ರವಿ ಮ್ಯಾಗಡೆ, ಶಶಿ ಮುಗುಳುಕೋಡ, ಅನಿತಾ ಸುಳ್ಳನವರ, ಸುನಿಲ ಗೌರಾಣಿ, ನಾಗೇಶ ಗೌರಾಣಿ ುದ್ದರು. ಪಾಲಕ ಪೋಷಕರಿಗೆ ರಂಗೋಲಿ ಸ್ಪರ್ಧೆ ಹಾಗೂ ಇನ್ನಿತರ ಮನೋರಂಜನೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.ಸಂಗೀತ ಮುಧೋಳ ನಿರೂಪಿಸಿದರು, ಸಂಸ್ಥೆಯ ಅಧ್ಯಕ್ಷ ಆನಂದ್ ಸುಳ್ಳನವರ ಸ್ವಾಗತಿಸಿದರು, ಪ್ರಸನ್ನ ಕುಮಾರ್ ಹಿರೇಮಠ ವಂದಿಸಿದರು.

